| | | |
|---|---|---|
| 5. | V. Masiyappa, MLA | Member |
| 6. | S.R. Bommai, MLA | ,, |
| 7. | H.D. Devegowda, MLA | ,, |
| 8. | K.H. Hanumegowda, MLA | ,, |
| 9. | Bhavoo Rao Deshpande, MLA | ,, |
| 10. | M.S. Patil, MLA | ,, |
| 11. | A.G. Kodgi, MLA | ,, |
| 12. | Smt. J. Mandanna, MLC | ,, |
| 13. | M. Raghupathi, MLC | ,, |
| 14. | M. Shivanna, MLC | ,, |

MR. SPEAKER.—Now, the House stands adjourned to meet again at 3.15 P. M. today.

*The House adjourned at Thirteen minutes past Two of the Clock to meet again at Fifteen Minuites past Three of the Clock.*

(The House re-assembled at Twenty four minutes past three of the Clock)

[MR. SPEAKER. (SRI P. VENKATARAMANA) in the chair]

## Discussions and voting on Demand for Grants for 1980-81 (Demand Nos. 56, 57, 58)

SRI B. RAMAIAH (Minister for Rural Development and Panchayat Raj).—Sir, on the recommendation of the Governor, I beg to move .

"That a sum not exceeding Rs. 22,05,50,000 on Revenue Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 56. Rural water supply and Sanitation."

"That a sum not exceeding Rs, 20,39,58,000 on Revenue Account and Rs. 9,00,000 on Capital Account inclusive of the sum granted 'on account' be granted to the Government to defray the charges which will come in course of payment during the financial year ending 31st day of March 1981 in respect of Demand No. 57. - Community Development."

"That a sum not exceeding Rs, 22,58,14,000 on Revenue Account inclusive of the sum granted 'on account' be granted to the Government to defray the charges which will come in

course of payment during the financial year ending 31st day of March 1981 in respect of Demand No. 58. Integrated Rural Development Programme."

*The question was proposed*

SRI M. C. NANAIAH.—Mr. Speaker Sir, I want to know whether there is quorum on the treasury bench, which would facilitate the Minister atleast to hear. This is the interest of the members on the treasury bench. What happen is

MR. SPEAKER.—There is quorum and that is why I have come.

SRI M. VEERAPPA MOILY.—The quorum is there.

MR SPEAKER—I call Sri K. B. Mallappa to initiate the debate.

ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ತಂದಿರತಕ್ಕಂಥಾ ಈ ಬಡ್ಜೆಟ್ಟನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸದೇ ಇದ್ದರೂ ಕೂಡ ಇದರ ಬಗ್ಗೆ ಇರತಕ್ಕಂಥಾ ಕೆಲವು ಲೋಪದೋಷಗಳನ್ನು ನಾನು ಎತ್ತಿ ತೋರಿಸುವುದಕ್ಕಾಗಿ ಇದರ ಬಗ್ಗೆ ಎರಡು ಮಾತನಾಡಬೇಕೆಂದು ನಾನು ಅಭಿಪ್ರಾಯ ಪಟ್ಟುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ಈ ಪಂಚಾಯಿತಿ ರಾಜ್ಯ ಏನು ಇದೆ, ಈ ಪಂಚಾಯಿತಿ ರಾಜ್ಯದಲ್ಲಿ ಅವರವರವೇ ಪಂಚಾಯಿತಿ ರಾಜ್ಯ ಆಗುವುದಕ್ಕೆ ಪ್ರಾರಂಭವಾಗಿದೆ ಎಂದು ಹೇಳುತ್ತೇನೆ. ರಾಜ್ಯ ಸರ್ಕಾರದವರು ಈಗ ಏನು ಎಲೆಕ್ಷನ್ ನಡೆಸುತ್ತಿದ್ದಾರೆ ಇವರ ಬಗ್ಗೆ ಕೆಲವು ಲೋಪದೋಷಗಳನ್ನು ಕಂಡುಹಿಡಿಯಬೇಕಾಗಿದೆ. ಈ ಹೊತ್ತಿನ ದಿವಸ ಡೆವಲಪ್‌ಮೆಂಟಲ್ ವರ್ಕ್ಸ್ ಹಳ್ಳಿಗಾಡಿನಲ್ಲಿ ಹೆಚ್ಚು ನಡೆಯಬೇಕಾಗಿದೆ. ೧೦೦ ಕ್ಕೆ ೮೦ ರಷ್ಟು ಜನ ಇರತಕ್ಕಂಥಾ ಈ ಹಳ್ಳಿಗಾಡಿನಲ್ಲಿ ಅಲ್ಲಿಯ ಪುರೋಭಿವೃದ್ಧಿಯ ಕೆಲಸಕಾರ್ಯಗಳನ್ನು ನೋಡಿಕೊಳ್ಳತಕ್ಕಂಥಾದ್ದು ಸರ್ಕಾರದ ಒಂದು ಕರ್ತವ್ಯವಾಗಿದೆ, ಈಗ ಅಲ್ಲಿ ಹಳ್ಳಿಗಳಲ್ಲಿ ಕೆಲಸಕಾರ್ಯಗಳು ಆಗಬೇಕಾದರೆ ನಾನ್ ಅಫಿಷಿಯಲ್ ಏಜೆನ್ಸಿ ಮುಖಾಂತರ ಅದನ್ನು ಕಾರ್ಯರೂಪಕ್ಕೆ ತರತಕ್ಕಂಥಾದ್ದು ಅವರ ಒಂದು ಕರ್ತವ್ಯ ಮತ್ತು ಪಾಲಿಸಿಯಾಗಿದೆ. ಈ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಈ ಪಂಚಾಯಿತಿ ರಾಜ್ಯ ವ್ಯವಸ್ಥೆ ಪಂಚಾಯಿತಿ ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತುಗಳನ್ನು ೧೯೬೦ನೇ ಇಸವಿಯಿಂದ ಈಚೆಗೆ ಕಾರ್ಯರೂಪಕ್ಕೆ ತಂದಿದ್ದಾರೆ. ಕಮ್ಯೂನಿಟಿ ಡವೆಲಪ್‌ಮೆಂಟ್ ಬ್ಲಾಕ್ ಕೂಡ ೧೯೫೨ನೇ ಇಸವಿಯಲ್ಲಿ ಬಂದಿದೆ. ಕೆಲವು ಕಾಲ ಕಮ್ಯೂನಿಟಿ ಡೆವಲಪ್‌ಮೆಂಟ್ ವರ್ಕ್ಸ್ ಯಾವ ರೀತಿ ನಡೆಯುತ್ತಾ ಇತ್ತು ಎಂದರೆ ಕೆಲವು ಸಣ್ಣ ಪುಟ್ಟ ಕೆಲಸಗಳನ್ನು ಸರ್ಕಾರದ ವತಿಯಿಂದಲೇ ಸರ್ಕಾರೀ ಅಧಿಕಾರಿಗಳಿಂದಲೆ ಮಾಡಿಸುತ್ತಾ ಇದ್ದರು ನಾವು ನೋಡಿದ್ದೇವೆ. ಅನಂತರ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿ ಆದಮೇಲೆ ಅಲ್ಲಿಯ ಕೆಲಸಕಾರ್ಯಗಳನ್ನು ಅವರಿಗೇ ವಹಿಸಿದ ಮೇಲೆ ಅವರು ಯಾವ ರೀತಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬಂದಿದ್ದಾರೆ ಎನ್ನತಕ್ಕಂಥಾದ್ದೂ ಕೂಡ ನಾವು ರಿಪೋರ್ಟ್ ಮುಖಾಂತರ ತಿಳಿದುಕೊಂಡಿದ್ದೇವೆ. ಆದರೆ ಈ ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳು ಫಾರಂ ಆದಮೇಲೆ ಇವುಗಳಿಗೆ ಸಂಬಂಧಪಟ್ಟ ಚುನಾವಣೆಗಳನ್ನು ನಡೆಸುವ ಬಗ್ಗೆ ರಾಜ್ಯದ ಪಂಚಾಯಿತಿ ರಾಜ್ಯ ಮಂತ್ರಿವರ್ಯರವರು ಹೇಳಿರತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ಹೇಳತ್ತೇನೆ ನಾವು ಎಲೆಕ್ಷನ್ ಅನ್ನು ಪ್ರಸೆಂಟ್ ಸಿಸ್ಟಂ ಮೇಲೆ ನಡೆಸುತ್ತೇವೆ ಅಂತ ಹೇಳಿದರು. ಆ ರೀತಿ ಎಲೆಕ್ಷನ್ ಮಾಡತಕ್ಕಂಥಾದ್ದು ಸರಿಯಲ್ಲ ಎಂದು ಹೇಳುತ್ತೇನೆ. ಯಾವುದೇ ಪಂಚಾಯಿತಿ ಎಲೆಕ್ಷನ್ ಆಗಲಿ ಅಥವಾ ತಾಲ್ಲೂಕ್ ಬೋರ್ಡ್ ಎಲೆಕ್ಷನ್ ಆಗಲಿ ನಡೆಯಬೇಕಾದರೆ ನಾನ್ ಪಾರ್ಟಿಬೇಸಿಸ್‌ಮೇಲೆ ನಡೆಸಬೇಕು, ಪಂಚಾಯಿತಿ ಅಥವಾ ತಾಲ್ಲೂಕು ಬೋರ್ಡ್ ಪ್ರಸೆಂಟ್ ಸಿಸ್ಟಂ ಮೇಲೆ ನಡೆಸುವುದು ಸರಿಯಲ್ಲ. ಈ ಬಗ್ಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾಲ್ಲೂಕ್‌ಬೋರ್ಡ್ ಎಲೆಕ್ಷನ್‌ನ ಪಂಚಾಯಿತಿ ಎಲೆಕ್ಷನ್ ನಾನು ಕಂಡಿದ್ದೇನೆ. ಕೆಲವು ಪಂಚಾಯಿತಿಗಳಲ್ಲಿ ಪಾರ್ಟಿ ಬೇಸಿಸ್ ಮೇಲೆ ನಡೆಸುವುದರಿಂದ ಅವರು ತಮ್ಮ ಸಿಂಬಾಲ್ ಅನ್ನು ತೆಗೆದುಕೊಂಡು ಹೋಗಿ ವೋಟ್ ಕೇಳುವುದಕ್ಕೆ ಅನುಕೂಲವಾಗುತ್ತದೆ. ತಾಲ್ಲೂಕ್ ಬೋರ್ಡ್‌ನವರೂ ಕೂಡ ಈರೀತಿ ಎಲೆಕ್ಷನ್ ಮಾಡಿದರೆ ಅವರಿಗೂ ಸಹ ಈ ರೀತಿಯಾದ ಪೆಲ್ಯುರ್ ಸಿಕ್ಕು

ತ್ತದೆ. ಆದಕ್ಕೆ ನಾನು ಇದರ ಬಗ್ಗೆ ಈಗಾಗಲೇ ಮನವರಿಕೆ ಮಾಡಿಕೊಂಡಿದ್ದೇನೆ. ಈ ಬಗ್ಗೆ ಇದೇ ಸಭೆಯಲ್ಲಿ ಅನೇಕ ಸಲ ಚರ್ಚೆ ಮಾಡಿದ್ದೇವೆ. ಸರ್ಕಾರದವರು ಜಾರಿಗೆ ತಂದ ಸ್ಕೀಮುಗಳನ್ನು ಜಾರಿಗೆ ತರುವ ಸಂದರ್ಭದಲ್ಲಿ ಈ ತಾಲ್ಲೂಕ್ ಬೋರ್ಡುಗಳ ವತಿಯಿಂದ ಯಾವ ರೀತಿ ಅವ್ಯವಹಾರಗಳು ನಡೆದಿವೆ ಎಂಬುದರ ಬಗ್ಗೆ ಇಲ್ಲಿ ಚರ್ಚೆ ನಡೆದಾಗ ಮಾನ್ಯ ಮಂತ್ರಿಗಳು ಸಹ ತಮ್ಮ ಕಳಕಳಿ ವ್ಯಕ್ತಪಡಿಸಿದ್ದಾರೆ ಅಂದರೆ ಇದರಲ್ಲಿ ಮಂತ್ರಿಗಳೂ ಸಹ ಭಾಗಿಗಳಾಗಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ತಮ್ಮ ಪಕ್ಷದ ಅಧ್ಯಕ್ಷರು ಅಲ್ಲಿದ್ದರೆ ಇಲ್ಲವೇ ತಮ್ಮ ಪಕ್ಷದ ಸದಸ್ಯರು ಅಲ್ಲಿದ್ದರೆ, ಆಗ ಅಲ್ಲಿ ಅನ್ಯಾಯಗಳು ನಡೆಯುತ್ತಿದ್ದರೂ ಸಹ ಅದನ್ನು ತಾವು ಸಪೋರ್ಟ್ ಮಾಡುವ ಅವಶ್ಯಕತೆ ಬರುತ್ತದೆ. ಆದಕಾರಣ ನಾನ್ ಪಾರ್ಟಿ ಬೇಸಿಸ್ ಮೇಲೆ ಚುನಾವಣೆ ನಡೆಯಬೇಕೆಂದು ಹೇಳುತ್ತೇನೆ.

ಈಗ ಹೊಸದಾಗಿ ಕೆಲವು ಸ್ಕೀಮುಗಳು ಬಂದಿವೆ. ಮುಖ್ಯವಾಗಿ ಕೆಲಸಕ್ಕಾಗಿ ಕಾಳು ಯೋಜನೆ ಜಾರಿಗೆ ಬಂದಿವೆ. ಆದರೆ ಈ ಕೆಲಸಗಳು ಸರಿಯಾಗಿ ನಡೆಯದ ಕಾರಣ ಕೆಲವು ಕಡೆಗಳಲ್ಲಿ ಈಗ ಸಿ.ಒ.ಡಿ. ನವರು ಮತ್ತೆ ಕೆಲವು ಕಡೆಗಳಲ್ಲಿ ವಿಜಿಲೆನ್ಸ್ ಕಮಿಷನ್ ಅವರು ತನಿಖೆ ಮಾಡುತ್ತಿದ್ದಾರೆ. ಇಂತಹ ವಿಚಾರಗಳಲ್ಲಿ ನಾವು ಇಲ್ಲಿ ಚರ್ಚೆ ಮಾಡುವಾಗ ಕೆಲವು ಸಂದರ್ಭಗಳಲ್ಲಿ ನಮ್ಮ ನಮ್ಮಲ್ಲೇ ಚಕಮಕಿ ಆಗಿರುವುದೂ ಉಂಟು. ಈ ಬಗ್ಗೆ ನನ್ನ ಸಲಹೆ ಏನೆಂದರೆ. ಈ ಪಂಚಾಯತ್‌ರಾಜ್ ವ್ಯವಸ್ಥೆ ಸರಿಯಾಗಿ ನಡೆಯಬೇಕಾದರೆ, ನ್ಯಾಯವಾಗಿ ಹಾಗೂ ಕ್ರಮಬದ್ಧವಾಗಿ ನಡೆಯಬೇಕಾದರೆ There should not be interference between the Government and the Taluka Boards. The Taluka Boards must be independent. ಇವೊತ್ತು ಈ ಸರ್ಕಾರ ಇರಬಹುದು, ನಾಳೆ ಕಮ್ಯುನಿಸ್ಟ್ ಸರ್ಕಾರ ಬರಬಹುದು. ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ತಾಲ್ಲೂಕ್ ಬೋರ್ಡಿನವರು ಸ್ವತಂತ್ರವಾಗಿ ಕೆಲಸ ಮಾಡುವಂತಿರಬೇಕೇ ಹೊರತು. ಅವರು ಸರ್ಕಾರದ ಕೈಗೊಂಬೆಗಳಂತೆ ಇರಬಾರದೆಂದು ಹಾಗೂ ಸರ್ಕಾರದವರು ಅವರಿಗೆ ಯಾವ ರೀತಿಯ ಆಶ್ರಯ ಕೊಡಬಾರದೆಂದು ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡಿನ ಚೀಫ್–ಎಕ್ಸಿಕ್ಯುಟಿವ್ ಆಫೀಸರ್ ಸ್ವತಂತ್ರರಾಗಿರುತ್ತಾರೆ. ತಾಲ್ಲೂಕ್ ಬೋರ್ಡಿನಲ್ಲಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ ನಿರ್ಣಯ ಮಾಡಿದ ಮೇಲೆ ಆ ನಿರ್ಣಯಗಳನ್ನು ಈ ಆಫೀಸರ್ ಕಡೆಗೆ ಕಳುಹಿಸ ಬೇಕಾಗುತ್ತದೆ. ನಂತರ ಇವರು ಇಷ್ಟ ಬಂದರೆ ಆ ಕೆಲಸಗಳನ್ನು ಜಾರಿಗೆ ಕೊಡಬಹುದು ಇಲ್ಲದಿದ್ದರೆ ಆ ಅಧಿಕಾರಿ ಏನಾದರು ಹಠ ಮಾರಿಯಾದರೆ ಇಲ್ಲವೇ ಲಂಚಕೋರ ಅಧಿಕಾರಿಯಾದರೆ ಆ ಕೆಲಸಗಳನ್ನು ಜಾರಿಗೆ ಕೊಡದೆ ತಡೆಹಿಡಿಯಲು ಅಧಿಕಾರ ಇದೆ. ಈ ಪದ್ಧತಿ ಸರಿಯಲ್ಲ. ತಾಲ್ಲೂಕ್ ಬೋರ್ಡ್ ಅಟಾನಮಸ್ ಬಾಡಿ ತರಹ ಇರಬೇಕು. ಎಲ್ಲ ವಿಧವಾದ ಅಧಿಕಾರಗಳನ್ನು ಇದಕ್ಕೆ ಕೊಡಬೇಕು. ಚೀಫ್–ಎಕ್ಸಿಕ್ಯುಟಿವ್ ಅಧಿಕಾರಿ ತಾಲ್ಲೂಕ್ ಬೋರ್ಡಿನ ಕೈಕೆಳಗೆ ಕೆಲಸ ಮಾಡುವಂತಹ ಪದ್ಧತಿ ಜಾರಿಗೆ ತರಬೇಕೆಂದು ಸಲಹೆ ಮಾಡುತ್ತೇನೆ. ಈ ಪದ್ಧತಿ ಜಾರಿಗೆ ತಂದರೆ ಕೆಲವೊಂದು ಕೆಲಸಗಳನ್ನು ಮಾಡಲೇಬೇಕೆಂದು ತಾಲ್ಲೂಕ್ ಬೋರ್ಡಿನವರು ಈ ಅಧಿಕಾರಿ ಮೇಲೆ ಒತ್ತಡ ತರಬಹುದೆಂದು ತಾವು ಉತ್ತರ ಕೊಡಬಹುದು. ಅಂತಹ ಸಂದರ್ಭದಲ್ಲಿ ನನ್ನ ಸಲಹೆ ಏನೆಂದರೆ, ಇದು ಸ್ವತಂತ್ರವಾದ ಸಂಸ್ಥೆಯಾದ ಕಾರಣ ಆ ಸಂಸ್ಥೆಯವರು ಹೇಳಿದ ಕೆಲಸಗಳನ್ನು ಮಾಡಬೇಕಾಗುತ್ತದೆ ಒಂದುವೇಳೆ ಆ ಅಧಿಕಾರಿ ಅದಕ್ಕೆ ವಿರುದ್ಧವಾಗಿ ನಡೆದುಕೊಂಡರೆ, ಆ ಬಗ್ಗೆ ತಾಲ್ಲೂಕ್ ಬೋರ್ಡಿನವರು ಡಿ. ಸಿ. ಅವರಿಗಾಗಲೀ ಇಲ್ಲವೇ ಡಿವಿಜನಲ್ ಕಮೀಷನರ್ ಅವರಿಗಾಗಲೀ ಬರೆದು ತಿಳಿಸಬಹುದು. ಒಟ್ಟಿನಲ್ಲಿ ಈ ಅಧಿಕಾರಿ ತಾಲ್ಲೂಕ್ ಬೋರ್ಡಿನ ಅಧೀನದಲ್ಲಿರಬೇಕೆಂದು ಸಮರ್ಥನೆ ಮಾಡಿ ಹೇಳುತ್ತೇನೆ.

ಈಗ ಸರ್ಕಾರದವರು ತಾಲ್ಲೂಕ್ ಬೋರ್ಡಿನ ಮೂಲಕ ಕೆಲಸಕ್ಕಾಗಿ ಕಾಳು ಯೋಜನೆ ಹಾಗೂ ಉದ್ಯೋಗ ದೃಢೀಕರಣ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಗಳು ಚೆನ್ನಾಗಿವೆ. ಆದರೆ ಅಲ್ಲಿ ಸರಿಯಾಗಿ ಕೆಲಸ ಆಗುತ್ತಿದೆಯೋ ಅಥವಾ ಇಲ್ಲವೋ ಎಂದು ನೋಡಿಕೊಳ್ಳಲು ಸರಿಯಾದ ಸೂಪರ್ ವಿಜನ್ ಇಲ್ಲ. ಈಗ ಉದ್ಯೋಗ ದೃಢೀಕರಣ ಯೋಜನೆಗಾಗಿ ೫೦–೬೦ ಲಕ್ಷ ರೂ. ಗಳನ್ನು ಖರ್ಚು ಮಾಡುತ್ತಿದ್ದೀರಿ ಆದರೆ ವರ್ಷಕ್ಕೆ ೧೦೦ ದಿವಸಗಳ ಕೆಲಸವನ್ನು ಮಾತ್ರ ಕೊಡುತ್ತೀರಿ. ಇಷ್ಟು ಅಲ್ಪ ಕಾಲಾವಧಿಯಲ್ಲಿ ಎಷ್ಟು ಕೆಲಸಗಳನ್ನು ಮಾಡಲು ಸಾಧ್ಯ. ಒಂದೊಂದು ಪಂಚಾಯಿತಿಯಲ್ಲೂ ಈ ಯೋಜನೆ ಕೆಳಗೆ ಹತ್ತಾರು ಕೆಲಸಗಳನ್ನು ತೆಗೆದುಕೊಂಡರೂ ಸಹ, ಸರಿಯಾದ ಸೂಪರ್‌ವಿಜನ್ ಇಲ್ಲದ ಕಾರಣ, ಹಣ ಸರಿಯಾಗಿ ಖರ್ಚಾಗುತ್ತಿಲ್ಲವೆಂದು ಹೇಳುತ್ತೇನೆ. ಬಹಳ ದುಃಖದಿಂದ ಈ ಮಾತನ್ನು

ಹೇಳುತ್ತಿದ್ದೇನೆ. ಆದಕಾರಣ ಇನ್ನು ಮುಂದೆಯಾದರೂ ಸಹ ಈ ಕೆಲಸಗಳನ್ನು ನೋಡಿಕೊಳ್ಳಲು ಸರಿಯಾದಂಥ ಸೂಪರ್‌ವೈಜರಿ ಸ್ಟಾಫ್ ಹಾಕಬೇಕೆಂದು ಹೇಳುತ್ತೇನೆ. ಸರ್ಕಾರದವರು ಪಂಚಾಯಿತಿ ಮೂಲಕವಾಗಲೀ ಇಲ್ಲವೇ ತಾಲ್ಲೂಕ್ ಬೋರ್ಡಿನ ಮೂಲಕ ಯಾವುದೇ ಕೆಲಸ ಮಾಡಿಸಿದರೂ ಸಹ ಅದು ಒಂದು ರೆಮ್ಯುನರೇಟಿವ್ ಅಸೆಟ್ ಆಗಬೇಕು. ಈಗ ಬ್ಲೂ-ಪ್ರಿಂಟ್ ತಯಾರು ಮಾಡಿದ್ದಾರೆ. ಆದರೆ ಅದರಲ್ಲಿ ಬಹಳ ಲೋಪದೋಷಗಳಿವೆ. ಆ ಕೆಲಸ ಸೇರಿದೆ, ಈ ಕೆಲಸ ಸೇರಿದೆ ಎಂದುಕೊಂಡು ಎಲ್ಲ ರೀತಿಯ ಕೆಲಸಗಳನ್ನು ಮಾಡಿಸುತ್ತಿದ್ದಾರೆ. ಆದರೆ ಸರಿಯಾದ ಸೂಪರ್‌ವೈಜರಿ ಸ್ಟಾಫ್ ಇಲ್ಲದ ಕಾರಣ ಎಲ್ಲ ರೀತಿಯ ಅವ್ಯವಹಾರಗಳು ಅಲ್ಲಿ ನಡೆಯುತ್ತಿವೆ. ಹಾಗೂ ಲಕ್ಷಾಂತರ ರೂಪಾಯಿಗಳಷ್ಟು ಹಣ ನಷ್ಟವಾಗುತ್ತಿದೆ. ಇದನ್ನು ತಡೆಗಟ್ಟಲು ಸರಿಯಾಗಿ ಸೂಪರ್‌ವಿಜನ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಪಂಚಾಯತ್ ರಾಜ್ಯ ವ್ಯವಸ್ಥೆ ಯಾವ ರೀತಿ ಇರಬೇಕೆಂಬ ಬಗ್ಗೆ ಮೆಹತಾ ಕಮಿಟಿ ವರದಿ ಇದೆ. ಹಾಗೂ ಕೊಂಡಜ್ಜಿ ಬಸವಪ್ಪ ಕಮಿಟಿ ವರದಿ ಇದೆ. ಆದರೆ ಅದನ್ನು ಜಾರಿಗೆ ಕೊಟ್ಟಿಲ್ಲ. ಈಗ ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲಿ ಪಂಚಾಯಿತಿಗಳು ಮತ್ತು ತಾಲ್ಲೂಕ್ ಬೋರ್ಡುಗಳ ಜೊತೆಗೆ ಜಿಲ್ಲಾ ಪರಿಷತ್‌ಗಳನ್ನು ಮಾಡಿದ್ದಾರೆ ನಮ್ಮ ರಾಜ್ಯದಲ್ಲಿ ಸಹ ಏತಕ್ಕೆ ಜಿಲ್ಲಾಪರಿಷತ್‌ಗಳನ್ನು ಮಾಡಲು ಇವರು ಹೆದರುತ್ತಾರೆಂದರೆ, ಒಂದು ವೇಳೆ ಜಿಲ್ಲಾ ಪರಿಷತ್‌ಗಳನ್ನು ಮಾಡಿದರೆ, ಅದರ ಅಧ್ಯಕ್ಷ ಜಿಲ್ಲಾ ಮಟ್ಟದ ಎಲ್ಲ ಅಧಿಕಾರಗಳನ್ನು ಕೊಡಬೇಕಾಗುತ್ತದೆ, ಆಗ ಮಂತ್ರಿಗಳು ಅಪರ ಕೈಕೆಳಗೆ ಇರಬೇಕಾಗುತ್ತದೆ ತಮಗೆ ಹೆಚ್ಚಿನ ಅಧಿಕಾರ ಇರುವುದಿಲ್ಲ, ನಾಮಕಾವಾಸ್ತೆ ಮಂತ್ರಿಗಳಾಗಿರಬೇಕಾಗಿರುತ್ತದೆಂಬ ಕಾರಣದಿಂದ ಈ ರೀತಿ ಮಾಡಿರುವುದಿಲ್ಲವೆಂದು ನನಗೆ ಕಾಣುತ್ತಿದೆ. ಇದು ಸರಿಯಲ್ಲ ಈ ಕೂಡಲೇ ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಬದಲಾವಣೆ ಮಾಡಿ ಜಿಲ್ಲಾ ಪರಿಷತ್‌ಗಳನ್ನು ರಚನೆ ಮಾಡಬೇಕೆಂದು ಹೇಳುತ್ತೇನೆ. ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ತಾವೇ ಹೇಳುತ್ತಿರುವಾಗ, ಇದನ್ನು ಕಾರ್ಯರೂಪದಲ್ಲಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತೇನೆ. ಕೇವಲ ಬಾಯಿ ಮಾತಿನಲ್ಲಿ ಅಧಿಕಾರ ವಿಕೇಂದ್ರೀಕರಣವಾಗಬೇಕೆಂದು ಹೇಳುತ್ತಿರುವುದು ಸರಿಯಾದ ಮಾತಲ್ಲವೆಂದು ಹೇಳುತ್ತೇನೆ. ಅದನ್ನು ಮಾಡಿ ತೋರಿಸಿ ಎಂದು, ಈ ಸಂದರ್ಭದಲ್ಲಿ ಸರ್ಕಾರಕ್ಕೆ ತಮ್ಮ ಮುಖಾಂತರ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಷ್ಟು ಪಂಚಾಯಿತಿ ರಾಜ್ಯ ವಿಷಯದಲ್ಲಿ ಹೇಳಿದ್ದೇನೆ.

ಇನ್ನು ಮುಂದೆ ಡ್ರಿಂಕಿಂಗ್ ವಾಟರ್ ವೆಲ್ಸ್ ಬಗ್ಗೆ ಹೇಳುತ್ತೇನೆ. ಸರ್ಕಾರದವರು ೧೯೭೮ರಿಂದೀಚೆಗೆ ಮತ್ತು ಅದಕ್ಕಿಂತಲೂ ಮೊದಲು ಓಪನ್ ಡ್ರಿಂಕಿಂಗ್ ವಾಟರ್ ವೆಲ್ಸನ್ನು ತೆಗೆದಿದ್ದಾರೆ. ಗ್ರೌಂಡ್ ಲೆವೆಲ್‌ನಲ್ಲಿ ಓಪನ್ ಡ್ರಿಂಕಿಂಗ್ ವಾಟರ್ ವೆಲ್ಸ್ ತೆಗೆದರೆ ಫ್ಲೊಲ್ಯೂಡ್ ಆಗುತ್ತದೆ, ಸ್ಯಾನಿಟೇಷನ್‌ಗೆ ಸರಿಹೋಗುವುದಿಲ್ಲ ಎಂದು ಎನ್.ಆರ್.ಡಬ್ಲ್ಯು. ಸ್ಕೀಮಿನಲ್ಲಿ ಬೋರ್‌ವೆಲ್ಸನ್ನು ಜಾಸ್ತಿ ಮಾಡುವುದಕ್ಕೆ ಹೊರಟಿದ್ದಾರೆ. ಬೋರ್‌ವೆಲ್ಸ್ ವಿಚಾರ ಹೇಳುವುದಾದರೆ, ಸುಮಾರು ಹಳ್ಳಿಗಳಲ್ಲಿ ಒಂದೆರಡು ಬೋರ್‌ವೆಲ್‌ಗಳನ್ನು ತೆಗೆದಿದ್ದಾರೆ. ಅದರ ಗತಿ ಇವತ್ತು ಏನಾಗಿದೆಯೆಂದು ನೋಡೋಣ. ಹಿಂದೆ ತಾಲೂಕು ಬೋರ್ಡ್‌ಗೆ. ಚೀಫ್ ಎಗ್ಸಿಕ್ಯೂಟೀವ್ ಆಫೀಸರಿಗೆ ಆ ಕೆಲಸವನ್ನು ಎಂಟರೆಸ್ಟ್ ಮಾಡಿದಿರಿ. ಇವತ್ತು ಬೋರ್‌ವೆಲ್ಸ್ ಸ್ಥಿತಿ ಏನಾಗಿದೆಯೆಂದರೆ, ಬೋರ್‌ವೆಲ್ಸ್‌ಗಳನ್ನು ಎಲ್ಲಾ ತಾಲೂಕುಗಳಲ್ಲಿ ತೆಗೆದಿದ್ದೀರಿ, ಸಾವಿರಾರು ಬೋರ್‌ವೆಲ್‌ಗಳನ್ನು ತೆಗೆದಿದ್ದೀರಿ ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಆದರೂ ಮೆಜಾರಿಟಿ ಬೋರ್‌ವೆಲ್ಸ್ ಔಟ್ ಆಫ್ ಆರ್ಡರ್ ಆಗಿವೆ. ನಮ್ಮ ಕಡೆ ಎರಡು ಬೋರ್‌ವೆಲ್‌ಗಳನ್ನು ತೆಗೆದಿದ್ದೀರಿ, ನೀರಿಲ್ಲ. ಅದಕ್ಕೆ ಟೋಪಿ ಹಾಕಿದ್ದಾರೆ. ಬೋರ್‌ವೆಲ್ ವಿಚಾರವಾಗಿ ನಾನು ಕಳೆದ ವರ್ಷದ ಅಧಿವೇಶನದಲ್ಲಿ ಕಾಲ್ ಅಟೆನ್‌ಷನ್ ನೋಟಿಸ್ ಕೊಟ್ಟು ಕೇಳಿದ್ದೇನೆ ಸುಮಾರು ಬೋರ್‌ವೆಲ್ಸ್‌ಗಳು ಔಟ್ ಆಫ್ ಆರ್ಡರ್ ಆಗಿವೆ ಇವತ್ತಿನ ದಿವಸ ಅವನ್ನು ತಾಲೂಕ್ ಬೋರ್ಡ್‌ನವರಿಗೆ ಎಂಟರೆಸ್ಟ್ ಮಾಡಿದಿರಿ ಈಗ ಬೋರ್‌ವೆಲ್ ಅಂಡ್ ರೂರಲ್ ಎನ್ ಆರ್.ಡಬ್ಲ್ಯೂ. ಸ್ಕೀಂ ಪಿ.ಎಚ್.ಇ. ಡಿಪಾರ್ಟ್‌ಮೆಂಟಿಗೆ ಸೇರಿದೆ. ಓಪನ್ ವೆಲ್ ಮಾತ್ರ ತಾಲೂಕ್ ಬೋರ್ಡಿಗೆ ಸೇರಿದೆ. ಪಿ.ಎಚ್.ಇ. ಸ್ಟಾಫ್‌ಗೆ ವ್ಯಾನ್ ಕೊಟ್ಟಿದ್ದಾರೆ, ಅವರು ಹಳ್ಳಿಗಾಡಿನಲ್ಲಿ ತಿರುಗಿ ಬಾವಿಗಳನ್ನು ಸರಿ ಮಾಡಿಸಬೇಕು ಎನ್ನತಕ್ಕಂಥ ಪ್ರೋಗ್ರಾಮವನ್ನು ಇಟ್ಟುಕೊಂಡಿದ್ದಾರೆ. ಆದರೆ ಹಳ್ಳಿಯಲ್ಲಿ ಬೋರ್‌ವೆಲ್ ಕೆಟ್ಟು ಹೋದರೆ ಸರಿಮಾಡಬೇಕು ಅಂದರೆ ಚೀಫ್ ಎಗ್ಸಿಕ್ಯೂಟಿವ್ ಆಫೀಸರ್ ಬರಬೇಕು ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ನಾವಲ್ಲ ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರು ಮಾಡು

ತ್ತಾರೆ ಎಂದು ಹೇಳುತ್ತಾರೆ, ಇಂಜನಿಯರಿಂಗ್ ಡಿಪಾರ್ಟ್‌ಮೆಂಟಿನವರು ಹೋಗಬೇಕಾದರೆ ಒಂದು ತಿಂಗಳಾಗುತ್ತದೆ. ಹಳ್ಳಿಯವರು ಇವರು ನಾಳೆ ಬರುತ್ತಾರೆ, ನಾಡಿದ್ದು ಬರುತ್ತಾರೆ ಎಂದು ಇರುತ್ತಾರೆ ಬೋರ್‌ವೆಲ್ಸ್ ಸ್ಥಿತಿ ಹೀಗಾಗಿದೆ. ಆದುದರಿಂದ ಪಂಚಾಯಿತ ರಾಜ್ಯ ಮಂತ್ರಿಗಳು ಇದರ ಬಗ್ಗೆ ಬೇಗಾ ತೆಗೆದುಕೊಂಡು ಕೆಲಸ ಮಾಡಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೭೮ನೇ ಇಸವಿಯ ಬಜೆಟ್ ಅಧಿವೇಶನ ಪ್ರಾರಂಭದಲ್ಲಿ ಮಾನ್ಯ ರಾಜ್ಯಪಾಲರು ಭಾಷಣ ಮಾಡುತ್ತಾ, ನಮ್ಮ ರಾಜ್ಯದ ಯಾವ ಹಳ್ಳಿಯಲ್ಲೂ ನೀರು ಇಲ್ಲ ಎಂದು ಹೇಳಕೂಡದು, ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರನ್ನು ಸರಬರಾಜು ಮಾಡುತ್ತೇವೆ ಎಂದು ಹೇಳಿದ್ದಾರೆ. ಅದನ್ನು ಓದುತ್ತೇನೆ.

> "My Government has paid special attention to the drinking water supply problems of the rural population. A massive programme of borewells was taken up during 1976-77 and 1977-78 and about 14.463 borewells were drilled during these two years at a total cost of Rs. 1091 lakhs and 11,867 borewells are reported to be successful. 1,098 piped water supply schemes have been completed so far. At the present rate of progress we hope that all the villages in the State will be provided with protected water supply by March 1979."

ಮಾನ್ಯ ರಾಜ್ಯಪಾಲರು ಭಾಷಣ ಮಾಡುವಾಗ ೧೯೭೯ನೇ ಇಸವಿಗೆ ಎಲ್ಲಾ ಹಳ್ಳಿಗಳಿಗೂ ಕೂಡ ಕುಡಿಯುವ ನೀರನ್ನು ಸಪ್ಲೈ ಮಾಡುತ್ತೇವೆ ಎಂದು ಹೇಳಿದರು. ಆದರೆ ಇವತ್ತಿನ ರಿಪೋರ್ಟ್ ಪ್ರಕಾರವಾಗಿ ಸುಮಾರು ೮೧೦೩ ಹಳ್ಳಿಗಳಲ್ಲಿ ಯಾವ ಅನುಕೂಲತೆಯೂ ಇಲ್ಲದೆ ಇದೆ, ಇಂತಹ ಸಂದರ್ಭದಲ್ಲಿ ಇನ್ನೆಷ್ಟು ದಿವಸಗಳಲ್ಲಿ ಕುಡಿಯುವ ನೀರನ್ನು ಎಲ್ಲಾ ಹಳ್ಳಿಗಳಿಗೂ ಕೊಡುತ್ತೀರಿ ಎಂದು ನನಗೆ ಅನುಮಾನವಾಗಿದೆ ನಿಮ್ಮ ರಿಪೋರ್ಟ್ ಪ್ರಕಾರವಾಗಿ ೧೨೬ ಹಳ್ಳಿಗಳಲ್ಲಿ ಕುಡಿಯುವ ನೀರಿನ ಭಾವಿಗಳನ್ನು ತೆಗೆದಿದ್ದೀರಿ. ಆದರೆ ಈ ವರ್ಷದಲ್ಲಿ ಅಂದರೆ ೧೯೭೮-೭೯ರಲ್ಲಿ ಕೇವಲ ೧೦೦ ಬಾವಿಗಳನ್ನು ಕಂಪ್ಲೀಟ್ ಮಾಡಿದ್ದೀರಿ. ಹೀಗೆ ಮಾಡಿದರೆ ಅಂದರೆ ವರ್ಷಕ್ಕೆ ೧೦೦ ಹಳ್ಳಿಗಳಲ್ಲಿ ಬಾವಿಗಳನ್ನು ಏನು ತೆಗೆದಿದ್ದೀರಿ ಇದೇ ಪ್ರಮಾಣವಲ್ಲಿ ಹೋದರೆ ನಮ್ಮ ರಾಜ್ಯದ ಎಲ್ಲಾ ಹಳ್ಳಿಗಳಿಗೂ ನೀರನ್ನು ಕೊಡಬೇಕಾದರೆ ೮೦ ವರ್ಷ ಬೇಕಾಗುತ್ತದೆ. ಆದ್ದರಿಂದ ದಯಮಾಡಿ ಇದರ ಬಗ್ಗೆ ಸ್ಪೆಷಲ್ ಅಟೆನ್‌ಷನ್ ಕೊಟ್ಟು ಹಳ್ಳಿಯವರಿಗೆ ಏನು ಕೊಡುವುದಕ್ಕೆ ಆಗದೇ ಹೋದರೂ ಕೂಡ ನೀರನ್ನಾದರೂ ಕೊಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ನಾನು ಈ ಸದನಕ್ಕೆ ಬಂದು ಎರಡು ವರ್ಷಗಳಾಯಿತು. ಎರಡು ವರ್ಷಗಳಿಂದಲೂ ಕೂಡ ನಾನು ಈ ಸದನದಲ್ಲಿ ಎಲ್ಲೂ ಎದ್ದು ಹೋಗದೆ ವಾಚ್ ಮಾಡಿದ್ದೇನೆ. ಚರ್ಚೆಯಲ್ಲಿ ಪಾರ್ಟಿಸಿಪೇಟ್ ಮಾಡಿರತಕ್ಕ ಸ್ನೇಹಿತರು ಮಾತನಾಡಿರತಕ್ಕದ್ದನ್ನು ನೋಡಿದ್ದೇನೆ, ಹೆಚ್ಚಿನದಾಗಿ ನೂರಕ್ಕೆ ೨೦ ಜನ ಇರತಕ್ಕ ದೊಡ್ಡ ದೊಡ್ಡ ಟೌನ್‌ಗಳಲ್ಲಿ, ಸಿಟಿಗಳಲ್ಲಿ ನೀರು ಇಲ್ಲ ಎಂದು ಹೇಳುವುದರಲ್ಲೇ ಸದನದ ಹೆಚ್ಚಿನ ಕಾಲವನ್ನು ಕಳೆದಿದ್ದಾರೆ. ಮಾನ್ಯ ರಾಮದೇವ್ ಅವರು ಬೆಂಗಳೂರು ನಗರದಲ್ಲಿ ನೀರು ಇಲ್ಲ ಎಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟರು, ಪ್ರತಿಯೊಂದು ಕೂಡ Major portion of the budget is going to these cities and towns or big urban areas, ಹೀಗಾಗಿ ೧೦೦ಕ್ಕೆ ೮೦ ಜನ ಹಳ್ಳಿಗಾಡಿನಲ್ಲಿ ಏನಿದ್ದಾರೆ ಅವರ ಬಗ್ಗೆ ಸರ್ಕಾರ ಲಿಪ್‌ಸಿಂಪತಿ ತೋರಿಸಿ ಸುಮ್ಮನೆ ಏನೋ ಒಂದಿಷ್ಟು ಮಾಡಿಬಿಟ್ಟರೆ ಅನುಕೂಲವಾಗುತ್ತದೆ ಎಂದು ತಿಳಿದುಕೊಂಡಿದ್ದಾರೆ ನನಗೆ ಒಂದು ಸಂತೋಷವಾಯಿತು. ಮಾನ್ಯ ಸದಸ್ಯರು ಭಾಷಣ ಮಾಡುತ್ತಾ ಅರ್ಬನ್ ವಾಟರ್ ಸಪ್ಲೈ ವಿಚಾರದಲ್ಲಿ ಹೇಳಿದರು. ಬೆಂಗಳೂರು ನಗರದಲ್ಲಿ ಈಗ ೨೦ ಲಕ್ಷ ಜನಸಂಖ್ಯೆ ಇದ್ದು ೩೦ ಲಕ್ಷ ಜನಸಂಖ್ಯೆಯಾಗುವ ಹೊತ್ತಿಗೆ ಪುನ: ೧೨೦ ಕೋಟಿ ರೂಪಾಯಿಯ ಯೋಜನೆಯನ್ನು ತಯಾರು ಮಾಡಿ ಇಟ್ಟಿದ್ದೇವೆ ; ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನನಗೆ ಹೊಟ್ಟೆ ಉರಿ ಇಲ್ಲ ನಗರಗಳಿಗೆ ಏನು ಬೇಕಾದರೂ ಮಾಡಲಿ. ಮೈಸೂರಿನಲ್ಲಿ ಮಾಡಲಿ. ಧಾರವಾಡದಲ್ಲಿ ಮಾಡಲಿ, ಬಳ್ಳಾರಿಯಲ್ಲಿ

ಮಾಡಲಿ, ನನಗೆ ಹೊಟ್ಟೆ ಉರಿ ಇಲ್ಲ. ಆದರೆ ನಮ್ಮ ಹಳ್ಳಿಯ ಜನರ ಬಗ್ಗೆ ಗಮನ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ೧೦೦ಕ್ಕೆ ೮೦ರಷ್ಟು ವಾಸ ಮಾಡುವ ಹಳ್ಳಿಯ ಕಡೆಗೆ ಸರ್ಕಾರ ಮುತುವರ್ಜಿ ವಹಿಸಲಿ, ನಿಗಾ ಕೊಡಲಿ ಎಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಹಳ್ಳಿ ಜನರು ಬಂದು ಕೇಳುವ ಶಕ್ತಿ ಅವರಿಗಿಲ್ಲ. ಇಲ್ಲಿ ಬಂದು ಕೂಗಾಟ ಮಾಡಿ ನಗರದಲ್ಲಿರುವವರು ಕೆಲಸಗಳನ್ನು ಮಾಡಿಸಿಕೊಳ್ಳುತ್ತಾರೆ ಆದ್ದರಿಂದ ಬರೀ ಈ ಕಡೆ ಮಾತ್ರ ಗಮನ ಕೊಟ್ಟರೆ ಸಾಲದು, ಸ್ವಲ್ಪ ದಿವಸ ನಗರದಕಡೆ ಗಮನ ಕೊಡುವುದಕ್ಕೆ ಬದಲು ಹಳಿ ಕಡೆ ಗಮನ ಕೊಡಿ. ಶೇಕಡ ೮೦ರಷ್ಟು ವಾಸ ಮಾಡುತ್ತಿರುವ ಹಳ್ಳಿಯ ಜನರನ್ನು, ಬಡತನದ ರೇಖೆಯ ಕೆಳಗೆ ಜೀವನ ಮಾಡುತ್ತಿರುವವರನ್ನು ಮೇಲಕ್ಕೆ ಎತ್ತಬೇಕೆಂದು ಸರ್ಕಾರದವರಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಇದರಲ್ಲಿ ೧೯೭೮ ಬಾವಿಗಳನ್ನು ಸ್ಯಾಂಕ್ಷನ್ ಮಾಡಿದ್ದು ಎಲ್ಲಾ ಕಡೆ ನೀರು ಕುಡಿಯುತ್ತಿದ್ದಾರೆ ಎಂಬ ಅಭಿಪ್ರಾಯ ಇದೆ. ನೀರು ಕುಡಿಯಲಿ, ಸಂತೋಷ. ಇದರ ಮೈಟೆನೆನ್ಸ್ ಎಲ್ಲಾ ಪಂಚಾಯಿತಿಯವರು ನೋಡಬೇಕು ಎಂದು ಹೇಳುತ್ತೀರಿ. ಅವರಿಗೆ ಇದನ್ನು ಮೈಂಟೆನ್ ಮಾಡುವುದಕ್ಕೆ ಆಗುವುದಿಲ್ಲ. ಪಂಚಾಯಿತಿ ಸೆಕ್ರೆಟರಿ ಎಂದು ಇಟ್ಟಿದ್ದೀರಿ. ಅವನು ಯಾರ ಮಾತನ್ನೂ ಕೇಳುವುದಿಲ್ಲ. ಪಂಚಾಯಿತಿ ಛೇರ್ಮನ್ ಮಾತೂ ಕೇಳುವುದಿಲ್ಲ, ತಾಲ್ಲೂಕ್ ಬೋರ್ಡ್ ಅಧ್ಯಕ್ಷನ ಮಾತನ್ನೂ ಕೇಳುವುದಿಲ್ಲ. ತಹಸೀಲ್ದಾರ್‌ರವರು ಇವನ ಸಂಬಳ ಡ್ರಾ ಮಾಡಿಕೊಡುತ್ತಾರೆ. ಮೀಟಿಂಗ್ ಕರೆಯಿರಿ ಎಂದು ಹೇಳಿದರೆ ಪಂಚಾಯಿತಿ ಮೀಟಿಂಗ್ ಕರೆಯುವುದಿಲ್ಲ. ನನಗೆ ಬೇಕಾದಾಗ ಕರೆಯುತ್ತೇನೆ ಎಂದು ಹೇಳುತ್ತಾರೆ. ಪಂಚಾಯಿತಿಗಳಲ್ಲಿ ಕಲೆಕ್ಷನ್ ಸರಿಯಾಗಿ ಆಗುತ್ತಿಲ್ಲ. ಆದ್ದರಿಂದ ನಾನು ಹೇಳುತ್ತೇನೆ, ಎನ್. ಆರ್. ಡಬ್ಲ್ಯೂ. ಯೋಜನೆ ಏನಿದೆ ಅದನ್ನು ಸರ್ಕಾರದವರೇ ನೇರವಾಗಿ ತೆಗೆದುಕೊಂಡು ಹಳ್ಳಿಗಾಡಿನ ಜನರಿಗೆ ಸಹಾಯ ಮಾಡಬೇಕು. ಪಂಚಾಯಿತಿಗಳಿಗೆ ವಹಿಸಿದರೆ ಏನೂ ಪ್ರಯೋಜನವಾಗುವುದಿಲ್ಲ. ಗ್ರಾಮೀಣ ಅಭಿವೃದ್ಧಿಯಲ್ಲಿ Spill over worksಗೆ ಹೋದ ವರ್ಷ ೪೩ ಲಕ್ಷ ರೂಪಾಯಿ ಕೊಟ್ಟಿದ್ದರೆ ಈ ವರ್ಷ ೨೫ ಲಕ್ಷ ರೂಪಾಯಿ ಕೊಟ್ಟಿದ್ದೀರಿ. Educat on; Agriculture; Health and Sanitation; Roads; Training of Block Accountants and Panchayat Secretaries; Publication of Karnataka Vikasa Journal; Loans to Village Panehayats for creation of remunerative assets; Loans to Cultivators; Promotion and strengthening of Mahila Mandalis Training of Associate women workers; Incentive awards to Mahila Mandals; Guana Mandirs and Sammelans for non-offici ls-these 13 items. ಇದಕ್ಕೆಲ್ಲಾ ಸೇರಿ ಹಣ ಕೊಟ್ಟಿದ್ದೀರಿ, ೧೭೫ ತಾಲ್ಲೂಕು ಬೋರ್ಡುಗಳಿಗೆ ಇದನ್ನು ಕೊಟ್ಟಿದ್ದೀರಿ. ಆದರೆ ಒಂದೊಂದು ತಾಲ್ಲೂಕು ಬೋರ್ಡಿಗೆ ಎಷ್ಟು ಹಣ ಆಯಿತು ಎಂಬುದನ್ನು ಲೆಕ್ಕ ಹಾಕಿ. ಈ ಹಣದಲ್ಲಿ ತಾಲ್ಲೂಕು ಬೋರ್ಡಿನವರು ಏನು ಕೆಲಸ ಮಾಡುವುದಕ್ಕಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಾದ ಬೇಗಾನೆ ರಾಮಯ್ಯನವರು ಮಾನ್ಯ ಅರ್ಥ ಮಂತ್ರಿಗಳ ಹತ್ತಿರ ಕುಳಿತುಕೊಂಡು ಚರ್ಚೆ ಮಾಡಿ ಇನ್ನೂ ಹೆಚ್ಚು ಹಣವನ್ನು ತೆಗೆದುಕೊಂಡು ಎಲ್ಲಾ ತಾಲ್ಲೂಕು ಬೋರ್ಡುಗಳಿಗೂ ಹೆಚ್ಚು ಹಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತೇನೆ. Then I will come to Integrated Rural Development Scheme, ಇದರಲ್ಲಿ ಸಿ.ಡಿ. ಪ್ರೋಗ್ರಾಂಸ್ ಎಲ್ಲಾ ಸೇರಿಸಿ ಎಲ್ಲವನ್ನೂ ಉದ್ಧಾರ ಮಾಡಬೇಕು ಎಂಬ ಉದ್ದೇಶದಿಂದ ಈ ಸ್ಕೀಮನ್ನು ತಂದಿದ್ದೀರಿ. Agriculture, Roads, Fisheries, ಎಲ್ಲಾ ವಿಧವಾದ ಕಾರ್ಯಕ್ರಮಗಳನ್ನೂ ಇದರಲ್ಲಿ ಅಳವಡಿಸಿ ಒಂದು Integrated Rural Development Programme ಮಾಡಿದ್ದೀರಿ. ಐದು ಎಕರೆಗಿಂತ ಕಡಿಮೆ ಜಮೀನಿರುವವರು, ಎರಡೂವರೆ ಎಕರೆಗಿಂತ ಕಡಿಮೆ ಜಮೀನಿರುವವರು Small farmers and marginal farmers and Agricultural labourers ಎಂದು ಮಾಡಿದ್ದೀರಿ. ಇದನ್ನೆಲ್ಲಾ ಯಾರು ಮಾಡುವವರು ? Who is to identify ? There are so many people not idetified in the villages. ಇದನ್ನು ನೋಡುವುದಕ್ಕೆ ಯಾರೋ ಒಬ್ಬ ಗ್ರಾಮಸೇವಕನಿಗೆ ವಹಿಸುತ್ತೀರಿ. ಅವನು ಈ ಕೆಲಸ ಮಾಡಬೇಕು. ಅಥವಾ ವಿಲೇಜ್ ಅಕೌಂಟೆಂಟ್, ಪಂಚಾಯಿತಿ

ಸೆಕ್ರೆಟರಿ ಮಾಡಬೇಕು. ಅವರು ಯಾರೂ ಈ ಕೆಲಸವನ್ನು ಮಾಡುತ್ತಿಲ್ಲ. 100 families Agricultural labourers, 100 families marginal farmeas, Small farmers ಎಂದು ಏನು ಇಟ್ಟುಕೊಂಡಿದ್ದೀರಿ ಅವೆಲ್ಲಾ ತಪ್ಪು. It is afalse list. ಇದರ ಬಗ್ಗೆ ನನಗಂತೂ ಅನುಮಾನವಿದೆ. ಇವತ್ತಿನ ದಿವಸ ಸ್ಲಂಗಳು ಎಂದು ಹೇಳುತ್ತಾರೆ. ಬೆಂಗಳೂರಿನಲ್ಲಿ ಮೈಸೂರಿನಲ್ಲಿ ಇವು ಜಾಸ್ತಿ ಇವೆ. ಹೊರಗಡೆಯಿಂದ ಬಂದವರು ಇಲ್ಲಿ ಕೊಳಚೆ ಪ್ರದೇಶಗಳನ್ನು ಸೃಷ್ಟಿ ಮಾಡುತ್ತಾರೆ. ನಮ್ಮ ಕರ್ನಾಟಕದಲ್ಲಿ ಪ್ರತಿಯೊಂದು ಹಳ್ಳಿಯೂ ಸ್ಲಂ ಆಗಿದೆ. ಕೊಳಚೆ ಪ್ರದೇಶದಲ್ಲಿ ಮಹಡಿ ಕಟ್ಟಿ, ಮಲ್ಟಿ-ಸ್ಟೋರೀಡ್ ಬಿಲ್ಡಿಂಗ್ ಕಟ್ಟಿ ಕೊಟ್ಟರೆ ಸ್ಲಂ ಕ್ಲಿಯರೆನ್ಸ್ ಮಾಡಿದಂತಾಗುತ್ತದೆಂದು ಹೇಳಿದ್ದೀರಿ. ಆದರೆ ಇವತ್ತು ೨೬,೮೦೦ ಹಳ್ಳಿಗಳು ನಮ್ಮ ರಾಜ್ಯದಲ್ಲಿ ಏನಿವೆ ಅದರಲ್ಲಿ ೯೦ ಭಾಗ ಹಳ್ಳಿಗಳು ಸ್ಲಂ ಏರಿಯಾಗಿಂತ ಕಡೆಯಾಗಿವೆ. ಇದನ್ನೆಲ್ಲಾ ಏತಕ್ಕೆ ಹೇಳುತ್ತಿದ್ದೇನೆಂದರೆ ಪಟ್ಟಣಗಳಲ್ಲಿ ಸ್ಲಂ ಉದ್ಭವವಾದ ತಕ್ಷಣ ಅವರಿಗೆ ಮನೆ ಕಟ್ಟಿಕೊಡುವುದು, ನೀರಿನ ಸೌಕರ್ಯ ಕೊಡುವುದು, ದೀಪದ ಸೌಕರ್ಯ ಕೊಡುವುದು, ರಸ್ತೆ ಸೌಕರ್ಯ ಕೊಡುವುದು ಎಲ್ಲಾ ಮಾಡುತ್ತೀರಿ. ಆದರೆ ಹಳ್ಳಿಗಳಲ್ಲಿ ಸ್ಲಂ ತರಹವೇ ಇದ್ದರೂ ಅವರಿಗೆ ಏನು ಸೌಲಭ್ಯ ಮಾಡಿಕೊಟ್ಟಿದ್ದೀರಿ ? ರಸ್ತೆ ಇಲ್ಲ, ದೀಪ ಇಲ್ಲ, ಯಾವ ಸೌಕರ್ಯಗಳೂ ಹಳ್ಳಿಯವರಿಗಿಲ್ಲ. ಆದರೆ ಬೇರೆ ಬೇರೆ ಕಡೆಗಳಿಂದ ಬಂದು ನಗರಗಳಲ್ಲಿ ಸ್ಲಂಗಳನ್ನು ಕಟ್ಟಿಕೊಂಡರೆ ಅವರಿಗೆ ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಡುತ್ತೀರಿ. ಏನಿದು ? ಇದನ್ನು ಆಳವಾಗಿ ಯೋಚನೆ ಮಾಡಿ ಅನುಕೂಲ ಮಾಡಿಕೊಡದೇ ಸುಮ್ಮನೆ ಹಳ್ಳಿಯವರನ್ನು ಉದ್ಧಾರ ಮಾಡುತ್ತೇವೆ ಎಂದರೆ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಹಳ್ಳಿಯವರ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡಿದರು. ರೈತರು ಬೆಳೆದ ಧಾನ್ಯಗಳಿಗೆ ಒಂದು ಕ್ವಿಂಟಾಲ್‌ಗೆ ೨೦ ರೂಪಾಯಿ, ೨೫ ರೂಪಾಯಿ ಹೆಚ್ಚಿಗೆ ಕೊಟ್ಟರೆ ಮಾತ್ರ ಸಾಲುವುದಿಲ್ಲ, ಅವರು ಉದ್ಧಾರವಾಗಬೇಕಾದರೆ ಅವರ ಅವಶ್ಯಕತೆಗಳೇನಿವೆ ಅದನ್ನು ದೊರಕಿಸಿಕೊಡಬೇಕು, ಹಳ್ಳಿಯವರು ಬೆಳೆಯುತಕ್ಕ ದಿನಸಿಯನ್ನು ಸರಿಯಾದ ರೀತಿಯಲ್ಲಿ ಸ್ಟೋರೇಜ್ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಹಳ್ಳಿಯವರು ಬೆಳೆ ಬೆಳೆದರೂ ಅವರಿಗೆ ಹೆಚ್ಚು ಸೌಲಭ್ಯಗಳು ಹೋಗುತ್ತಿಲ್ಲ. ಕೆಲವು ಸಂದರ್ಭಗಳಲ್ಲಿ ಮಕ್ಕಳ ಮದುವೆ ಮಾಡಬೇಕಾಗುತ್ತದೆ, ಹಬ್ಬ ಹರಿದಿನಗಳು ಬರುತ್ತದೆ, ಆಗ ವ್ಯಾಪಾರಸ್ಥರಿಗೆ ದಿನಸಿ ಕೊಟ್ಟು ಅವತ್ತಿನ ಕಷ್ಟವನ್ನು ನಿವಾರಿಸಿಕೊಳ್ಳುತ್ತಾರೆ.

(ಶ್ರೀ ಮುನಿರಾಜು ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.)

೪-೦೦ ಪಿ. ಎಂ.

ಆದರೆ ಅವನ ಕಷ್ಟಕ್ಕೆ ದುಡ್ಡು ಕೊಡಬೇಕಾದರೆ, ಅವನ ಬೆಳೆಗಳಿಗೆ ಒಳ್ಳೆಯ ಬೆಲೆಯನ್ನು ಕೊಡಬೇಕಾದರೆ, ಸರ್ಕಾರದವರು ಒಂದು ಸರಿಯಾದ ವ್ಯವಸ್ಥೆಯನ್ನು ಮಾಡಬೇಕು. ರೈತ ಬೆಳೆದ ಆಹಾರಧಾನ್ಯಗಳನ್ನು ಸ್ಟೋರೇಜ್ ಮಾಡಲು ಅನುಕೂಲ ಮಾಡಿಕೊಡಬೇಕು. ಅಲ್ಲದೆ ಸೊಸೈಟಿಗಳ ವಿಚಾರದಲ್ಲಿ ನೀವು ಮುಂದೆ ಬರಬೇಕು. ಇದರಿಂದ ರೈತರು ಬದುಕುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲಿ ವಯಬಲ್ ಸೊಸೈಟಿಗಳೆಂದು ಹೇಳಿದ್ದೀರಿ. ರೈತರು ೪-೫ ಮೈಲಿಗಳವರೆಗೂ ಹೋಗಿ ಅಲ್ಲಿಂದ ತಮಗೆ ಬೇಕಾದ ಸಾಮಾನುಗಳನ್ನು ತೆಗದುಕೊಂಡು ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಒಂದೊಂದು ಊರಿಗೆ ಒಂದೊಂದು ಪಂಚಾಯಿತಿಗೆ ಒಂದೊಂದು ಸೊಸೈಟಿ ಎಂದು ಮಾಡಿ ಅಲ್ಲಿ ಸ್ಟೋರೇಜ್ ಕಟ್ಟಿಕೊಡತಕ್ಕ ವ್ಯವಸ್ಥೆ ಮಾಡಿ ಒಳ್ಳೆಯ ಬೆಲೆಯನ್ನು ಕೊಡಿ. ಈ ರೀತಿ ಮಾಡಿ ಎಂದು ನಾನು ಅನೇಕ ಸಾರಿ ಹೇಳಿದ್ದೇನೆ. ಆದರೆ ಅದನ್ನು ನೀವು ಅಷ್ಟಾಗಿ ಗಮನಿಸಿಲ್ಲ. ಆದರೆ, ಇವತ್ತು ನೀವು ಏನು ಮಾಡಿದ್ದೀರಿ ಎಂದರೆ ಒಳ್ಳೆಯ ಸೊಸೈಟಿಗಳನ್ನು ಕೆಟ್ಟ ಸೊಸೈಟಿಗಳಿಗೆ ಸೇರಿಸಿದ್ದೀರಿ. ಅದೇ ರೀತಿ ಕೆಟ್ಟ ಸೊಸೈಟಿಗಳನ್ನು ಒಳ್ಳೆಯ ಸೊಸೈಟಿಗಳ ಜೊತೆಗೆ ಸೇರಿಸಿದ್ದೀರಿ. ಇದರಿಂದ ಏನಾಗಿದೆ ಎಂದರೆ ಎಲ್ಲ ಸೊಸೈಟಿಗಳೂ ಕೆಟ್ಟು ಹೋಗಿವೆ. ಇವು ಯಾವ ರೈತರಿಗೂ ಸಕಾಲದಲ್ಲಿ ಬಿತ್ತನೆ ಬೀಜವನ್ನಾಗಲಿ, ಗೊಬ್ಬರವನ್ನಾಗಲಿ ಕೊಟ್ಟಿಲ್ಲ. ಆದ್ದರಿಂದ ನಾನು ಸರ್ಕಾರದವರನ್ನು ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುವುದು ಏನೆಂದರೆ, ಪ್ರತಿ ಪಂಚಾಯ್ತಿ ಅಥವಾ ಹೆಡ್‌ಕ್ವಾರ್ಟರ್ಸ್‌ನಲ್ಲಿ ಒಂದೊಂದು ಸೊಸೈಟಿ ಇರಲಿ ಅದನ್ನು ಯಾವುದಕ್ಕೂ ಮರ್ಜ್ ಮಾಡಬೇಡಿ. ಒಂದುವೇಳೆ ಅಮಾಲ್ಗಮೇಟ್ ಮಾಡಿದ್ದರೆ ಅದನ್ನು ಪುನ: ಓಪನ್ ಮಾಡಿ.

ಇನ್ನು ರಸ್ತೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೨೮-೨೯ ಸಾವಿರ ಕಿಲೋಮೀಟರ್ ರಸ್ತೆ ಇರಬಹುದು. ಇವರಲ್ಲಿ ಟೇಕನ್ ಓವರ್ ರಸ್ತೆಗಳಾಗಲಿ, ಪಂಚಾಯಿತಿ ರಸ್ತೆಗಳಾಗಲಿ ಅಥವಾ ಹಳ್ಳಿಗಾಡಿನ ರಸ್ತೆಗಳಾಗಲಿ ಯಾವುದೂ ಕೂಡ ಚೆನ್ನಾಗಿಲ್ಲ,

ಯಾವ ವಾಹನಗಳೂ ಸುಗಮವಾಗಿ ಓಡಾಡಲು ಸಾಧ್ಯವಾಗುವುದಿಲ್ಲ. ಈ ರಸ್ತೆಗಳನ್ನು ರಿಪೇರಿ ಮಾಡಿಸಿ ಎಂದು ನಾವು ಲೋಕೋಪಯೋಗಿ ಇಲಾಖೆಯವರನ್ನು ಕೇಳಿದರೆ ನಮ್ಮಲ್ಲಿ ದುಡ್ಡಿಲ್ಲವೆಂದು ಅವರು ಹೇಳುತ್ತಾರೆ. ಇವತ್ತು ಟೇಕನ್ ಓವರ್ ರಸ್ತೆಗಳನ್ನು ರಿಪೇರಿ ಮಾಡುವ ಸಲುವಾಗಿ ೧ ಕಿಲೋಮೀಟರ್‌ಗೆ ೧೦೦೦ ರೂಪಾಯಿಗಳನ್ನು ಏನು ಕೊಡಲಾಗುತ್ತಿದೆ ಇದು ಏನೇನೂ ಸಾಲುವುದಿಲ್ಲ. ತಮಗೆ ನಾನು ಹೇಳಬೇಕೆಂದರೆ ಇವತ್ತು ನಮ್ಮ ರಾಜ್ಯದಲ್ಲಿ ಎಲ್ಲೋ ಕೆಲವು ಭಾಗಗಳನ್ನು ಬಿಟ್ಟರೆ ಇನ್ನುಳಿದಂತೆ ಹೆಚ್ಚು ಭಾಗದಲ್ಲಿ ಅದರಲ್ಲೂ ಹಳ್ಳಿಗಾಡುಗಳ ಸಂಚಾರ ಮಾರ್ಗಗಳಂತೂ ತುಂಬಾ ಕೀಳುಮಟ್ಟದಲ್ಲಿವೆ. ಇದನ್ನು ಸರ್ಕಾರದವರು ದಯವಿಟ್ಟು ಗಮನಿಸಬೇಕು.

ಸ್ವಾಮಿ, ಹಿಂದೆ ದೇವರಾಜ ಅರಸ್‌ರವರ ಸರ್ಕಾರ ಇದ್ದಾಗ, ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಇಲಾಖಾ ಸಚಿವರಾಗಿದ್ದಾಗ ಒಂದು ಮಾಸ್ಟರ್ ಪ್ಲಾನ್‌ನ್ನು ತಯಾರು ಮಾಡಿಸಿ ಅದಕ್ಕೆ ೧, ೨, ೩, ಎಂದು ಈ ರೀತಿ ನಂಬರ್‌ಗಳನ್ನು ಕೊಟ್ಟಿದ್ದರು, ಮತ್ತು ಅದೇ ರೀತಿಯಲ್ಲಿ ಕೆಲಸಗಳನ್ನೂ ತೆಗೆದುಕೊಳ್ಳಬೇಕೆಂದು ಹೇಳಿದ್ದರು. ಈ ಕೆಲಸಗಳನ್ನು ತೀವ್ರ ಗತಿಯಲ್ಲಿ ತೆಗೆದುಕೊಳ್ಳದೇ ಈಗಿನ ರೀತಿಯಲ್ಲೇ ಮುಂದುವರಿಸಿಕೊಂಡು ಹೋಗುವುದಾದರೆ ನಮ್ಮ ಮೊಮ್ಮಕ್ಕಳ ಕಾಲಕ್ಕೂ ಆಗುತ್ತದೋ ಇಲ್ಲವೋ ಎಂಬ ಸಂಶಯ ಇದೆ. ಅಂದರೆ ಇನ್ನು ಕನಿಷ್ಟ ೧೦೦ ವರ್ಷಗಳಾದರೂ ಬೇಕಾಗುತ್ತದೆ.

ಮಾನ್ಯ ಅಧ್ಯಕ್ಷರೆ, ನಾನು ಮಾತನಾಡಬೇಕಾದುದು ಇನ್ನೂ ಬಹಳ ವಿಷಯಗಳಿದ್ದರೂ ಕಾಲಾವಕಾಶ ಇಲ್ಲದೇ ಇರುವುದರಿಂದ ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಬಾದಾಮಿ).—ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನ ದಿವಸ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನ ಬಗ್ಗೆ ಮಾನ್ಯ ಸಚಿವರು ಸದನದ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅವರು ತಮ್ಮ ಬೇಡಿಕೆಗಳನ್ನು ತಿಳಿಸುವುದಕ್ಕೆ ಮುಂಚಿತವಾಗಿ ಒಂದು ಮಾತನ್ನು ಹೇಳಿದ್ದಾರೆ.

> "It is felt that many of the programmes did not reach major sections of rural community like small and marginal farmers, agricultural labourers, rural artisans and persons belonging to Scheduled Caste and Scheduled Tribe categories".

ಇವತ್ತಿನ ದಿವಸ ಸರ್ಕಾರದವರು ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಅವುಗಳಲ್ಲಿ ಎಸ್.ಎಫ್.ಡಿ.ಎ. ಸಿ.ಪಿ.ಎ.ಪಿ; I.A.D.P. ಇನ್ನೂ ಮುಂತಾದುವು ಮುಖ್ಯವಾದುವು. ಇದರ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟು ಈ ಯೋಜನೆಗಳನ್ನು ಜಾರಿಗೆತರಲು ಇರುವ ತೊಡಕಗಳೇನು ? ಅವುಗಳನ್ನು ಯಾವರೀತಿ ನಿವಾರಿಸಬೇಕೆಂಬುದನ್ನು ನಾವು ನೋಡಬೇಕು ಅಷ್ಟೇ ಅಲ್ಲದೆ, ಆ ಯೋಜನೆಗಳ ಪ್ರತಿಫಲ ರಾಜ್ಯದ ಜನತೆಗೆ ಸಿಕ್ಕುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ ಹೇಳುವುದಾದರೆ ಹಿಂದೆ ಅನೇಕ ವಿಧದ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿತ್ತು. ಆದರೆ ಅವುಗಳ ಪ್ರಯೋಜನ ಮಾತ್ರ ಇವತ್ತಿನವರೆಗೂ ನಮ್ಮ ರಾಜ್ಯದ ಜನತೆಗೆ ಮುಟ್ಟಿಲ್ಲ. ಇದಕ್ಕೆ ಮೂಲಭೂತ ಕಾರಣ ಏನು ಎಂಬುದನ್ನು ನಾನು ಹೇಳಬಯಸುತ್ತೇನೆ. ಮುಖ್ಯವಾಗಿ ಹೇಳುವುದಾದರೆ ನಮ್ಮ ಹಳ್ಳಿಯ ಜನರು ಬಹಳ ಅನಕ್ಷರಸ್ಥರಿದ್ದಾರೆ. ಸುಮಾರು ನೂರಕ್ಕೆ ೮೦ ಜನ ಇದ್ದಾರೆ ಇವರಿಗೆ ಓದುಬರಹವೇ ಬರುವುದಿಲ್ಲ. ಇದರ ಬಗ್ಗೆ ಸರ್ಕಾರದವರು ಲಕ್ಷ್ಯವನ್ನು ಕೊಟ್ಟು ಮೊಟ್ಟಮೊದಲು ಅಡಲ್ಟ್ ಎಜುಕೇಷನ್‌ನ್ನು ಕಡ್ಡಾಯವಾಗಿ ಜಾರಿಗೆತರಬೇಕು. ಈ ಪದ್ಧತಿ ಹಿಂದೆ ಇತ್ತು. ನನಗೆ ಒಂದು ಸಂಸ್ಕೃತ ಶ್ಲೋಕ ಈ ಸಂದರ್ಭದಲ್ಲಿ ನೆನಪಿಗೆಬರುತ್ತದೆ. ಅದೇನೆಂದರೆ "ವಿದ್ಯಾ ವಿಹೀನಃ ಪಶುಃ" ಅಂದರೆ ವಿದ್ಯೆ ಇಲ್ಲದವನು ಪಶುವಿಗೆ ಸಮಾನ, "ನಹಿಜ್ಞಾನೇನ ಸದೃಶಂ" ಜ್ಞಾನಕ್ಕೆ ಸಮಾನವಾದುದು ಇನ್ನೊಂದಿಲ್ಲ. ಮನುಷ್ಯನಿಗೆ ವಿದ್ಯೆ ಇದ್ದರೆ ಜಗತ್ತಿನ ಎಲ್ಲ ವ್ಯವಹಾರಗಳನ್ನೂ ತಿಳಿದುಕೊಳ್ಳುತ್ತಾನೆ. ಇವತ್ತು ಸಾಕ್ಷರತೆಯ ಬಗ್ಗೆ ಒಂದು ದೊಡ್ಡ ಆಂದೋಳನವೇ ನಡೆಯುತ್ತಿದೆ. ಇದು ನಮ್ಮ ರಾಜ್ಯದಲ್ಲಿ ಮಾತ್ರ ಇಂಥ ಸಮಸ್ಯೆ ಇದೆಯೆಂದು ಯಾರು ಭಾವಿಸಬಾರದು. ಇದು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಇದೆ. ನನಗೆ

ತಿಳಿದಮಟ್ಟಿಗೆ ಜಪಾನ್‌ನಲ್ಲಿ ೧೮೮೩ ರಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ಬಂತು. ಅದೇರೀತಿ ಡೆನ್ಮಾರ್ಕನಲ್ಲಿ ೧೮೧೪ ರಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ಬಂತು. ಆ ದೇಶಗಳು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವ ಮೂಲಕ ಸಾಕ್ಷರತೆಯಲ್ಲಿ ಯಶಸ್ವಿಯಾಗಿವೆ. ನಮ್ಮ ಭಾರತ ದೇಶದಲ್ಲಿ ಸುಮಾರು ನೂರಕ್ಕೆ ೬೬ ಪರ್ಸೆಂಟ್ ಮಕ್ಕಳು ಮಧ್ಯದಲ್ಲಿಯೇ ಶಾಲೆಗಳನ್ನು ಬಿಟ್ಟುಬಿಡುತ್ತಿವೆ. ಏತಕ್ಕೆ ಹೀಗೆ ಶಾಲೆಗಳನ್ನು ಮಕ್ಕಳು ಬಿಡುತ್ತವೆಂದು ನಾವು ಯೋಚನೆ ಮಾಡಬೇಕು. ನನಗೆ ಈ ಸಂದರ್ಭದಲ್ಲಿ ಒಂದು ಕನ್ನಡದ ನಾಣ್ಣುಡಿ ನೆನಪಿಗೆಬರುತ್ತದೆ. ಪ್ರಾಥಮಿಕ ಶಿಕ್ಷಣದ ಬಗ್ಗೆ ನಾವು ಏತಕ್ಕೆ ಅಷ್ಟೊಂದು ಆದ್ಯತೆಯನ್ನು ಕೊಡಬೇಕೆಂದರೆ, ನಾನು ಆಗಲೇ ಹೇಳಿದಂತೆ ಮಕ್ಕಳು ಮಧ್ಯದಲ್ಲೇ ಶಾಲೆಗಳನ್ನು ಬಿಟ್ಟುಬಿಡುತ್ತವೆ. ಅವರ ಓದು ಅಲ್ಲಿಗೆ ಮುಗಿದುಹೋಗುತ್ತದೆ. ಇದರಿಂದಾಗಿ ನಮ್ಮಲ್ಲಿ ಅನಕ್ಷರತೆ ಜಾಸ್ತಿಯಾಗುತ್ತದೆ. ಆದ್ದರಿಂದ ಇದು ಆಗದಂತೆ ನಾವು ಜಾಗ್ರತರಾಗಿರಬೇಕು. ಇವತ್ತು ಪ್ರಾಥಮಿಕ ಶಿಕ್ಷಣ ಮತ್ತು ಪ್ರೌಢ ಶಿಕ್ಷಣ ಇವು ಒಂದಕ್ಕೊಂದು ಹೊಂದಿಕೊಂಡಿರುತ್ತವೆ. ಒಂದು ವಿಧದಲ್ಲಿ ಹೇಳುವುದಾದರೆ ಇವು ಅವಳಿಜವಳಿ ಮಕ್ಕಳಿದ್ದಂತೆ. ಈ ವಿದ್ಯಾ ಸೌಲಭ್ಯವನ್ನು ನಾವು ಹಳ್ಳಿಗಳಿಗೆ ಒದಗಿಸಿಕೊಟ್ಟರೆ ಜನರಿಗೆ ಬಹಳ ಅನುಕೂಲ ಮಾಡಿಕೊಟ್ಟಂತಾಗುತ್ತದೆ.

ಇನ್ನು ಎರಡನೆಯ ದೋಷವೇನೆಂದರೆ, ನಮ್ಮಲ್ಲಿರುವ ಆಫೀಸರ್ಸ್‌ಗಳು ರೆಸ್‌ಪಾನ್ಸಿಬಲ್ ಆಗಿ ಕೆಲಸ ಮಾಡದೇ ಇರುವುದು ಕಾರಣವಾಗಿದೆ. ಇದು ಪ್ರತಿಯೊಬ್ಬರ ಅಭಿಪ್ರಾಯವನ್ನು ಸಹ ತಾವು ಶೇಖರಣೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ಇದರಿಂದ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಕೆಲವು ತಾಲ್ಲೂಕ್ ಬೋರ್ಡ್ ಮಂಡಳಿಗಳಂತೂ ಕೆಲಸವನ್ನೇ ಮಾಡುತ್ತಿಲ್ಲ. ಕೆಲಸವನ್ನೇ ಮಾಡುತ್ತಿಲ್ಲ ಎಂದು ಹೇಳುವಾಗ ವಿಚಾರ ನೆನಪಿಗೆ ಬರುತ್ತಿದೆ, ತಾವು ಈ ರೂರಲ್ ಡೆವಲಪ್‌ಮೆಂಟ್ ಎನ್ನತಕ್ಕದ್ದು ಏನಿದೆ ಅದಕ್ಕೆ ಒಂದು ತಿದ್ದುಪಡಿಯನ್ನಾದರೂ ತಂದು ಸುಧಾರಿಸುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳ ಬಯಸುತ್ತಿದ್ದೇನೆ. ಈಗ ನಿಮ್ಮ ಅಭಿವೃದ್ಧಿ ಕಾರ್ಯಕ್ರಮಗಳನ್ನೆಲ್ಲಾ ಜಿಲ್ಲಾಧಿಕಾರಿಗಳಿಗೇ ವಹಿಸಿ ಕೊಟ್ಟಿದ್ದೀರಿ ಯಾವುದೇ ಜಿಲ್ಲಾಧಿಕಾರಿಗಳನ್ನು ತೆಗೆದುಕೊಳ್ಳಲಿ ಅವರು ಕೇವಲ ಕಂದಾಯ ಇಲಾಖೆಗೆ ಬಹಳ ಹೆಚ್ಚಿನ ಮನಸ್ಸನ್ನು ಕೊಟ್ಟು ಅದರ ಮೇಲೆ ಕಾನ್ಸೆನ್‌ಟ್ರೇಷನ್ ಕೊಟ್ಟಿರುತ್ತಾರೆಯೇ ವಿನಃ ಈ ರೂರಲ್ ಡೆವಲಪ್‌ಮೆಂಟ್ ಪ್ರೋಗ್ರಾಂಗೆ ಹೆಚ್ಚಿಗೆ ಆಸಕ್ತಿ ವಹಿಸಿರುವುದಿಲ್ಲ. ಎಷ್ಟೋ ಪಂಚಾಯಿತಿಗಳಲ್ಲಿ ಯಾವುದೇ ತರಹ ಮೀಟಿಂಗ್‌ಗಳನ್ನೂ ಕೂಡ ಮಾಡಿರುವುದೇ ಇಲ್ಲ ಪಂಚಾಯಿತಿಗಳು ಕೂಡ ಇವತ್ತಿನ ದಿವಸ ತನ್ನ ಕೆಲಸಗಳನ್ನು ಸರಿಯಾಗಿ ದಕ್ಷತೆಯಿಂದ ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ ಅದರಲ್ಲಿ ಜನತೆಯ ದೋಷವೂ ಇದೆ. ಜನತೆಯ ದೋಷವಿರುವುದರ ಜೊತೆಗೆ ಆಫೀಸರ್ಸ್ ಕೂಡ ಬೇಜವಾಬ್ದಾರಿಯುತವಾಗಿ ವರ್ತಿಸುತ್ತಿದ್ದಾರೆ. ಇದರಿಂದಾಗಿ ನಮ್ಮ ಪಂಚಾಯತ್ ರಾಜ್ಯಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಹೇಳಬಯಸುತ್ತಿದ್ದೇನೆ, ಕಾರಣ ಇಷ್ಟೇ, ಯಾರು ಪಂಚಾಯಿತಿಗಳ ಎಕ್ಸ್‌ಟೆನ್‌ಷನ್ ಆಫೀಸರ್ಸ್ ಇದ್ದಾರೆ, ಇವರು ತಾಲ್ಲೂಕಿಗೆ ಒಬ್ಬೊಬ್ಬರು ಇರುತ್ತಾರೆ, ಅವರು ಯಾವುದೇ ಹಳ್ಳಿಗಳಿಗೂ ಹೋಗಿ ಇನ್ಸ್‌ಪೆಕ್ಷನ್ ಮಾಡುತ್ತಿಲ್ಲ, ಮತ್ತು ಜಿಲ್ಲಾಧಿಕಾರಿಗಳೂ ಕೂಡ ಯಾವುದೇ ಹಳ್ಳಿಗಳಿಗೂ ಹೋಗಿ ಅಲ್ಲಿನತಕ್ಕ ಸಮಸ್ಯೆಗಳನ್ನು ಅರಿತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ ಮತ್ತೆ ಯಾರು ಅಸಿಸ್ಟೆಂಟ್ ಕಮೀಷನರ್‌ಗಳಿದ್ದಾರೆ ಅವರು ಸಹ ಈ ವಿಷಯದಲ್ಲಿ ಲಕ್ಷ್ಯವನ್ನು ಸರಿಯಾಗಿ ವಹಿಸುತ್ತಿಲ್ಲವೆಂದು ಹೇಳಬಹುದಾಗಿದೆ. ಆದಕೋಸ್ಕರ ಆಫೀಸರ್ಸ್ ರೆಸ್ಪಾನ್ಸಿಬಿಲಿಟಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ ಎನ್ನುವ ಮಾತನ್ನು ವಿಧಿಯಿಲ್ಲದೇ ಹೇಳಬೇಕಾಗಿದೆ. ಆದುದರಿಂದ ಇದನ್ನು ಪೂರ್ತಿ ಬದಲಾವಣೆ ಮಾಡಲು ಈ ರೂರಲ್ ಡೆವಲ್‌ಪ್‌ಮೆಂಟ್‌ನ್ನು ಜಿಲ್ಲಾಧಿಕಾರಿಗಳಿಗೆ ವಹಿಸಿದ್ದೀರಿ, ಅದನ್ನು ಮೊಟ್ಟಮೊದಲನೆಯದಾಗಿ ಆ ಕೆಲಸದಿಂದ ಹೊರತು ಪಡಿಸಿ ಎಂದು ಹೇಳಬಯಸುತ್ತಿದ್ದೇನೆ. Let the Collector be liberated from developmental works. Let the developmental works be liberated from the Collector.. ಏತಕ್ಕೆಂದರೆ ಜಿಲ್ಲಾಧಿಕಾರಿಗಳಾದವರು ಇವತ್ತು ಬರೀ ಕಂದಾಯ ಇಲಾಖೆಗೆ ಹೆಚ್ಚಿನ ಆಸಕ್ತಿ ವಹಿಸಿರುವುದರಿಂದ ನಮ್ಮ ಹಳ್ಳಿಗಳ ಅಭಿವೃದ್ಧಿ ಕಾರ್ಯಗಳು ಯಾವುದೇ ರೀತಿಯಲ್ಲೂ ಉದ್ಧಾರವಾಗಲಿಕ್ಕೆ ಇರುವ ಅನೇಕ ಯೋಜನೆಗಳನ್ನು ಕೈಗೊಳ್ಳದೇ ಇರುವುದರಿಂದ ಅವು ಸಫಲವಾಗಿಲ್ಲ ಎನ್ನುವುದನ್ನು ನಾವು ನೋಡಬಹುದಾಗಿದೆ. ಆದುದರಿಂದ ಈ ಲೋಪದೋಷಗಳೆಲ್ಲಾ ಪರಿಹಾರವಾಗಬೇಕಾಗಿದ್ದರೆ ಚಾಲಿತ ಪದ್ಧತಿಯನ್ನು ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕಾಗಿದೆಂದು ಆಗ್ರಹಪೂರ್ವಕವಾಗಿ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ಜನತೆಯಲ್ಲಿಯೂ ಸಹ ದೋಷವಿದೆ. ಇವತ್ತು ಪ್ರತಿಯೊಬ್ಬರೂ ಹೇಳುತ್ತಾರೆ, ಎಂ.ಎಲ್.ಎ., ಮತ್ತು ಅಧಿಕಾರಿಗಳ ದೋಷವಿದೆ ಎಂದು ಹೇಳುತ್ತಾರೆ.

ಆದರೆ ನಾನು ಹೇಳುತ್ತೇನೆ ಇದರಲ್ಲಿ ಜನಗಳ ದೋಷವೂ ಇದೆ, ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ನಡೆದರೆ ಮಾತ್ರ ಆಗ ಯಾವುದೇ ರಾಜ್ಯ ಸರ್ಕಾರದ ಯೋಜನೆಗಳು ಸಫಲವಾಗಲಿಕ್ಕೆ ಸಾಧ್ಯ. ಅದಕೋಸ್ಕರವಾಗಿ ಜನತೆ ಜವಾಬ್ದಾರಿಯನ್ನು ಅರಿತುಕೊಳ್ಳುವುದಕ್ಕಾಗಿ ದೇಶದಾದ್ಯಂತ ಜಗತ್ತಿನಾದ್ಯಂತ ಇದರ ಬಗ್ಗೆ ಪ್ರಯತ್ನಗಳು ನಡೆದವು. ೧೯೪೫ನೇ ಇಸ್ವಿಯಲ್ಲಿ ಒಂದು ಕಾನ್-ಫರೆನ್ಸ್ ಆಯಿತು ಅಲ್ಲಿಂದ ಹಿಡಿದು ೧೯೪೮ರಲ್ಲಿ ಒಂದು ಕಾನ್‌ಫರೆನ್ಸ್ ಆಯಿತು, ದೇಶ ವಿದೇಶಗಳಲ್ಲಿ ಇದರ ಬಗ್ಗೆ ಸಮಸ್ಯೆಗಳನ್ನು ಪರಿಶೀಲಿಸಿತು. ಸರ್ಕಾರದ ವ್ಯವಹಾರಗಳಲ್ಲಿ, ಸರ್ಕಾರದ ಯೋಜನೆಗಳಲ್ಲಿ ಪಾಲ್ಗೊಳ್ಳುವ ರೀತಿಯಲ್ಲಿ ಪ್ರಯತ್ನಗಳು ನಮ್ಮ ರಾಷ್ಟ್ರದಲ್ಲಿಯೂ ನಡೆಯಿತು. ಆಗಲೇ ಈ ಕಮ್ಯೂನಿಟಿ ಡೆವಲಪ್ ಮೆಂಟ್ ಎನ್ನತಕ್ಕ ಯೋಜನೆ ೧೯೫೨ ರಲ್ಲಿ ಜಾರಿಗೆ ತಂದರು. ಅದನ್ನು ಜಾರಿಗೆ ತರುವಾಗ ದಿ|| ಪಂಡಿತ ಜವಾಹರಲಾಲ್ ನೆಹರೂರವರು ಕಮ್ಯೂನಿಟಿ ಡೆವಲಪ್‌ಮೆಂಟ್ ಆಫೀಸರ್ಸ್ ರವರ ಮೀಟಿಂಗ್‌ನಲ್ಲಿ ಅವರನ್ನು ಕುರಿತು ಭಾಷಣ ಮಾಡುತ್ತಾ ಈ ರೀತಿ ಹೇಳಿದ್ದಾರೆ...

> "Community development and Panchayatraj was to develop this outlook and spirit of self-reliance among the people. We have to undertake many development schemes. But the bigest job is to build men and women and to make the people to realise that the job is theirs and the success failures will also be theirs".

ಎನ್ನತಕ್ಕ ಮಾತನ್ನು ಆಗ ಇದ್ದ ಪ್ರಧಾನ ಮಂತ್ರಿಗಳಾದ ಶ್ರೀ ಜವಾಹರಲಾಲ್ ನೆಹರೂರವರು ಹೇಳಿದ್ದಾರೆ. ಜನತೆ ಕೂಡ ತನ್ನ ಜವಾಬ್ದಾರಿಗಳನ್ನು ಅರಿತುಕೊಳ್ಳಬೇಕು ಆಗಲೇ ಮಂತ್ರಿಗಳ ಮತ್ತು ಶಾಸಕರ ಜವಾಬ್ದಾರಿ ಹೆಚ್ಚಾಗುತ್ತಾ ಮತ್ತೆ ಮೇಲಾಗಿ ಅಧಿಕಾರಿಗಳ ಜವಾಬ್ದಾರಿ ಕೂಡ ಹೆಚ್ಚಾಗುತ್ತ ಪ್ರತಿಯೊಬ್ಬರೂ ಜಾಗರೂಕತೆಯಿಂದ ಕೆಲಸ ಕಾರ್ಯಗಳನ್ನು ಮಾಡಲು ಸಾಧ್ಯವಾಗುತ್ತದೆ. ಅದಕ್ಕೆ ಜನತೆ ಜಾಗ್ರತೆಯಿಂದ ಬುದ್ಧಿವಂತರಾಗಿ ಎಚ್ಚೆತ್ತುಕೊಳ್ಳಬೇಕು ಎನ್ನುವ ಮಾತನ್ನು ಹೇಳಿದ್ದರು. ಅದಕ್ಕಾಗಿಯೇ ಜನರು ಕೂಡ ಸರ್ಕಾರಿ ಕೆಲಸಗಳಲ್ಲಿ ಭಾಗವಹಿಸುವುದಕ್ಕೆ ಆಸ್ಪದ ಮಾಡಿಕೊಡಲು ಈ ಕಮ್ಯೂನಿಟಿ ಡೆವಲಪ್‌ಮೆಂಟ್‌ನ್ನು ಕೂಡ ನಮ್ಮ ರಾಜ್ಯದಲ್ಲೂ ಈ ಯೋಜನೆಯನ್ನು ಜಾರಿಗೆ ತಂದಿದೆ, ಜಾರಿಗೆ ತಂದರೂ ಕೂಡ ಅಷ್ಟೊಂದು ಸಫಲವಾದಂತೆ ಕಾಣುತ್ತಿಲ್ಲ. ಅನೇಕ ಲೋಪದೋಷಗಳು ಎದ್ದು ಕಾಣುತ್ತಿವೆ ಈ ಸಂದರ್ಭದಲ್ಲಿ ಒಂದು ನೆನಪಿಗೆ ಬರುತ್ತಿದೆ, ನಮ್ಮ ಪಕ್ಕದ ರಾಜ್ಯವಾದ ಕೇರಳ ಸರ್ಕಾರದವರು ಮೊನ್ನೆ ಮಾರ್ಚಿ ತಿಂಗಳಿನಲ್ಲಿ ಒಂದು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಬಿಲ್ ಎಂದು ಇಂಟರ್‌ಡ್ಯೂಜ್ ಮಾಡಿ ಪಾಸ್ ಮಾಡಿದ್ದಾರೆ, ಇದರಿಂದ ಡೀಸೆಂಟ್ರಲೈಜೇಷನ್ ಆಫ್ ಪವರ್ ಎನ್ನತಕ್ಕದ್ದನ್ನು ಮಾಡಿ ಜಾರಿಗೆ ತಂದಿದ್ದಾರೆ. ಇದನ್ನು ನಮ್ಮಲ್ಲಿಯೂ ಸಹ ಜಾರಿಗೆ ತರುವುದು ಮುಖ್ಯವೆಂದು ಹೇಳಬಯಸುತ್ತೇನೆ. ಏತಕ್ಕೆಂದರೆ ವಿಶಾಲವಾಗಿರತಕ್ಕ ನಮ್ಮ ರಾಜ್ಯದ ಕೆಲಸಗಳನ್ನು ಒಬ್ಬರೇ ಒಬ್ಬರ ಕೈಯಲ್ಲಿ ಅಧಿಕಾರವನ್ನು ಕೊಡುವುದಕ್ಕಿಂತ, ಕೆಳಗಿರತಕ್ಕ ಅಧಿಕಾರಿಗಳಿಗೂ ಸಹ ಸ್ವಲ್ಪ ಮಟ್ಟಿನ ಅಧಿಕಾರವನ್ನು ಹಂಚುವುದರಿಂದ ಸರ್ಕಾರ ಯೋಜನೆಗಳು ಫಲಕಾರಿಯಾಗುವುದೆಂದು ತಿಳಿದುಕೊಂಡಿದ್ದೇನೆ. ಆದುದರಿಂದ ಕೇರಳ ಸರ್ಕಾರದವರು ಯಾವ ರೀತಿಯಾಗಿ ಕಾರ್ಯಗತಗೊಳಿಸಿದ್ದಾರೋ, ಅದೇ ರೀತಿ ನಮ್ಮ ರಾಜ್ಯದಲ್ಲೂ ಆದಷ್ಟು ಶೀಘ್ರವಾಗಿ ಆ ರೀತಿಯ ಕಾನೂನು ತಂದು ಪಂಚಾಯತ್ ರಾಜ್‌ಗಳು ಎಚ್ಚೆತ್ತು ಚೆನ್ನಾಗಿ ಕಾರ್ಯ ಮಾಡುವುದಕ್ಕೆ ಸಹಕಾರಿಯಾಗುವಂತೆ ಮಾಡಬೇಕೆಂದು ಸರ್ಕಾರದವರಲ್ಲಿ ಆಗ್ರಹ ಪೂರ್ವಕವಾಗಿ ಬೇಡಿಕೊಳ್ಳುತ್ತೇನೆ ಈ ಕಮ್ಯೂನಿಟಿ ಡೆವಲಪ್‌ಮೆಂಟ್ ಎಂದರೆ ಇದರಲ್ಲಿ ಸರ್ಕಾರದವರು ಹೆಚ್ಚಿಗೆ ಕಾಳಜಿವಹಿಸಿ ಅಲ್ಲಿರತಕ್ಕ ಜನತೆಯ ಆಶೋತ್ತರಗಳನ್ನು ಈಡೇರಿಸಬೇಕಾಗುತ್ತದೆ. ಅದರಲ್ಲಿ ಪ್ರತಿಯೊಂದು ಇಲಾಖೆಯೂ ಬರುತ್ತದೆ. ಒಕ್ಕಲುತನ ಬರುತ್ತದೆ ಮತ್ತು ಎಸ್.ಎಫ್.ಡಿ ಎ, ವಾಟರ್ ಸಪ್ಲೈ ಸ್ಕೀಂ ಇನ್ನು ಮುಂತಾದ ಎಲ್ಲ ಸರ್ವತೋಮುಖವಾದ ಯೋಜನೆಗಳೂ ಅದರಲ್ಲಿ ಬರುತ್ತದೆ. ಅಲ್ಲಿ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕಾದರೆ ಕಮ್ಯೂನಿಟೀ ಡೆವಲಪ್‌ಮೆಂಟ್ ಚೆನ್ನಾಗಿ ಕೆಲಸ ಮಾಡಬೇಕಾಗುತ್ತದೆ ಇದರ ಬಗ್ಗೆ ಹೆಚ್ಚಿನ ಮುತುವರ್ಜಿಯನ್ನು ಮಂತ್ರಿಗಳವರೂ ಮತ್ತು ಅಧಿಕಾರಿಗಳವರೂ ವಹಿಸಬೇಕಾಗುತ್ತದೆ. ಹಳ್ಳಿಗಳಲ್ಲಿ ಇವತ್ತು ಆರ್ಥಿಕ ಸ್ಥಿತಿ ಉತ್ತಮಗೊಳಿಸುವುದಕ್ಕಾಗಿ ತಾವು ಇವತ್ತು ಎಸ್.ಎಫ್.ಡಿ.ಎ, ಯೋಜನೆಯನ್ನು ತಂದು ಲೋನ್ ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದೀರಿ. ಆದರೆ ಅದು ಹೆಚ್ಚಿನ ರೀತಿಯಲ್ಲಿ ಸಫಲತೆ

ಯನ್ನು ಹೊಂದಿಲ್ಲ. ಯಾವ ಬಡ ಜನತೆಗೆ ಅನುಕೂಲವಾಗಬೇಕಾಗಿತ್ತು, ಅಷ್ಟು ಅನುಕೂಲತೆಯಾಗಿಲ್ಲ. ಅದರಲ್ಲಿ ದೋಷಗಳಿದ್ದಾವೆ. ಯಾರಿಗೆ ಇದರಿಂದ ಸೌಲಭ್ಯ ಸಿಗಬೇಕಾಗಿತ್ತೋ ಅಂಥವರನ್ನು ಸರಿಯಾಗಿ ಐಡೆಂಟಿಫೈಯನ್ನು ಅಧಿಕಾರಿಗಳು ಮಾಡದೇ ಇದ್ದುದರಿಂದ, ಯಾರು ಸಣ್ಣ ಜಮೀನ್ದಾರರು ಹಳ್ಳಿಗಳಲ್ಲಿದ್ದರೋ ಅವರನ್ನು ಬಿಡಲಾಗಿದೆ. ಈಗ ಉದಹರಣೆಗೆ ಹೇಳುವುದಾದರೆ ಅಣ್ಣ ತಮ್ಮಂದಿರು ಮೊದಲು ಒಟ್ಟಿಗೆ ಇರುತ್ತಾರೆ, ಆನಂತರ ಬೇರೆ ಬೇರೆಯಾಗಿದ್ದರೂ ಸಹ ರಿಕಾರ್ಡ್‌ನಲ್ಲಿ ಒಂದೇ ಇರುತ್ತದೆ, ಇದರಿಂದಾಗಿ ಅವರಿಗೆ ಯಾವ ರೀತಿಯ ಸಾಲ ಸೌಲಭ್ಯ ಮತ್ತಿತರ ಸೌಲಭ್ಯಗಳು ದೊರೆಯಬೇಕಾಗಿರುತ್ತದೆಯೋ ಅದು ಸರಿಯಾಗಿ ದೊರಕುತ್ತಿಲ್ಲ. ಇದರಿಂದಾಗಿ ಆಫೀಸರ್ಸ್ ಇದನ್ನು ಸರಿಯಾಗಿ ರೆಕಾರ್ಡ್ ಮಾಡದೇ ಇರುವುದರಿಂದ ಮತ್ತು ಅವರನ್ನು ಐಡೆಂಟಿಫೈ ಮಾಡದೇ ಇರುವುದರಿಂದ, ಆಫೀಸರ್ಸ್ ಅಷ್ಟೇ ಜವಾಬ್ದಾರಿಯಿಂದ ಕೆಲಸ ನಿರ್ವಹಣೆ ಮಾಡತಕ್ಕದ್ದು ಮುಖ್ಯ ಎನ್ನುವ ಮಾತನ್ನು ಹೇಳಬೇಕಾಗಿದೆ. ಇವತ್ತು ಬಿ.ಡಿ.ಒ ರವರು, ಅಗ್ರಿಕಲ್ಚರಲ್ ಅಸಿಸ್ಟೆಂಟ್, ಇನ್ನು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ಸ್ ೨-೩ ಜನ ಇದ್ದಾರೆ ಮತ್ತೆ ಗ್ರಾಮ ಸೇವಕರು ೮-೧೦ ಜನ ಇರುತ್ತಾರೆ. ಇಂಥವರನ್ನೆಲ್ಲಾ ಒಕ್ಕಲುತನ ಇಲಾಖೆಗೆ ಕೊಟ್ಟಿದ್ದೀರಿ, ಇಷ್ಟೆಲ್ಲಾ ಇದ್ದಾಗ್ಯೂ ಸಹ ಇವತ್ತು ಬ್ಲಾಕ್ ಡೆವಲಪ್‌ಮೆಂಟ್‌ನ ಕೆಲಸ ಸ್ಥಗಿತವಾಗಿದೆ. ಎಸ್. ಎಫ್. ಡಿ. ಎ. ಪ್ರೊಗ್ರಾಂ ಏನಿದೆ ಅದು ಸಹ ಸ್ಥಗಿತವಾಗಿದೆಂದು ಸ್ಪಷ್ಟವಾಗಿ ಹೇಳಬಹುದಾಗಿದೆ. ಒಂದೊಂದು ತಾಲ್ಲೂಕಿಗೆ ೨-೩ ಜನ ಅಗ್ರಿಕಲ್ಚರಲ್ ಅಸ್ಸಿಸ್ಟೆಂಟ್ಸ್ ಇರುತ್ತಾರೆ ಅವರು ಆಯಾಯಾ ತಾಲ್ಲೂಕಿನಾದ್ಯಂತ ಇರುವ ಹಳ್ಳಿಗಳಲ್ಲಿ ತಿರುಗಾಡಬೇಕು, ತಿರುಗಾಡಿ ಎಸ್. ಎಫ್. ಡಿ. ಎ. ಒಳಗಿರತಕ್ಕವರನ್ನೆಲ್ಲಾ ಗುರುತಿಸಿ ಸಾಲವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಆದರೆ ಇವತ್ತು ಏನಾಗಿದೆ ಎಂದರೇ ಕಮರ್ಷಿಯಲ್ ಬ್ಯಾಂಕ್‌ನವರು ಇವರಿಗೆ ಸಾಲವನ್ನು ಕೊಡುವುದಿಲ್ಲ, ಅದೇ ಅಂಗಡಿಯವರಿಗೆ ಇಲ್ಲವೇ ಹೋಟಲ್ ಉದ್ದಿಮೆಯವರಿಗಾದರೆ ಬ್ಯಾಂಕ್‌ನವರು ಕೋಟಿ ಗಟ್ಟಲೆ ಹಣವನ್ನು ಕೊಡಲು ಮುಂದೆ ಬಂದಿದ್ದಾರೆ. ಅದಕ್ಕೆ ಈ ಅಧಿಕಾರಿಗಳು ಎಸ್. ಎಫ್. ಡಿ. ಎ. ಒಳಗೆ ಬರತಕ್ಕಂಥ ಜನರನ್ನು ಹಳ್ಳಿಯಲ್ಲಿ ಗುರುತಿಸಿ ಅವರಿಗೆ ಬ್ಯಾಂಕ್‌ಗಳ ಮುಖಾಂತರ ಸಾಲವನ್ನು ಕೊಡಿಸುವ ಕೆಲಸವನ್ನು ಮಾಡಬೇಕು. ಆದರೆ ಸಣ್ಣ ರೈತರಿಗೆ ಸಾಲ ಕೊಡಬೇಕಾದರೆ ಬ್ಯಾಂಕಿನವರು ಹೆದರುತ್ತಿದ್ದಾರೆ. ಜೊತೆಗೆ, ಅವರಿಗೆ ಜಾಮೀನು ನೀಡುವುದಕ್ಕೂ ಸಹ ಊರಿನಲ್ಲಿರುವ ಪ್ರಭಾವಿ ವ್ಯಕ್ತಿಗಳು ಹೆದರುತ್ತಿದ್ದಾರೆ. ಆದ್ದರಿಂದ ಸರ್ಕಾರಿ ಅಧಿಕಾರಿಗಳೇ ಜವಾಬ್ದಾರಿ ವಹಿಸಿ, ನಾವು ಅವರಿಗೆ ಜವಾಬ್ದಾರರು ಎಂದು ಯೋಗ್ಯ ಸಮಯದಲ್ಲಿ ಸಣ್ಣ ರೈತರಿಗೆ ಸಾಲ ಸಿಗುವಂತೆ ಮಾಡಿದರೆ ಮಾತ್ರ ಎಸ್. ಎಫ್. ಡಿ. ಎ. ಯೋಜನೆ ಸಫಲವಾಗುತ್ತದೆ. ಇವತ್ತಿನ ದಿವಸ, ಬ್ಯಾಂಕಿನವರು ಸಾಲ ಕೊಡದೆ ಇರುವುದಕ್ಕೆ ಮೂಲ ಕಾರಣವೇನೆಂದರೆ, ಸರ್ಕಾರದವರು ಮುಂದೆ ಬಂದು ರೈತರಿಗೆ ಏನು ಬ್ಯಾಂಕಿನ ಮೂಲಕ ಸಾಲ ಕೊಡಿಸಿದ್ದಾರೆ ಅದನ್ನು ರೈತ ಸದುಪಯೋಗ ಪಡಿಸಿಕೊಂಡಿದ್ದಾನೆಯೋ ಇಲ್ಲವೇ, ಬ್ಯಾಂಕಿಗೆ ಮರು ಪಾವತಿ ಮಾಡಿದ್ದಾನೆಯೋ ಇಲ್ಲವೇ ಎಂಬುದರ ಬಗ್ಗೆ ಸರ್ಕಾರಿ ಅಧಿಕಾರಿಗಳು ಲಕ್ಷ್ಯ ವಹಿಸಿಲ್ಲ. ರೈತರಿಗೆ ಬ್ಯಾಂಕಿನ ಮೂಲಕ ಸಾಲವನ್ನು ಕೊಡಿಸಿದ ಮೇಲೆ ಅದು ಮರುಪಾವತಿ ಆಯಿತೇ ಇಲ್ಲವೇ ಎಂಬುದನ್ನು ವಿಚಾರ ಮಾಡತಕ್ಕದ್ದು ಸರ್ಕಾರದ ಜವಾಬ್ದಾರಿ. ಆದರೂ ಕೂಡ ಅದನ್ನು ವಿಚಾರ ಮಾಡುತ್ತಿಲ್ಲ. ಇದರಿಂದಾಗಿ ಬ್ಯಾಂಕಿನವರು ರೈತರಿಗೆ ಸಾಲ ಕೊಡುವುದಕ್ಕೆ ಹೆದರುತ್ತಿದ್ದಾರೆ, ಸಾಲವನ್ನು ಕೊಡಿಸಿದ ಮೇಲೆ ಅದನ್ನು ಮರು ಪಾವತಿ ಮಾಡಿಸುವುದು ನಮ್ಮ ಜವಾಬ್ದಾರಿ ಎಂದು ಸರ್ಕಾರೀ ಅಧಿಕಾರಿಗಳು ತಿಳಿದುಕೊಂಡರೆ, ಬ್ಯಾಂಕಿನ ಅಧಿಕಾರಿಗಳು ಸಾಲ ಕೊಡುವುದಕ್ಕೆ ಮುಂದೆ ಬರುತ್ತಾರೆ. ಸಾಲದ ಮರು ಪಾವತಿ ಮಾಡಿಸುವ ಬಗ್ಗೆ ಸರ್ಕಾರಿ ಅಧಿಕಾರಿಗಳು ನಮ್ಮೊಡನೆ ಸಹಕರಿಸುತ್ತಿಲ್ಲವೆಂಬ ಮಾತನ್ನು ಇವತ್ತಿನ ದಿವಸ ಬ್ಯಾಂಕಿನ ಮ್ಯಾನೇಜರ್‌ಗಳು ಹೇಳುತ್ತಿದ್ದಾರೆ. ಬ್ಯಾಂಕಿನವರು ಮೊಟ್ಟಮೊದಲನೆಯದಾಗಿ ನಮ್ಮ ಬಗ್ಗೆ ಎರಡನೇ ಭಾವನೆ ತಾಳಿದ್ದಾರೆ. ಆದರೂ ಕೂಡ ನಾವು ಅವರೊಡನೆ ಸಹಕರಿಸಬೇಕಾದುದು ನಮ್ಮ ಕರ್ತವ್ಯ. ನಾವು ಸಹಕರಿಸದಿದ್ದರೆ ಅವರು ಸಾಲ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಬ್ಯಾಂಕುಗಳ ರಾಷ್ಟ್ರೀಕರಣವಾದ ಮೇಲೆ ಬಡವರ ಕಡೆಗೆ ಲಕ್ಷ್ಯ ವಹಿಸಿದ್ದಾರೆ. ಆದರೆ ನಮ್ಮ ಭರವಸೆ ಮೇರೆಗೆ ಬ್ಯಾಂಕುಗಳು ಕೆಲಸ ಮಾಡುತ್ತಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಮುಖ್ಯವಾಗಿ ಹೇಳುವುದಾದರೆ, ಕುಡಿಯುವ ನೀರಿನ ಸರಬರಾಜಿನ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ಇದು ಹಳ್ಳಿಗಳಲ್ಲಿರತಕ್ಕ ಮೂಲ ಸಮಸ್ಯೆ. ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕೆಂದು ಸರ್ಕಾರದವರು ಏನೋ ಒಂದು ದಿಟ್ಟ ಹೆಜ್ಜೆಯನ್ನಿಟ್ಟು ಸಾಕಷ್ಟು ಹಳ್ಳಿಗಳಿಗೆ ಕೊಳವೆ ಬಾವಿಗಳನ್ನು ಹಾಕಿಸಿದ್ದಾರೆ, ಹೀಗೆ ಕೊಳವೆ ಬಾವಿಗಳನ್ನು ಹಾಕಿಸಿ ಇವತ್ತಿನ ದಿವಸ ಅನೇಕ ಹಳ್ಳಿಗಳಿಗೆ

ನೀರಿನ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ, ಆದರೆ ಇದರಲ್ಲಿರತಕ್ಕ ಪ್ರಾಯೋಗಿಕ ತೊಂದರೆ ಏನೆಂದರೆ, ಬಿಜಾಪುರ ಜಿಲ್ಲೆ ಬರಗಾಲ ಪೀಡಿತ ಪ್ರದೇಶ, ಅಲ್ಲಿಯೂ ಕೂಡ ೨ ಸಾವಿರ ಕೊಳವೆ ಬಾವಿಗಳನ್ನು ತೋಡಿಸಿದ್ದಾರೆ. ಇಡೀ ಬಿಜಾಪುರ ಜಿಲ್ಲೆಗೆ (ಅತಿ ದೊಡ್ಡ ಜಿಲ್ಲೆ) ಒಂದೇ ಒಂದು ಪಿ ಹೆಚ್.ಇ. ಡಿವಿಜನ್‌ಅನ್ನು ತೆರೆದಿದ್ದಾರೆ. ಅಲ್ಲಿ ಹಾಕಿರುವ ೨ ಸಾವಿರ ಕೊಳವೆ ಬಾವಿಗಳ ಪೈಕಿ ಸುಮಾರು ೫೦೦ ಬಾವಿಗಳು ರಿಪೇರಿಯಾಗಬೇಕಾಗಿದೆ. ಅಲ್ಲಿರತಕ್ಕ ಸಿಬ್ಬಂದಿಯು ಕಡೆಯಿಂದ ಅಷ್ಟು ಬಾವಿಗಳನ್ನು ರಿಪೇರಿ ಮಾಡುವುದಕ್ಕಾಗುವುದಿಲ್ಲ. ಹೆಚ್ಚೆಂದರೆ ೨೦೦ ಬಾವಿಗಳನ್ನು ರಿಪೇರಿಮಾಡಬಹುದು. ಇನ್ನು ಉಳಿದ ೩೦೦ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ಯಾವುದೇ ರೀತಿಯ ವ್ಯವಸ್ಥೆ ಇಲ್ಲ. ಒಂದು ವೇಳೆ ಇರತಕ್ಕ ಸಿಬ್ಬಂದಿ ವರ್ಗದವರು ರಾತ್ರಿ-ಹಗಲು ಕಷ್ಟಪಟ್ಟು ಕೆಲಸ ಮಾಡಿದರೆ ೩೦೦ ಬಾವಿಗಳನ್ನು ರಿಪೇರಿ ಮಾಡಬಹುದು. ಆದರೂ ಕೂಡ ಇನ್ನೂ ೨೦೦ ಬಾವಿಗಳು ಹಾಗೆ ಉಳಿಯುತ್ತವೆ. ಆದ್ದರಿಂದ, ಇಂಥ ಬಾವಿಗಳನ್ನು ರಿಪೇರಿ ಮಾಡುವ ಸಲುವಾಗಿ ಸಾಕಷ್ಟು ಸಿಬ್ಬಂದಿಯನ್ನು ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಅವರಿಗೆ ಯಾವುದೇ ರೀತಿಯ ವಾಹನಗಳು ಇಲ್ಲ. ಹಳ್ಳಿಗಳ ಕಡೆ ತಿರುಗಾಡಿ ಕೊಳವೆ ಬಾವಿಗಳನ್ನು ರಿಪೇರಿ ಮಾಡುವುದಕ್ಕೆ ಅವರಿಗೆ ವಾಹನಗಳನ್ನು ಮಾಡಿಕೊಟ್ಟರೆ, ತುಂಬ ಅನುಕೂಲವಾಗುತ್ತದೆ. ಇಂಥ ಪ್ರಾಯೋಗಿಕ ತೊಂದರೆಗಳನ್ನು ಸರ್ಕಾರದವರು ತಿಳಿದುಕೊಳ್ಳದೆ ಹೋದರೆ ಹೇಗೆ? ಒಟ್ಟಿನಲ್ಲಿ, ಅಷ್ಟೂ ಬಾವಿಗಳು ರಿಪೇರಿಯಾಗುವುದಕ್ಕೆ ಏನೇನು ವ್ಯವಸ್ಥೆ ಮಾಡಬೇಕೋ ಅದನ್ನೆಲ್ಲ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಹೆಚ್ಚಿನ ಪ್ರಯತ್ನ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ನಮ್ಮ ಪ್ರದೇಶದಲ್ಲಂತೂ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಈ ಒಂದು ಸಮಸ್ಯೆಯ ಕಡೆ ಸರ್ಕಾರ ಹೆಚ್ಚಿನ ಆಸಕ್ತಿವಹಿಸಿ ಸಾವಿರಾರು ವರ್ಷಗಳಿಂದ ನರಳುತ್ತಿರುವ ಜನರಿಗೆ ಕುಡಿಯುವ ನೀರನ್ನು ಒದಗಿಸದೆ ಹೋದರೆ ಸ್ವಾತಂತ್ರ್ಯ ಸಿಕ್ಕಿಯೂ ನಿಷ್ಫಲ ಎಂಬ ಮಾತನ್ನು ಕೇಳುತ್ತಿದ್ದೇವೆ. ಇವತ್ತಿನ ದಿವಸ ಕುಡಿಯುವ ನೀರನ್ನು ಸರಬರಾಜು ಮಾಡುವ ಸಲುವಾಗಿ ಎಸ್. ಆರ್.ಡಬ್ಲ್ಯು.ಎಸ್. ಯೋಜನೆ ಮೂಲಕ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಇದರ ಬಗ್ಗೆ ಮಾತನಾಡುವುದಾದರೆ, ನನ್ನ ತಾಲೂಕಿನಲ್ಲಿ ಅನೇಕ ಯೋಜನೆಗಳು ೭-೮ ವರ್ಷಗಳ ಹಿಂದೆ ಪ್ರಾರಂಭವಾದವು ಇವತ್ತಿನವರೆಗೂ ಮುಗಿದಿಲ್ಲ, ಏತಕ್ಕೆ ಮುಗಿದಿಲ್ಲವೆಂದು ಕೇಳಿದರೆ ಪೈಪು ಸಿಕ್ಕುತ್ತಿಲ್ಲ ಸಿಮೆಂಟ್ ಸಿಕ್ಕುತ್ತಿಲ್ಲವೆಂದು ಹೇಳುತ್ತಿದ್ದಾರೆ. ಇಷ್ಟು ವರ್ಷಗಳಾದರೂ ಹಳೇ ಯೋಜನೆಗಳನ್ನು ಪೂರ್ಣ ಮಾಡುತ್ತಿಲ್ಲ, ಮತ್ತು ಹೊಸ ಯೋಜನೆಗಳನ್ನು ಹಾಕುತ್ತಿಲ್ಲ. ನನ್ನ ಮತ್ತು ರಾಮದುರ್ಗ ತಾಲ್ಲೂಕುಗಳ ಸಿಪ್ರವತಿ ಮತ್ತು ನಂದಿಯಾಳ ಎಂಬ ಒಂದೆರಡು ಹಳ್ಳಿಗಳಿಗೆ ಈ ಒಂದು ಯೋಜನೆಯನ್ನು ಕಳೆದ ೮ ವರ್ಷಗಳ ಹಿಂದೆ ಕೈಗೊಂಡರು. ಇದರ ಸಲುವಾಗಿ ಶೇಕಡ ೧೦ರಷ್ಟು ಹಣವನ್ನು ಕೊಡಬೇಕೆಂದು ಆ ಹಳ್ಳಿಗರಿಗೆ ಹೇಳಿದಾಗ ಅವರು ಕೊಟ್ಟುಬಿಟ್ಟರು. ಆದರೆ ಇವತ್ತಿನವರೆಗೂ ಆ ಹಳ್ಳಿಯವರಿಗೆ ಈ ಯೋಜನೆಯನ್ನು ಪೂರ್ಣ ಮಾಡಿಕೊಟ್ಟಿಲ್ಲ. ಆ ಹಳ್ಳಿಗಳ ಹೆಣ್ಣು ಮಕ್ಕಳು ಇವತ್ತಿನ ದಿವಸ ಸುಮಾರು ೮ ಕಿಲೋಮೀಟರ್ ದೂರ ಹೋಗಿ ನೀರನ್ನು ತರತಕ್ಕ ಪರಿಸ್ಥಿತಿ ಇದೆ. ನಾನು ಒಮ್ಮೆ ಅಲ್ಲಿಗೆ ಬೇಟಿ ನೀಡಿದ್ದಾಗ ಒಬ್ಬ ಹೆಣ್ಣುಮಗಳು ನೀರನ್ನು ತಲೆ ಮೇಲೆ ಹೊತ್ತು ಹೊತ್ತು ನನ್ನ ತಲೆ ಕೂದಲುಗಳು ಎಷ್ಟು ಉದುರಿ ಹೋಗಿವೆ ನೋಡಿ ಎಂದು ತೋರಿಸಿದಾಗ, ನಿಜವಾಗಿಯೂ ಕೂದಲುಗಳು ಉದುರಿದ್ದವು. ಸುಮಾರು ೨೦-೩೦ ವರ್ಷಗಳ ಕಾಲ ನೀರನ್ನು ಹೊತ್ತ ಪ್ರತಿಫಲ ಆ ಹೆಣ್ಣುಮಕ್ಕಳ ಕೂದಲು ಉದುರಿರುವುದು. ಇದು ಆ ಪ್ರದೇಶದ ಎಲ್ಲ ಹೆಣ್ಣುಮಕ್ಕಳ ಸಮಸ್ಯೆಯಾಗಿರುವುದನ್ನು ತಾವು ನೋಡಬಹುದು. ಇಂಥ ಸಮಸ್ಯೆಗಳ ಬಗ್ಗೆ ಸರ್ಕಾರ ಲಕ್ಷ್ಯ ವಹಿಸದೆ ಹೋದರೆ ಇನ್ನೂ ಹೆಚ್ಚಿನ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾದ ದಿನಗಳು ಬರುತ್ತವೆ. ಉದಕ್ಕೋಸ್ಕರ. ಎಸ್ ಆರ್ ಡಬ್ಲ್ಯು.ಎಸ್. ಯೋಜನೆಯ ಮೂಲಕ ಹೊಸ ಕಾರ್ಯಕ್ರಮಗಳನ್ನು ಏನು ತೆಗೆದುಕೊಳ್ಳುತ್ತೀರಿ ಆದರಲ್ಲಿ ಯಾರು ಮೊಟ್ಟಮೊದಲನೆಯದಾಗಿ ಶೇಕಡ ೧೦ರಷ್ಟು ಹಣವನ್ನು ಕಟ್ಟುತ್ತಾರೆ ಅವರಿಗೆ ಪ್ರಾತಿನಿಧ್ಯವನ್ನು ಕೊಡಬೇಕೆಂದು ಏನು ಮಾಡಿದ್ದೀರಿ ಅದಕ್ಕಿಂತ ಹೆಚ್ಚಾಗಿ ಹೇಳುವುದಾದರೆ ಯಾವ ಯಾವ ತಾಲ್ಲೂಕುಗಳಲ್ಲಿ ಅತಿ ಹೆಚ್ಚಿನ ಸಮಸ್ಯೆ ಇದೆ ಅದರ ಅದರ ಕಡೆ ತೀವ್ರ ಆಸ್ತೆ ವಹಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹಣವನ್ನು ಕಟ್ಟಿ ೧೦-೧೨ ವರ್ಷಗಳಾಗಿದ್ದರೂ ಚಿಂತೆ ಇಲ್ಲ, ಅದರ ಕಡೆ ಹೆಚ್ಚಿಗೆ ಲಕ್ಷ್ಯ ವಹಿಸಿದೆ ನೀರಿನ ಸಮಸ್ಯೆ ಎಲ್ಲಿ ತೀವ್ರವಾಗಿ ಇದೆ ಅಂಥ ಹಳ್ಳಿಗಳ ಕಡೆ ಹೆಚ್ಚಿನ ಗಮನ ಹರಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಸರಿಪಡಿಸಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ತಾವು ಡಬ್ಲ್ಯು. ಹೆಚ್.ಓ. ಇತ್ಯಾದಿ ಸಂಸ್ಥೆಗಳ ಮೂಲಕ ಪೌಷ್ಟಿಕ ಆಹಾರವನ್ನು ಹಳ್ಳಿಯಲ್ಲಿರುವ ಶಾಲಾ ಬಾಲಕರಿಗೆ ಒದಗಿಸುವ ಯೋಜನೆಯನ್ನು ಏನು ಕೈಗೊಂಡಿದ್ದೀರಿ ಆದರ ಕಡೆ ಸರ್ಕಾರಿ ಅಧಿಕಾರಿಗಳು ಹೆಚ್ಚಿನ ಆಸಕ್ತಿ

ವಹಿಸಂತ್ತಿಲ್ಲ. ನಮ್ಮ ನಾಡಿನಲ್ಲಿ ನಾಕಷ್ಟು ಪೌಷ್ಟಿಕ ಆಹಾರ ದೊರೆಯುತ್ತಿದ್ದರೆ ಅದನ್ನು ಸಂಬಂಧಪಟ್ಟ ತಾಲ್ಲೂಕಿನ ಬಾಲಕರಿಗೇ ಹಂಚಬೇಕೆಂದು ಆಗ್ರಹಪಡಿಸುತ್ತೇನೆ. ಈ ಒಂದು ಪೌಷ್ಟಿಕ ಆಹಾರದ ಕಾರ್ಯಕ್ರಮದ ಸಲುವಾಗಿ ನನ್ನ ಒಂದು ತಾಲ್ಲೂಕಿಗೆ ೫೦ ಸಾವಿರರೂಪಾಯಿ ಮಂಜೂರಾಗಿದೆ. ಆದರೆ ಇವತ್ತಿನವರೆಗೂ ಅದರ ಬಗ್ಗೆ ಅಧಿಕಾರಿಗಳು ಲಕ್ಷ್ಯ ವಹಿಸಿಲ್ಲ. ಈ ಬಗ್ಗೆ ಜಾಯಿಂಟ್ ಡೈರೆಕ್ಟರ್‌ರವರಿಗೆ ಹೇಳಿದರೂ ಕೂಡ ಅದನ್ನು ಮ್ಯಾನೇಜ್ ಮಾಡುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಅದರ ಬಗ್ಗೆ ಲಕ್ಷ್ಯ ವಹಿಸಬೇಕೆಂದು ಹೇಳುತ್ತೇನೆ. ನಾವು ಇವತ್ತಿನ ದಿವಸ ಪಂಚಾಯಿತಿಗಳನ್ನು ಹೆಚ್ಚಿನ ಊರ್ಜಿತ ಸ್ಥಿತಿಗೆ ತರಬೇಕಾಗಿದೆ. ಅವುಗಳ ಕಡೆ ಹೆಚ್ಚಿನ ಗಮನ ಕೊಡಬೇಕಾಗಿದೆ ಮುಖ್ಯವಾಗಿ ಮೆಹತಾ ಕಮಿಟಿಯವರು ಕೂಡ ಹಳ್ಳಿಗಳಲ್ಲಿರತಕ್ಕ ಮೂಲಭೂತವಾದ ಸಮಸ್ಯೆಗಳನ್ನು ವಿವರವಾಗಿ ತಮ್ಮ ವರದಿಯಲ್ಲಿ ಒದಗಿಸಿದ್ದಾರೆ.

೪–೩೦ ಪಿ.ಎಂ.

ಈ ವರದಿಯನ್ನು ಸರ್ಕಾರದ ಮುಂದಿಟ್ಟು ಪರಿಶೀಲನೆ ಮಾಡಿ ಇದರಲ್ಲಿರತಕ್ಕ ಸಲಹೆ ಸೂಚನೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಪ್ರಯತ್ನ ಮಾಡಬೇಕೆಂದು ಸರ್ಕಾರಕ್ಕೆ ನಾನು ಆಗ್ರಹಪಡಿಸುತ್ತಿದ್ದೇನೆ. ಸರ್ಕಾರದ ಕಾರ್ಯಕ್ರಮಗಳು ಸರಿಯಾಗಿ ಜಾರಿಗೆ ಬರಬೇಕಾದರೆ ಪಂಚಾಯಿತಿಗಳು ಉತ್ತಮವಾಗಿ ಕೆಲಸ ಮಾಡಬೇಕಾದರೆ ಅವುಗಳ ಉತ್ಪನ್ನ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು. ಅದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗುತ್ತದೆ. ಉದಾಹರಣೆಗೆ ಪಂಚಾಯಿತಿಗಳ ಆರ್ಥಿಕ ಸ್ಥಿತಿಗತಿಗಳ ಬಗ್ಗೆ ಹೇಳಬೇಕೆಂದರೆ ೫ ಸಾವಿರ ರೂಪಾಯಿ ತಿಂಗಳಿಗೆ ಉತ್ಪನ್ನ ಇದ್ದರೆ ೬ ಸಾವಿರ ರೂಪಾಯಿಗಳಷ್ಟು ಖರ್ಚು ಅಲ್ಲಿರುತ್ತದೆ. ವಿದ್ಯುಚ್ಛಕ್ತಿ, ರಸ್ತೆ ರಿಪೇರಿ ಸಿಬ್ಬಂದಿ ಪಗಾರ, ಮುಂತಾದ ವೆಚ್ಚಗಳನ್ನು ತೆಗೆದುಕೊಂಡರೆ ಉತ್ಪನ್ನಕ್ಕಿಂತಲೂ ಖರ್ಚು ಹೆಚ್ಚಾಗಿರುತ್ತದೆ. ಉತ್ಪನ್ನಕ್ಕಿಂತಲೂ ಖರ್ಚೇ ಜಾಸ್ತಿಯಾಗಿರುವುದರಿಂದ ಪಂಚಾಯ್ತಿಗಳು ಆಸಕ್ತಿ ವಹಿಸಿ ಕಾರ್ಯಕ್ರಮಗಳನ್ನು ಜಾರಿಗೆ ಕೊಡುವುದಕ್ಕಾಗುತ್ತಿಲ್ಲ. ಆದ್ದರಿಂದ ಸರ್ಕಾರ ಪಂಚಾಯಿತಿಗಳ ಆರ್ಥಿಕ ಸ್ಥಿತಿ ಸುಧಾರಿಸುವುದಕ್ಕೆ ಕ್ರಮ ತೆಗೆದುಕೊಂಡರೆ ಪಂಚಾಯಿತಿಗಳು ಉತ್ತಮವಾದ ಕಾರ್ಯಕ್ರಮ ಹಾಕಿಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ನಮ್ಮ ಮಂತ್ರಿಗಳು ಬೇಗಾನೆ ರಾಮಯ್ಯನವರು ಮಹಾತ್ಮ ಗಾಂಧೀಜಿಯವರು ಏನು ರಾಮರಾಜ್ಯವಾಗಬೇಕು ಎಂದು ಹೇಳಿದ್ದರು ಅದನ್ನು ಮಾಡಬೇಕು. ಮಾನ್ಯ ರಾಮಯ್ಯನವರು ರಾಮನ ಹೆಸರನ್ನೇ ಇಟ್ಟುಕೊಂಡಿರುವುದರಿಂದ ಅದೇ ರೀತಿ ರಾಮರಾಜ್ಯವನ್ನಾಗಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳಿ ಅವರು ಈ ಕೆಲಸವನ್ನು ಮಾಡಿ ತೋರಿಸುತ್ತಾರೆಂದು ನಂಬಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಡಿ. ಜಯದೇವರಾಜ ಅರಸ್ (ಚಾಮುಂಡೇಶ್ವರಿ).—ಮಾನ್ಯ ಅಧ್ಯಕ್ಷರೇ, ಇವತ್ತು ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಬೇಡಿಕೆಯನ್ನು ನಮ್ಮ ಮುಂದಿಟ್ಟು ಸಭೆಯ ಮಂಜೂರಾತಿಯನ್ನು ಸರ್ಕಾರದವರು ಕೇಳುತ್ತಿದ್ದಾರೆ. ನಾನು ಮೊದಲನೆಯದಾಗಿ ಒಂದು ವಿಚಾರವನ್ನು ಹೇಳಿ ಮುಂದೆ ಹೋಗುತ್ತೇನೆ. ಬಜೆಟ್ ಭಾಷಣದಲ್ಲಿ ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ "also to decentralise power to make institution more purposeful than democratic" – ಎಂದು. ಇವತ್ತು ನಮ್ಮ ರಾಷ್ಟ್ರಾಧ್ಯಕ್ಷರು ನಮ್ಮ ಬೆಂಗಳೂರು ನಗರದಲ್ಲಿದ್ದಾರೆ. ಅವರು ನಗರದಲ್ಲಿದ್ದಾಗ ಒಂದು ಕಡೆ ಮಾತನಾಡುತ್ತಾ ಹೇಳಿರುವ ಅಂಶವನ್ನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ, ಅವರು "benefits of economic growth are shared by all sections judiciously ಎಂದು a situation has arisen wherein rich becomes richer and poor is never allowed to rise ಎಂದೂ ಹೇಳಿದ್ದಾರೆ. ಈ ಮಾತುಗಳನ್ನು ಇವತ್ತು ಮಧ್ಯಾಹ್ನ ಲಾಲ್‌ಬಾಗಿನಲ್ಲಿ ಮಾತನಾಡುತ್ತಾ ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ಇವರು ಪಂಚಾಯತ್‌ರಾಜ್ ವರದಿಯನ್ನು ಕೊಟ್ಟಿದ್ದಾರೆ. ಇದರಲ್ಲಿ ಹೇಳುತ್ತಾರೆ, aim at making family economical, viable and self sufficient ಎಂದು. ಇವತ್ತು ನಾವು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಶಾಸಕರಾಗಿದ್ದೇವೆ. ಜನರಿಂದ ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ಚುನಾಯಿತರಾಗಿ ಬಂದಿದ್ದೇವೆ. ಹಾಗೆಯೇ ಪಂಚಾಯಿತಿ ಸದಸ್ಯರಾಗಲೀ, ತಾಲ್ಲೂಕು ಬೋರ್ಡ್ ಸದಸ್ಯರಾಗಲೀ ಅವರೂ ಚುನಾಯಿತರಾಗಿ ಬರುತ್ತಾರೆ. ಅದೂ ಕೂಡ ಸ್ವಯಂಸಂಸ್ಥೆ

ಯಾಗಿರಬೇಕು ಎಂಬುದನ್ನು ನಾವು ಒಪ್ಪಿಕೊಂಡಿದ್ದೇವೆ. ಈ ಎಲ್ಲದರ ಹಿನ್ನೆಲೆಯಲ್ಲಿ ಪಂಡಿತ್ ಜವಾಹರ ಲಾಲ್ ನೆಹರೂ ಅವರ ನೇತೃತ್ವದಲ್ಲಿ ೧೯೫೨ನೇ ಇಸವಿಯಲ್ಲಿ ಕಮ್ಯುನಿಟಿ ಡೆವಲಪ್ಮೆಂಟ್ ಪ್ರೋಗ್ರಾಮನ್ನು ಜಾರಿಗೆ ತಂದಿದ್ದೇವೆ. ಕೋಟ್ಯಾಂತರ ರೂಪಾಯಿಯನ್ನು ಗ್ರಾಮಗಳ ಏಳಿಗೆಗಾಗಿ ಖರ್ಚು ಮಾಡ ಬೇಕೆಂಬ ಉದ್ದೇಶದಿಂದ ಈ ಯೋಜನೆಯನ್ನು ಜಾರಿಗೆ ತಂದರು. ಈ ಯೋಜನೆಯು ಮೂರನೇ ಹಂತ ಮುಗಿದಮೇಲೆ ಈ ಜವಾಬ್ದಾರಿಯನ್ನು ಯಾರಿಗೆ ವಹಿಸಬೇಕು ಎಂದಾಗ ಬಲವಂತರಾವ್ ಮೆಹ್ತಾ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿ ಮಾಡಿ ಅದರ ರಿಪೋರ್ಟನ್ನು ಕೂಡ ಪಡೆದಿದ್ದೇವೆ. ಕರ್ನಾಟಕ ಸರ್ಕಾರ ದಲ್ಲಿ ಹಳೇ ಮೈಸೂರು ಎಂದಿದ್ದಾಗ ಡಿಸ್ಟ್ರಿಕ್ಟ್ ಬೋರ್ಡ್ ಎಂದಿದ್ದು ಕರ್ನಾಟಕ ಸರ್ಕಾರದವರು ೧೯೫೯ರಲ್ಲಿ ಸಮಗ್ರವಾಗಿ ಆಲೋಚನೆ ಮಾಡಿ ತಾಲ್ಲೂಕು ಬೋರ್ಡ್ ಆಕ್ಟ್ ತಂದು ಚುನಾವಣೆ ಮಾಡಿ two tier and three tier systems – ಜಾರಿಗೆ ತಂದರು. ಎಲ್ಲೂ three tier system ಪ್ರಕಾರ ಕೆಲಸ ಮಾಡುತ್ತಿಲ್ಲ. ೧೯೬೧ ರಿಂದ ೧೯೭೭ರವರೆಗೆ ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿ ಗಳು ನಿಜವಾಗಿಯೂ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಿಕೊಂಡು ಬಂದಿದೆ. ಆದರೆ ೧೯೭೮ರಿಂದೀಚೆಗೆ ಕಮ್ಯುನಿಟಿ ಡೆವಲಪ್ಮೆಂಟ್ ಪ್ರೋಗ್ರಾಂ ಏನು ಹಾಕಿದ್ದೀರಿ ಆ ತತ್ವದ ರೀತ್ಯಾ ಕಾರ್ಯ ಆಗುತ್ತಿಲ್ಲ. ಕಮ್ಯುನಿಟಿ ಡೆವಲಪ್ಮೆಂಟ್ ಸ್ಕೀಮಿಗೆ ಸರ್ಕಾರ ಸರಿಯಾಗಿ ಹಣ ಕೊಡುತ್ತಿರಲಿಲ್ಲ. ರೈತನ ಅಭಿವೃದ್ಧಿ ಗಾಗಿ, ಗ್ರಾಮಗಳ ಅಭಿವೃದ್ಧಿಗಾಗಿ ತಾಲ್ಲೂಕು ಬೋರ್ಡ್‌ಗಳು ಮತ್ತು ಪಂಚಾಯಿತಿಗಳ ಮೂಲಕ ಜನ ರನ್ನು ಪಾರ್ಟಿಸಿಪೇಟ್ ಮಾಡಿಸಿ ಜನರು ಆ ಕಾರ್ಯದಲ್ಲಿ ಭಾಗಿಯಾಗುವಂತೆ ಕಾರ್ಯವನ್ನು ಮಾಡುತ್ತಿ ದ್ದರೂ ಗ್ರಾಮಗಳಲ್ಲಿ ಕೆಲಸವಾಗಬೇಕಾದರೆ ಸೆಕ್ರೆಟೇರಿಯೆಟ್‌ನಿಂದ ಕಾರ್ಯ ನಡವಳಿಕೆ ಆಗುವ ಪದ್ಧತಿ ಇತ್ತೀಚೆಗೆ ನಡೆದುಕೊಂಡು ಬಂದಿದೆ. ಮಾನ್ಯ ಅರ್ಥ ಮಂತ್ರಿಗಳು ಬಜೆಟ್ ಭಾಷಣದಲ್ಲಿ ಹೇಳಿದ ಮಾತಿಗೆ ಅನುಗುಣವಾಗಿ ಯಾವರೀತಿ ಕೆಲಸಕಾರ್ಯಗಳನ್ನು ಮಾಡುತ್ತಾರೆ ಎಂಬುದರ ಬಗ್ಗೆ ವರದಿಯಲ್ಲಿ ಕೊಟ್ಟಿಲ್ಲ. ಡೀಸೆಂಟ್ರಲೈಸೇಷನ್ ಆಫ್ ಪವರ್ ಮಾಡಿ ಹಣವನ್ನು ಹೆಚ್ಚು ಕೊಟ್ಟು ಗ್ರಾಮಗಳ ಅಭಿ ವೃದ್ಧಿ ಮಾಡಬೇಕು ಎಂದು ಹೇಳುತ್ತೀರಿ. ಆದರೆ ಅದು ಎಷ್ಟರಮಟ್ಟಿಗೆ ಸಫಲವಾಗುತ್ತಿದೆ ಎಂಬುದನ್ನು ನೋಡಬೇಕಾಗಿದೆ. ನಿಮ್ಮ ವರದಿಯಲ್ಲಿ ಕೊಟ್ಟಿರುವುದನ್ನು ನೋಡಿದರೆ ಮೊದಲನೇ ಪುಟದಲ್ಲಿ ಕೊಟ್ಟಿರು ವಂತೆ ೧೯೭೯–೮೦ನೇ ಸಾಲಿಗೆ ೪೩ ಲಕ್ಷ ಅಲಾಟ್‌ಮೆಂಟ್ ಮಾಡಿದ್ದು ೨೩,೧೫,೯೭೫ ರೂಪಾಯಿ ಖರ್ಚು ಮಾಡಿದ್ದೀರಿ. ೧೩ ಐಟಂಗಳನ್ನು ಇಲ್ಲಿ ಕೊಟ್ಟಿದ್ದೀರಿ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ೪೩ ಲಕ್ಷ ಏನು ಇದಕ್ಕಾಗಿ ಇಟ್ಟಿದ್ದೀರಿ ಅದು ಕಡಿಮೆ. ಮಾರ್ಚಿ ಕೊನೆಯವರೆಗೆ ೨೩ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇದರಿಂದ ಕೊನೇ ಮೂರು ನಾಲ್ಕು ತಿಂಗಳು ಸರಿಯಾಗಿ ಖರ್ಚಾಗಿಲ್ಲ ಎಂಬುದು ಎದ್ದು ಕಾಣುತ್ತಿದೆ. ಆದರೆ ಈ ವರ್ಷ ಕೇವಲ ೨೫ ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. Education, Agriculture, Health and Sanitation, Roads, Training of Block Accountants & Panchayat Secretaries, Publication of Karnataka Vikasa Journal. Loans to village Panchayats for creation of remunerative assets. Loans to cultivators, promotion and strengthening of Mahila Mandals, Training of Associate Women workers, incentive award to Mahila Mandals, Gnana Mandiras etc., ಇವೆಲ್ಲಾ ಕಾರ್ಯಕ್ರಮಗಳಿಗೆ ೨೫ ಲಕ್ಷ ರೂಪಾಯಿ ಇಟ್ಟಿದ್ದೀರಿ. ಹೋದಸಾರಿ ೪೩ ಲಕ್ಷ ಇಟ್ಟಿದ್ದನ್ನು ಈ ವರ್ಷ ೨೫ ಲಕ್ಷ ರೂಪಾಯಿಗೆ ಇಳಿಸಿದ್ದೀರಿ. ಹೋದ ವರ್ಷ ೨೩ ಲಕ್ಷ ರೂಪಾಯಿ ಖರ್ಚಾಯಿತು ಎಂದು ಈ ವರ್ಷ ೨೫ ಲಕ್ಷ ರೂಪಾಯಿ ಇಟ್ಟಿದ್ದೀರಿ. ಹೋದ ವರ್ಷ ಎಷ್ಟು ಖರ್ಚಾಗಿದೆ ಎಂಬುದನ್ನು ನೋಡಿಕೊಂಡು ಅದೇ ಪ್ರಕಾರ ಈ ವರ್ಷವೂ ಖರ್ಚು ಮಾಡಬೇಕು ಎಂದು ಹೇಳುವುದು ಅಷ್ಟು ಸರಿಯಾದುದಲ್ಲ. ೪೩ ಲಕ್ಷ ರೂಪಾಯಿಯಲ್ಲಿ ಕೇವಲ ೨೩ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆಂದರೆ ಸರ್ಕಾರದಿಂದ ಹಣ ರಿಲೀಸ್ ಮಾಡಲಿಲ್ಲವೋ ಅಥವಾ ಪರ್‌ಫಾರ್ಮೆನ್ಸ್ ಸರಿಯಾಗಿ ಆಗಲಿಲ್ಲವೋ ಎಂದು ಅನುಮಾನ ಯಾರಿಗಾ ದರೂ ಬರುತ್ತದೆ. ತಾಲ್ಲೂಕು ಬೋರ್ಡ್ ಮತ್ತು ಪಂಚಾಯಿತಿಗಳಿಗೆ ಕೊಡತಕ್ಕ ಹಣವನ್ನು ಮಾತ್ರ ದಯವಿಟ್ಟು ಲ್ಯಾಪ್ಸ್ ಆಗುವಂತೆ ಮಾಡಬೇಡಿ. ಅವರಿಗೆ ಕೊಡಬೇಕಾದ ಹಣವನ್ನು ಪೂರ್ತಿ ಕೊಟ್ಟು ಯಾವುದಾದರೂ ಬ್ಯಾಂಕಿನಲ್ಲಿ ಅಕೌಂಟ್ ಇಟ್ಟುಕೊಂಡು ಹಣ ಬಂದೋಬಸ್ತಾಗಿರುವುದಕ್ಕೆ ವ್ಯವಸ್ಥೆ ಮಾಡಿ. ಸೆಕ್ರೆಟೇರಿಯೇಟ್ ಲೆವೆಲ್‌ನಲ್ಲಾದರೆ ಸಂಬಳ ಕೊಡಬೇಕು ಎಂದರೆ ನಾಳೆ ಬೆಳಿಗ್ಗೆಯೇ ಪೇಮೆಂಟ್ ಆಗಿರುತ್ತದೆ. ಆದರೆ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಕೊಡತಕ್ಕ ಹಣ

ಮಾತ್ರ ಸರಿಯಾದ ಸಮಯದಲ್ಲಿ ಕೊಡುವುದಿಲ್ಲ. ನಾನು ೩೦ ವರ್ಷ ಪಂಚಾಯಿತಿ ಛೇರ್ಮನ್, ೮ ವರ್ಷ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೆ. ನನಗೆ ಈ ಕಷ್ಟಗಳೆಲ್ಲಾ ಚೆನ್ನಾಗಿ ಗೊತ್ತು. ಮಾರ್ಚ್ ೨೯, ೩೦ ಮತ್ತು ೩೧ನೇ ತಾರೀಖು ಆದರೆ ನಾನು ಡಿಸ್ಟ್ರಿಕ್ಟ್ ಆಫೀಸ್ ಬಿಟ್ಟು ಹೊರಗಡೆ ಹೋಗುತ್ತಿರಲಿಲ್ಲ. ಹಣವನ್ನು ಲ್ಯಾಪ್ಸ್ ಆಗದಂತೆ ನೋಡಿಕೊಳ್ಳುವುದಕ್ಕೋಸ್ಕರ ಆ ದಿನಗಳಲ್ಲಿ ನಾನು ಅಲ್ಲೇ ಇದ್ದು ಸರಿಯಾಗಿ ನೋಡಿಕೊಳ್ಳುತ್ತಿದ್ದೆ. ಆದ್ದರಿಂದ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳಿಗೆ ಕೊಡತಕ್ಕ ಹಣವನ್ನು ಪೂರ್ತಿಯಾಗಿ ಸರಿಯಾದ ವೇಳೆಯಲ್ಲಿ ಕೊಟ್ಟು ಅವರು ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹೋದವರ್ಷ ೪೩ ಲಕ್ಷ ರೂಪಾಯಿ ಇಟ್ಟಿದ್ದು ೨೩ ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಿದೆ ಎಂಬ ಕಾರಣಕ್ಕಾಗಿ ಈ ವರ್ಷ ೨೫ ಲಕ್ಷ ರೂಪಾಯಿ ಇಟ್ಟಿರುವುದು ಸರಿಯಲ್ಲ. ಇದನ್ನು ೫೦ ಲಕ್ಷ ರೂಪಾಯಿಗೆ ಹೆಚ್ಚಿಸಿ ಹಲವಾರು ಕಾರ್ಯಕ್ರಮಗಳನ್ನು ಏನು ಇದರಲ್ಲಿ ತೋರಿಸಿದ್ದೀರಿ ಅವುಗಳಿಗೆ ಖರ್ಚು ಮಾಡುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ. ೧೭೫ ತಾಲ್ಲೂಕುಗಳಿಗೆ ಲೆಕ್ಕಹಾಕಿದರೆ ಒಂದೊಂದು ತಾಲ್ಲೂಕಿಗೆ ೧೪,೨೮೦ ರೂಪಾಯಿ ಹಣ ೧೩ ಐಟಂಗಳಿಗೆ ಬಂದರೆ ಏನು ಕೆಲಸ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಇದರಿಂದ ಜನರಿಗೆ ಪ್ರಯೋಜನವಾಗುವಂಥ ಯಾವ ಕಾರ್ಯವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ? ಸಿಬ್ಬಂದಿ ವೆಚ್ಚಕ್ಕೆ ಎಷ್ಟು ಖರ್ಚಾಗುತ್ತದೆ, ಎಷ್ಟು ಹಣ ಇಟ್ಟಿದ್ದೀರಿ ಎಂಬುದಕ್ಕೆ ಲೆಕ್ಕ ಕೊಟ್ಟಿಲ್ಲ. ಕೊಡುವ ಹಣದಲ್ಲಿ ಬಹುಪಾಲು ಸಂಬಳ ಸಾರಿಗೆಗೇ ಖರ್ಚಾದರೆ ಅಭಿವೃದ್ಧಿ ಕಾರ್ಯ ಏನು ಮಾಡುವುದಕ್ಕಾಗುತ್ತದೆ ? ಪ್ರತಿ ತಿಂಗಳೂ ಇಷ್ಟಾಯಿತು ಎಂದು ಸ್ಟಾಟಿಸ್ಟಿಕ್ಸನ್ನು ಡೆಪ್ಯುಟೀ ಕಮಿಷನರ್ ರವರಿಗೆ ಕಳಿಸುವುದು ಮಾತ್ರ ಕೆಲಸವೇ ? ಇಲ್ಲಿ ಮಾಡಿರುವುದು ಮೂಗಿಗಿಂತ ಮೂಗುತಿ ಭಾರ ಎನ್ನುವಂತಾಗಿದೆ. ಅವರಿಗೆ ಕೊಡತಕ್ಕ ಹಣವನ್ನು ಇದ್ದಕ್ಕಿದ್ದ ಹಾಗೆ ಕಡಿಮೆ ಮಾಡಿದರೆ ಅವರು ಏನು ಮಾಡಬೇಕು ? ಒಂದು ಲಕ್ಷ ರೂಪಾಯಿ ಸಿಬ್ಬಂದಿ ವೆಚ್ಚಕ್ಕೆ ಖರ್ಚಾಗುವ ಕಡೆ ೧೦ ಸಾವಿರ ರೂಪಾಯಿನಲ್ಲಿ ಮಾತ್ರ ಮಾಡು ಎಂದರೆ ಹೇಗೆ ಮಾಡುವುದಕ್ಕಾಗುತ್ತದೆ ? ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳ ಮತ್ತು ಪಂಚಾಯಿತಿಯ ಛೇರ್ಮನ್‌ಗಳ ಸಮ್ಮೇಳನ ಇದೇ ಬೆಂಗಳೂರು ನಗರದಲ್ಲಿ ನವೆಂಬರ್ ತಿಂಗಳಲ್ಲಿ ನಡೆದಾಗ ಅವರು ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಾಗ ಅವುಗಳಿಗೆ ಹೆಚ್ಚಿನ ಹಣ ಮತ್ತು ಅಧಿಕಾರ ಕೊಡುತ್ತೇವೆ ಎಂದು ಅಂದಿನ ಮುಖ್ಯಮಂತ್ರಿಗಳು ಹೇಳಿದ್ದರು. ಅದು ಪೂರ್ಣವಾಗಿ ಜಾರಿಗೆ ಬಂದಿಲ್ಲ. Horticulture, Fisheries, Sheep-rearing minor irrigation, rural housing schemes, drinking water supply, Schemes on Social Welfare, and Backward welfare measures, Rural Health and sanitation, nursery education for children, cottage industries, Khadi Board industries ಇವೆಲ್ಲಾ ಕಾರ್ಯಕ್ರಮಗಳಿವೆ. ತಾಲ್ಲೂಕು ಬೋರ್ಡ್ ಅಧ್ಯಕ್ಷರುಗಳು ೨೫ ಅಂಶಗಳನ್ನು ಕೇಳಿದ್ದು ಅದರಲ್ಲಿ ೧೫ ಅಂಶಗಳನ್ನು ಕೊಡುವುದಕ್ಕೆ ಸಾಧ್ಯವಾಗಬಹುದು ಎಂದು ನನ್ನ ಮಟ್ಟಿಗೆ ತಿಳಿವಳಿಕೆಗೆ ಬಂದಿದೆ. ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡರೂ, ಇಲಾಖಾ ಮುಖ್ಯಸ್ಥರು ಇವತ್ತಿನವರೆಗೆ ಈ ಬಗ್ಗೆ ಆಸಕ್ತಿ ವಹಿಸಿಲ್ಲ. ಕಮ್ಯುನಿಟಿ ಡೆವಲಪ್‌ಮೆಂಟ್ ಸ್ಕೀಂ ನಿಂತುಹೋದಮೇಲೆ ಪಂಚಾಯತ್ ರಾಜ್ ಎಂದು ಹೇಳಿ ಪಂಚಾಯಿತಿಗಳು ಮತ್ತು ಜಿಲ್ಲಾ ಪರಿಷತ್ತುಗಳು ಕಾರ್ಯ ಮಾಡಬೇಕು ಎಂದು ಇಡೀ ದೇಶದಲ್ಲಿ ಜಾರಿಗೆ ಬಂತು. ಈ ಸಂಸ್ಥೆಗಳು ಸರ್ಕಾರಕ್ಕೂ ಮತ್ತು ಜನರಿಗೂ ಮಧ್ಯವರ್ತಿಯಾಗಿ ಕೆಲಸ ಮಾಡಬೇಕು ಎಂದು ಆ ಸಂಸ್ಥೆಗಳಿಗೆ ಕೆಲವು ಜವಾಬ್ದಾರಿಯನ್ನು ಕೊಡಲಾಗಿದೆ. ನವೆಂಬರ್ ತಿಂಗಳಲ್ಲಿ ನಡೆದ ಸಮ್ಮೇಳನದಲ್ಲಿ ಮಾಡಿದ ಸಲಹೆಗಳನ್ನು ಸರ್ಕಾರದವರು ಒಪ್ಪಿಕೊಂಡು ಪ್ರಥಮ ಹಂತವಾಗಿ ಕೆಲವು ಐಟಂಗಳನ್ನು ಕೊಡುತ್ತೇವೆ, ಇದನ್ನು ಬಳಸಿಕೊಂಡು ಸರಿಯಾಗಿ ಉಪಯೋಗ ಮಾಡಿದಮೇಲೆ ಮತ್ತೆ ಹೆಚ್ಚು ಅಧಿಕಾರವನ್ನು ಕೊಡುತ್ತೇವೆ ಎಂದು ಹೇಳಿದ್ದರು. ಇವತ್ತು ೨೦ ಅಂಶದ ಕಾರ್ಯಕ್ರಮ ಎಂದು ಸರ್ಕಾರದವರು ಹೇಳುತ್ತಿದ್ದಾರೆ ಇದನ್ನು ಯಾರು ನಡೆಸುತ್ತಿದ್ದಾರೆ ? ೨೦ ಅಂಶದ ಕಾರ್ಯಕ್ರಮವನ್ನು ಜಾರಿಗೆ ತರಲು ಕಮಿಟಿಗಳನ್ನು ಮಾಡಿದ್ದೀರಿ. ಈ ಕಮಿಟಿಯವರು ಕುಳಿತುಕೊಂಡು ರಿವ್ಯೂ ಮಾಡುವುದಕ್ಕೆ ಅಧಿಕಾರ ಇದೆಯೇ ಹೊರತು ಜಾರಿಗೆ ತರಲು ಹೆಚ್ಚಿನ ಅಧಿಕಾರ ಇಲ್ಲ. ಹಲವಾರು ಕಾರ್ಯಕ್ರಮಗಳನ್ನು ಪಂಚಾಯಿತಿಗಳು ಮತ್ತು ತಾಲ್ಲೂಕು ಬೋರ್ಡುಗಳ ಮೂಲಕ ಮಾಡುವ ಯೋಜನೆ ಮಾಡಿದ್ದೀರಿ. ಉದಾಹರಣೆಗೆ ಹೇಳುವುದಾದರೆ ಬೋರ್‌ವೆಲ್‌ಗಳನ್ನು ಮಾಡುವ ಕಾರ್ಯವನ್ನು ಯಾರಿಗೆ ವಹಿಸಿದ್ದೀರಿ ? ತಾಲ್ಲೂಕು ಬೋರ್ಡ್

ನವರಿಗೆ ಕೊಟ್ಟಿದ್ದೀರಾ ಅಥವಾ ಕೊಡುವುದಕ್ಕೆ ಯೋಚನೆ ಮಾಡಿದ್ದೀರಾ ? ೯೨೧೨ ಹಳ್ಳಿಗಳಿಗೆ ಬೋರ್‌ವೆಲ್‌ಗಳನ್ನು ಹಾಕಿದ್ದೇವೆ ಎಂದು ಹೇಳಿದ್ದೀರಿ. ಅದರಲ್ಲಿ ಸುಮಾರು ೨೧ ಸಾವಿರ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿದ್ದೇವೆ ಎಂದು ಹೇಳಿದ್ದೀರಿ. ಎರಡು ಮೂರು ಸಾರಿ ಬೋರ್‌ವೆಲ್‌ಗಳನ್ನು ರಿಪೇರಿ ಮಾಡಿಸಿದ್ದಾರೆ. ಒಂದೊಂದು ಸಾರಿ ರಿಪೇರಿ ಆಗಬೇಕಾದರೆ ಎರಡು ಮೂರು ತಿಂಗಳಾಗುತ್ತವೆ. ಮೊದಲು ಓಪನ್ ವೆಲ್ಸ್ ಇತ್ತು. ನಲ್ಲಿ ನೀರು ಬಂತು ಎಂದು ಅದನ್ನು ಉಪಯೋಗಿಸುವುದನ್ನು ಬಿಟ್ಟರು. ಈಗ ಅದೂ ಇಲ್ಲ. ಇದೂ ಇಲ್ಲ ಹಾಗಾಗಿದೆ. ಈಗ ಕುಡಿಯುವುದಕ್ಕೆ ಒಳ್ಳೆಯ ನೀರು ಸಿಗುವುದೇ ಕಷ್ಟವಾಗಿದೆ ಕೊಳಚೆ ನೀರನ್ನು ಕುಡಿಯುವ ಸಂದರ್ಭ ಒದಗಿಬಂದಿದೆ. ಸರ್ಕಾರ ಯೂನಿಸೆಫ್‌ನಿಂದ ಸಹಾಯ ಪಡೆದು ಬೋರ್‌ವೆಲ್‌ಗಳನ್ನು ಮಾಡುವ ಕಾರ್ಯ ಕೈಗೊಂಡಿತ್ತು. ಈಗ ತಮ್ಮ ವರದಿಯಲ್ಲಿ 175 posts of mechanics in the grade of Rs. 300 — 700 at the rate of one per taluk has also been sanctioned ಎಂದು ಹೇಳಿದ್ದೀರಿ. ನೀವೇನೋ ಹುದ್ದೆಗಳನ್ನು ಮಂಜೂರು ಮಾಡಿರುತ್ತೀರಿ ಅವರು ಎಲ್ಲಿರುತ್ತಾರೋ ನಮಗೆ ಗೊತ್ತಾಗುವುದಿಲ್ಲ. ಅಸಿಸ್ಟೆಂಟ್ ಇಂಜನಿಯರ್‌ರವರ ಕೈಕೆಳಗೆ ಇರುವ ಕೆಲಸ ಮಾಡುವ ವ್ಯವಸ್ಥೆ ಮಾಡಿದ್ದೀರಿ ಆಮೇಲೆ ಕೆಂಪು ಮತ್ತು ಹಸಿರು ಕಾರ್ಡುಗಳನ್ನು ವರ್ತಮಾನ ತಿಳಿಸುವುದಕ್ಕೆ ಕೊಟ್ಟಿದ್ದೀರಿ ಏನಾದರೂ ಲೋಪದೋಷಗಳಿದ್ದರೆ ಆ ಕಾರ್ಡಿನ ಮೂಲಕ ತಿಳಿಸಿದರೆ ಅವರು ಬಂದು ರಿಪೇರಿ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ದೃಷ್ಟಿಯಿಂದ ಮಾಡಿದ್ದೀರಿ. ಇವರು ಹಾಕಿದ ಕಾರ್ಡು ಅವರಿಗೆ ತಲುಪಿದರೆ ಅವರು ಬಂದು ರಿಪೇರಿ ಮಾಡುತ್ತಾರೆ ಅವರಿಗೆ ಯಾವಾಗ ತಲುಪುತ್ತದೋ, ಅವರು ಯಾವಾಗ ಬಂದು ರಿಪೇರಿ ಮಾಡುತ್ತಾರೋ ಹೇಳುವುದಕ್ಕಾಗುವುದಿಲ್ಲ, ಈಗ ಏನಾಗುತ್ತಿದೆಯೆಂದರೆ ಇವತ್ತು ರಿಪೇರಿ ಮಾಡಿದರೆ ನಾಳೆ ಬೆಳಗ್ಗೆ ಮತ್ತೆ ಕೆಟ್ಟುಹೋಗಿರುತ್ತದೆ. ಮತ್ತೆ ಅವರಿಗೆ ತಿಳಿಸಬೇಕು. ಅವರು ಮತ್ತೆ ಬಂದು ರಿಪೇರಿ ಮಾಡಿದರೂ ಮಾರನೆಯ ದಿವಸ ಮತ್ತೆ ಕೆಟ್ಟುಹೋಗಿರುತ್ತದೆ. ಇದರ ಜೊತೆಗೆ 13 pick-up vans at 1 56,000 Rupees per van have been sanctioned ಎಂದು ಹೇಳಿದ್ದೀರಿ ನೀವು ಒಳ್ಳೆಯ ಉದ್ದೇಶದಿಂದಲೇ ಎಲ್ಲವನ್ನೂ ಮಾಡಿದ್ದೀರಿ. ಆದರೆ ಇದರ ಪ್ರಯೋಜನ ಎಷ್ಟರಮಟ್ಟಿಗೆ ಆಗುತ್ತದೆ ಎಂಬುದನ್ನು ನೋಡಬೇಕಾಗಿದೆ. ವಿಧಾನಸೌಧದಿಂದ ಎಲ್ಲಾ ಕಾರ್ಯಗಳೂ ನಡೆದರೆ ಹಳ್ಳಿಯವರ ಕೂಗು ಇಲ್ಲಿಯವರೆಗೆ ಮುಟ್ಟುವುದಿಲ್ಲ. ಏನೇನು ಕಾರ್ಯಕ್ರಮಗಳನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರೋಗ್ರಾಂನಲ್ಲಿ ಇಂಟಿಗ್ರೇಟ್ ಮಾಡಿದ್ದೀರಿ ಎಲ್ಲವನ್ನೂ ಬೇರ್ಪಡಿಸಿ ಕ್ರಮವಾಗಿ ಹಣವು ಅದರ ಮೂಲಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದೇನಾಗುತ್ತದೋ ಗೊತ್ತಿಲ್ಲ. The Community and Rural Development por folio is an imporatant portfolio. ಇದನ್ನು ಮಾನ್ಯ ಬೇಗಾನೆ ರಾಮಯ್ಯನವರು ಹೊತ್ತಿದ್ದಾರೆ. ಇವರು ಯಶಸ್ವಿಯಾಗಿ ಈ ಖಾತೆಯನ್ನು ನಿರ್ವಹಿಸಿ ರಾಮರಾಜ್ಯವನ್ನಾಗಿ ಮಾಡಬೇಕು ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಯಾವಾಗ ಮಾಡುತ್ತಾರೋ ನನಗೆ ಗೊತ್ತಿಲ್ಲ. ನಾವಿದ್ದಾಗ ರಾಮರಾಜ್ಯವನ್ನು ಕಾಣದೇ ಸತ್ತಮೇಲೆ ಮಾಡಿದರೆ ಏನು ಪ್ರಯೋಜನ? ಆ ದೃಷ್ಟಿಯಿಂದ ಹೇಳುತ್ತಿದ್ದೇನೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಟ್ಟು ಕೆಲಸ ಮಾಡಬೇಕು ಈ ಸಂಸ್ಥೆಗಳಿಗೆ ಚುನಾವಣೆಯಾಗಿ ಎರಡು ವರ್ಷವಾಗಿದೆ. ಎರಡು ವರ್ಷದಿಂದ ತಾಲ್ಲೂಕು ಬೋರ್ಡಿನವರು ಪಂಚಾಯಿತಿಯವರು ಪಡುತ್ತಿರುವ ಕಷ್ಟ ಹೇಳುವುದಕ್ಕಾಗುವುದಿಲ್ಲ. ಅದು ದೇವರಿಗೇ ಗೊತ್ತು ನಾವು ಬಂದು ಇಲ್ಲಿ ವಿಧಾನಸೌಧದಲ್ಲಿ ಕುಳಿತಿರುತ್ತೇವೆ, ಆದ್ದರಿಂದ ನಮಗೆ ಗೊತ್ತಾಗುವುದಿಲ್ಲ. ಮತ್ತೆ ಓಟು ಕೇಳುವುದಕ್ಕೆ ಹೋದಾಗ ನಮಗೆ ಅವರ ಕಷ್ಟ ಗೊತ್ತಾಗುತ್ತದೆ. ಇದರ ಪರಿಣಾಮ ನಮ್ಮ ಮೇಲೂ ಆಗುತ್ತದೆ. ತಾಲ್ಲೂಕು ಬೋರ್ಡುಗಳಿಗೆ ಸಾಕಷ್ಟು ಹಣವನ್ನು ಕೊಡುವುದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಯಾವರೀತಿ ಹಣವನ್ನು ಖರ್ಚು ಮಾಡಬೇಕು ಎಂಬುದನ್ನು ತಾಲ್ಲೂಕು ಬೋರ್ಡ್ ಮಟ್ಟದಲ್ಲಿ ಚರ್ಚೆ ಮಾಡಿ ಯಾವರೀತಿ ಉಪಯೋಗ ಮಾಡಿದರೆ ಸಾಧ್ಯ ಎಂಬುದನ್ನು ಮಾಡುವುದಕ್ಕೆ ತಾಲ್ಲೂಕು ಬೋರ್ಡುಗಳಿಗೆ ಅಧಿಕಾರ ಕೊಡಬೇಕು. ಅಲ್ಲೂ ಕೂಡ ಚುನಾಯಿತ ಪ್ರತಿನಿಧಿಗಳು ಇರುವುದರಿಂದ ಮತ್ತು ನಾವು ಕೂಡ ಅಲ್ಲಿ ಎಕ್ಸ್ ಅಫಿಷಿಯೋ ಸದಸ್ಯರಾಗಿರುವುದರಿಂದ ಚರ್ಚೆ ಮಾಡಿ ಕಾರ್ಯರೂಪಕ್ಕೆ ತರುವುದಕ್ಕೆ ಅವಕಾಶ ಇದ್ದರೆ ಒಳ್ಳೆಯದು. ಗ್ರಾಮ ಸುಧಾರಕರುಗಳನ್ನು ಅವರ parent ಡಿಪಾರ್ಟ್‌ಮೆಂಟ್‌ಗಳಿಗೆ ವಾಪಸ ಕಳುಹಿಸಿಕೊಟ್ಟಿದ್ದೀರಿ. ಗ್ರಾಮ ಸುಧಾಕರು ಮಲ್ಟಿಪರ್ಪಸ್ ವರ್ಕರ್ಸ್ ಎಂದು ಅವರಿಗೆ ಟ್ರೈನಿಂಗ್ ಕೊಟ್ಟು ಅವರನ್ನು ಗ್ರಾಮಗಳಲ್ಲಿ ಹಾಕಿದ್ದರು. ಈಗ ಪರಿಸ್ಥಿತಿ ಏನಾಗಿದೆ? ಬಹಳ ಜನ ಗ್ರಾಮ ಸುಧಾರಕರುಗಳನ್ನು ನಾನು

ನೋಡಿದ್ದೇನೆ, ಕರ್ನಾಟಕದಲ್ಲಿರತಕ್ಕ ಅರ್ಧ ಭಾಗ ಜನ ಪರ್ಸನಲ್ಲಾಗಿ ನನಗೆ ಗೊತ್ತು. ೮೦೦ ಸಂಸಾರಗಳಿಗೆ ಒಬ್ಬೊಬ್ಬರಂತೆ ಗ್ರಾಮ ಸುಧಾರಕರನ್ನು ಸರ್ಕಾರದವರು ನೇಮಿಸಿದ್ದಾರೆ. ಅವರು ಏನು ಮಾಡುತ್ತಿದ್ದಾರೆ? ಸ್ವಾಮಿ, ಜಮೀನು ಹತ್ತಿರ ಯಾವ ಗ್ರಾಮ ಸೇವಕನೂ ಹೋಗುತ್ತಿಲ್ಲ. ಗ್ರಾಮಾಂತರ ರೈತರುಗಳಿಗೆ ಔಷಧಿ ಕೊಡಿಸುವವರು ಯಾರು? ಮನೆಯಲ್ಲಿಯೇ ಕೂತುಕೊಂಡು ಅಧಿಕಾರಿಗಳು ಡೈರಿ ಬರೆಯುತ್ತಾರೆ. ಜನಗಳಿಗೆ ಪ್ರಯೋಜನ ವಾಗುವಂತೆ ಸೂಕ್ತರೀತಿಯ ನಿರ್ದೇಶನವನ್ನು ಅಧಿಕಾರಿಗಳಿಗೆ ಕೊಡುವಂತ ವ್ಯವಸ್ಥೆ ಮಾಡಬೇಕು ಆಯವ್ಯಯದಲ್ಲಿ ೪೦ ಕೋಟಿ ರೂಪಾಯಿ ಕೇಳಿದ್ದೀರಿ ಸ್ವಾಮಿ, ಗ್ರಾಮಾಂತರ ಪ್ರದೇಶಗಳಿಗೆ ೩೦೦ ಕೋಟಿ ರೂಪಾಯಿ ಖರ್ಚು ಮಾಡಿದರೂ ಸಾಲದು. ನೀವು ಎಲ್ಲವನ್ನೂ ಇಲಾಖೆಯ ಮುಖಾಂತರ ಎಲ್ಲಿಯವರೆಗೆ ಮಾಡುವುದಕ್ಕೆ ಹೋಗುತ್ತಿರೋ ಅಲ್ಲಿಯವರೆಗೆ ಗ್ರಾಮಾಂತರ ಜನತೆಯ ಅಭಿವೃದ್ಧಿ ಆಗುವುದಿಲ್ಲ. ಗ್ರಾಮ ಪಂಚಾಯ್ತಿಗಳಿಗೆ ಮತ್ತು ತಾಲ್ಲೂಕು ಬೋರ್ಡುಗಳಿಗೆ ಪೂರ್ಣಪ್ರಮಾಣದ ಅಧಿಕಾರವನ್ನು ಕೊಡದ ಹೊರತು ಏನೇನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಎಸ್.ಎಫ್.ಡಿ.ಎ. ಮತ್ತು ಡಿ.ಪಿ.ಎ.ಪಿ. ಹೀಗೆ ೩-೪ ಐಟಂಗಳು ಏನೇನು ಇದೆ, ಇದರಲ್ಲಿ ಈ ಪ್ರೋಗ್ರಾಂಗಳಲ್ಲಿ ಸಾಕಷ್ಟು ಮಟ್ಟದಲ್ಲಿ ಅವ್ಯವಹಾರ ನಡೆದಿದೆ. ಅವ್ಯವಹಾರ ತಡೆಗಟ್ಟುವುದಕ್ಕೆ ಸರಿಯಾದ ವ್ಯವಸ್ಥೆಯನ್ನು ಸರ್ಕಾರ ಮಾಡಿಲ್ಲ. ವಿಜಿಲೆನ್ಸ್ ಕಮಿಷನ್ ಇದೆ. ತನಿಖೆ ವಗೈರೆ ಮಾಡಿಸುತ್ತೇವೆಂದು ತಾವು ಹೇಳಬಹುದು. ತನಿಖೆ ತನಿಖೆಯಾಗಿಯೇ ಉಳಿಯುತ್ತದೆ. ಇದಕ್ಕೆ ಸರಿಯಾದ ಔಷಧಿ ಕೊಟ್ಟು ಸರಿಮಾಡಿ. ಇಂಥ ಯೋಜನೆಗಳನ್ನು ತಾಲ್ಲೂಕು ಬೋರ್ಡು ಮತ್ತು ಪಂಚಾಯ್ತಿಯವರಿಗೆ ಕೊಟ್ಟರೆ ಅನುಕೂಲವಾಗುತ್ತದೆ ಇವತ್ತು ರಾಜ್ಯದಲ್ಲಿ ೧೭೫ ತಾಲ್ಲೂಕುಗಳಿವೆ, ಕನಿಷ್ಟಪಕ್ಷ ೧೦೦ ತಾಲ್ಲೂಕುಗಳಲ್ಲಿ ವಾಹನದ ಸೌಕರ್ಯ ಇಲ್ಲ. ಇವತ್ತು ತುರ್ತಾಗಿ ಗ್ರಾಮಾಂತರ ಪ್ರದೇಶಗಳ ಕೆಲಸ ಕಾರ್ಯಗಳು ನಡೆಯಬೇಕಾದರೆ, ಜೀಪುಗಳ ಅವಶ್ಯಕತೆ ಇದೆ, ಪ್ರತಿಯೊಂದು ತಾಲ್ಲೂಕಿಗೂ ಅಭಿವೃದ್ಧಿ ಮಂಡಲಿಯ ಕೆಲಸಗಳು ಜಾಗ್ರತೆ ನಡೆಯುವುದಕ್ಕೆ ಅನುಕೂಲವಾಗುವಂತೆ ಒಂದೊಂದು ವಾಹನದ ಅನುಕೂಲವನ್ನು ಕಲ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ

ಹಳ್ಳಿಗಾಡಿನ ಜನತೆಯ ಆರ್ಥಿಕ ಸಂಪತ್ತನ್ನು ಅಭಿವೃದ್ಧಿ ಮಾಡಬೇಕೆಂದು ಹೇಳುತ್ತೀರಿ. ನನ್ನ ತಾಲ್ಲೂಕಿನಲ್ಲಿ ಒಂದು ಸೊಸೈಟಿಯಲ್ಲಿ ಸುಮಾರು ೧೨ ಲಕ್ಷ ರೂಪಾಯಿ ಕಳೆದ ಮೂರು ವರ್ಷದಿಂದ ಹಾಗೆ ಉಳಿದಿದೆ. ಒಂದೇ ಫ್ಯಾಮಿಲಿಯವರು ೩ ಸಾರಿ ಹಣ ತೆಗೆದುಕೊಳ್ಳುವಂತ ಪರಿಸ್ಥಿತಿ ಇದೆ. ಬಡ ಗ್ರಾಮಗಳಿಗೆ ಯಾವ ಪ್ರಯೋಜನವೂ ತಲುಪಿಲ್ಲ. ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರೋಗ್ರಾಂಗಳು ಇದೆ ಅಂತ ಹೇಳತಕ್ಕಂಥ ಅವಕಾಶಗಳೇ ಇಲ್ಲ ಪಂಚಾಯ್ತಿ ಮಟ್ಟಕ್ಕೆ ಯಾವ ಸ್ಕೀಮುಗಳು ತಲುಪಿಲ್ಲ. ತಲುಪಿದ್ದರೂ ಕೂಡ ತಡವಾಗಿ ತಲುಪಿರುತ್ತವೆ. ಹಳ್ಳಿಯ ಜನರಿಗೆ ನಿಮ್ಮ ಸ್ಕೀಮುಗಳು ಏನು ಎನ್ನುವುದು ಗೊತ್ತಿಲ್ಲ. ಪಂಚಾಯ್ತಿ ಸೆಕ್ರಟರಿ ಅಂತ ಕೊಟ್ಟಿದ್ದಾರೆ, ಆತ ಕಂದಾಯ ಇಲಾಖೆ ಕೆಲಸ ಮಾಡುತ್ತಾನೆ. ಇವತ್ತು ರಾಜ್ಯದಲ್ಲಿ ೮೪೦೦ ಪಂಚಾಯ್ತಿಗಳಿವೆ, ಎಷ್ಟು ಜನ ಸೆಕ್ರಟರಿಗಳನ್ನು ಕೊಟ್ಟಿದ್ದೀರಿ? ಇವತ್ತು ಸರ್ಕಾರದಲ್ಲಿ ೪ ಲಕ್ಷ ಸಿಬ್ಬಂದಿ ಇದ್ದರೂ ಕೂಡ ಪಂಚಾಯ್ತಿಗಳಿಗೆ ಸಿಬ್ಬಂದಿ ಕೊಡುವಂತ ವ್ಯವಸ್ಥೆ ಮಾಡಲಿಲ್ಲ. ಗ್ರಾಮಗಳಲ್ಲಿ ಕುಳವಾಡಿಗಳು, ಶ್ಯಾನುಭೋಗರು ಪಟೇಲರು ಇದ್ದರು. ಇತ್ತೀಚೆಗೆ ಗ್ರಾಮಗಳಲ್ಲಿ ಕುಳವಾಡಿಗಳ ಕೆಲಸ ಛೇರ್ಮನ್‌ರ ರುಜು ಹಾಕಿಸಿಕೊಂಡು ಬರುವುದಾಗಿದೆ. ತಾವು ತಮ್ಮ ಆಯವ್ಯಯ ಭಾಷಣದಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ್ದೀರಿ. ಅಧಿಕಾರ ವಿಕೇಂದ್ರೀಕರಣವನ್ನು ಆದಷ್ಟುಬೇಗ ಮಾಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವತ್ತು ೧೦೦ಕ್ಕೆ ೮೦ ಭಾಗದ ಜನ ಹಳ್ಳಿಗಾಡಿನಲ್ಲಿ ವಾಸ ಮಾಡುತ್ತಿರುವಾಗ, ಅವರ ಒಂದು ಆರ್ಥಿಕ ಸಂಪತ್ತನ್ನು ಅಭಿವೃದ್ಧಿ ಮಾಡಬೇಕಾದರೆ, ಪಂಚಾಯ್ತಿಗಳಿಗೆ ಹೆಚ್ಚಿನ ಸಿಬ್ಬಂದಿಯನ್ನು ಕೊಟ್ಟು, ಸರ್ಕಾರದ ಕಾರ್ಯಕ್ರಮಗಳು ಮತ್ತು ಕೆಲಸಕಾರ್ಯಗಳು ಪಂಚಾಯ್ತಿ ಆಫೀಸಿನ ಮೂಲಕ ಮಾಡುವಂತೆ ವ್ಯವಸ್ಥೆಯನ್ನು ಇದುವರೆಗೆ ಸರ್ಕಾರದವರು ಮಾಡಲಿಲ್ಲ. ಗ್ರಾಮಾಂತರ ಜನತೆಯ ಆಸೆ ಆಕಾಂಕ್ಷೆಗಳನ್ನು ಆಗುಹೋಗುಗಳನ್ನು ವಿಚಾರಿಸುವಂತ ಶಕ್ತಿ ಸರ್ಕಾರಕ್ಕೆ ಎಲ್ಲಿಯವರೆಗೆ ಬರುವುದಿಲ್ಲವೋ ಅಲ್ಲಿಯವರೆಗೆ ಗ್ರಾಮಗಳ ಅಭಿವೃದ್ಧಿಯಾಗುವುದಿಲ್ಲ. ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳಲ್ಲಿ ಪರಿಜ್ಞಾನ ಇಲ್ಲದೇ ಇರತಕ್ಕ ಅಧಿಕಾರಿಗಳನ್ನು ನೇಮಿಸುತ್ತಿದ್ದೀರಿ. ಡಾಕ್ಟರ್ ಆದವನು ಡಾಕ್ಟರ್ ಕೆಲಸ ಮಾಡಬೇಕೇ ಹೊರತು, ಅವನು ಕಂದಾಯ ವಸೂಲು ಮಾಡುವುದಕ್ಕಾಗುವುದಿಲ್ಲ. ಪ್ರತ್ಯೇಕವಾದ ಡೈರೆಕ್ಟರೇಟ್ ಇತ್ತು ಇವತ್ತು ಅದು ಕೂಡ ಇಲ್ಲದಂತಾಗಿದೆ. ಗ್ರಾಮಾಂತರ ಅಭಿವೃದ್ಧಿ ಕಾರ್ಯಗಳ ಬಗ್ಗೆ ವಿಶೇಷವಾದ ತರಬೇತಿಯನ್ನು ಕೊಟ್ಟು ಅಧಿಕಾರಿಗಳನ್ನು ಹಾಕುವಂತ ವ್ಯವಸ್ಥೆಯನ್ನು ಮಾಡಬೇಕು. ನನಗೆ ಗೊತ್ತಿ

ದ್ದಂತೆ ಫಸ್ಟ್ ಡಿವಿಜನ್ ಗುಮಾಸ್ತರಾಗಿದ್ದವರೊಬ್ಬರು ಇವತ್ತು ಬಿ.ಡಿ.ಓ. ಆಗಿ ಬಂದಿದ್ದಾರೆ. ಅವರಿಗೆ ಎಕ್ಸ್‌ಟೆನ್‌ಷನ್ ವರ್ಕ್ ಗೊತ್ತಿದೆಯೇ? ಸರ್ಕಾರದವರು ಗ್ರಾಮಾಂತರ ಮಟ್ಟಕ್ಕೆ ಅಧಿಕಾರಿಗಳನ್ನು ನೇಮಿಸುವಾಗ ಗ್ರಾಮಾಭಿವೃದ್ಧಿ ಕೆಲಸಕಾರ್ಯಗಳಲ್ಲಿ ವಿಶ್ವಾಸ ಇರತಕ್ಕವರನ್ನು ನೇಮಕ ಮಾಡಬೇಕೆಂದು ಹೇಳುತ್ತೇನೆ.

೫-೦೦ ಪಿ ಎಂ

ಸನ್ಮಾನ್ಯ ಅಧ್ಯಕ್ಷರೆ ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಷನ್ ರಿಪೋರ್ಟ್ ಬಗ್ಗೆ ಹಿಂದೆ ಮಾನ್ಯ ಕೊಂಡಜ್ಜಿ ಬಸಪ್ಪನವರಿಂದ ಒಂದು ವರದಿ ಬಂದಿದೆ ಅಂತ ಹೇಳಿದರು. ಇವೊತ್ತು ನಾವು ಮಹಾರಾಷ್ಟ್ರ ಗುಜರಾತ್‌ಗಳಲ್ಲಿರುವುದನ್ನು ನೋಡಿಕೊಂಡು ಬಂದಿದ್ದೇವೆ. ಎಲ್ಲಾ ಕಡೆಗಳಲ್ಲಿಯೂ ಏನು ಹೇಳುತ್ತಾರೆ ಅಂದರೆ, ಜಿಲ್ಲಾ ಮಟ್ಟಗಳಲ್ಲಿ, ತಾಲ್ಲೂಕು ಮಟ್ಟಗಳಲ್ಲಿ ಏನು ಕಾರ್ಯಗಳು ನಡೆದಿಲ್ಲ ಎನ್ನುವುದು ತಿಳಿದುಬರುತ್ತದೆ. ಇವೊತ್ತು, ತಾಲ್ಲೂಕು ಮಂಡಳಿಗಳಿಗೆ ಅಧಿಕಾರವನ್ನು ಕೊಡಿ, ಹೆಚ್ಚು ಹೆಚ್ಚು ಸಿಬ್ಬಂದಿ ಕೊಡಿ, ಈ ಬಗ್ಗೆ ತಾವೇನು ಡಿಫಿಸಿಟ್ ಬಡ್ಜೆಟ್‌ನಿಂದ ಏನು ಕೊಡಬೇಕಾಗಿಲ್ಲ ಈಗ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಯಾವುದು ಇದೆ. ಇವೊತ್ತು ನಾನು ತಮ್ಮನ್ನು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿ ಅಂತ ಹೇಳುತ್ತಿಲ್ಲ. ಸಣ್ಣ ಸಣ್ಣ ಅಣೆಕಟ್ಟು, ಸಣ್ಣ ಸಣ್ಣ ರಸ್ತೆಗಳನ್ನು ತಾವು ಮಾಡಿಸಿದರೆ ಸಾಕಾಗಿದೆ. ಈಗ ತಮಗೆ ಒಂದು ಉದಾಹರಣೆ ಕೊಡಬೇಕು ಅಂದರೆ ಮೊನ್ನೆ ತಾವು ಒಂದು ಗವರ್ನ್‌ಮೆಂಟ್ ಆರ್ಡರ್ ವಾಪಸ್ಸು ತೆಗೆದುಕೊಂಡಿದ್ದೀರಾ. ತಾವು ಎಲ್ಲಾ ಕಡೆಗೆ ಡೀಸೆಂಟ್ರಲೈಸ್ ಮಾಡುವುದಿಲ್ಲ ಎನ್ನುವುದಕ್ಕೆ ಇದು ಒಂದು ಉದಾಹರಣೆಯೇ ಸಾಕು. "Schemes pertining to the village roads, construction of school buildings, maintenance of school buildings and mid-day meals are to be transferred to all Village Panchayats with effect from 1.4.80. Government have reviewed comprehensively and pending review, the Government order refered to above is kept in abeyance untill further orders"-

ಈಗಾಗಲೇ ನಾಲ್ಕು ತಿಂಗಳು ಆಗಿದೆ. ತಾವು ಡೀಸೆಂಟ್ರಲೈಸ್ ಅಂತ ಏನು ಹೇಳಿದ್ದೀರಾ ಅದಕ್ಕೆ ಇದು ಒಂದೇ ಉದಾಹರಣೆ ಸಾಕು. ಇನ್ನು ಹಳ್ಳಿಗಳ ಕಡೆಗಳಲ್ಲಿ ರಸ್ತೆ ಸಂಪರ್ಕಗಳ ವಿಚಾರ ತೆಗೆದುಕೊಂಡರೆ, ನಾವು ಊರಿಗೆ ಹೋದಾಗ ಜನರು ರಸ್ತೆ ಸಂಪರ್ಕಗಳು ಸರಿ ಇದೆಯೇ ಅಂತ ನಮ್ಮನ್ನು ಕೇಳುವ ಸ್ಥಿತಿಯಲ್ಲಿ ರಸ್ತೆಗಳಿವೆ. ಇವೊತ್ತು ವಾಟರ್‌ಸಪ್ಲೈ ಸ್ಕೀಮುಗಳಲ್ಲಿ, ರೂರಲ್ ಎಲೆಕ್ಟ್ರಿಫಿಕೇಷನ್ ಸ್ಕೀಮುಗಳಲ್ಲಿ ಅನುಕೂಲ ಕೊಡತಕ್ಕ ನೀತಿಗಳು ಏನಿವೆ ಅವುಗಳನ್ನು ಹಾಕಿಕೊಂಡು ಮಾಡಿ. ಈಗ ಏನಾಗಿದೆ ಅಂದರೆ ಕೆ.ಇ.ಬಿ. ಅವರು ಎಲ್ಲಾ ಕಡೆ ಕೆಂಪು ಕಾರ್ಡುಗಳನ್ನು ಕೊಟ್ಟು ಹಣ ವಸೂಲು ಮಾಡುತ್ತಿದ್ದಾರೆ. ಇವೊತ್ತು ತಾವು ಸರ್ಕಾರಿ ಆರ್ಡರ್‌ನಲ್ಲಿ ಏನು ನೀತಿ ಹಾಕಿ ಕೊಡುತ್ತೀರಾ ಅದನ್ನು ಇಲಾಖೆಯವರು ಮಾಡಬೇಕಾದರೆ ಬಹಳ ಕಷ್ಟ ಇದೆ. ಇವೊತ್ತು ತಾವು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಒಂದು ಇಟ್ಟುಕೊಂಡು ಅಲೋಕೇಷನ್ ಮಾಡಿಕೊಳ್ಳುತ್ತೀರಾ, ಅದು ತಾಲ್ಲೂಕು ಬೋರ್ಡ್‌ಗಳಿಗೆ ಪಂಚಾಯಿತಿಗಳಿಗೆ ಬರುವುದಿಲ್ಲ. ಈ ಸೆಕ್ರೆಟರಿಯೇಟ್‌ನವರು ನೇರವಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಮ್ಯಾನ್ಯೂರ್ ಬಗ್ಗೆ ಒಂದು ಆರ್ಡರ್ ಕಳುಹಿಸುತ್ತಾರೆ ಅದೇ ತಾಲ್ಲೂಕು ಬೋರ್ಡ್‌ನವರಿಗೆ ಈ ವಿಚಾರವೇ ಗೊತ್ತಿರುವುದಿಲ್ಲ ಇವೊತ್ತು ತಾಲ್ಲೂಕು ಬೋರ್ಡ್ ಕೇಳುವವರು ಯಾರು? ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ನಾನು ೩೦ ವರ್ಷ ಪಂಚಾಯಿತಿ ಅಧ್ಯಕ್ಷನಾಗಿದ್ದೆ, ೮ ವರ್ಷ ತಾಲ್ಲೂಕು ಅಭಿವೃದ್ಧಿ ಮಂಡಲಿ ಅಧ್ಯಕ್ಷನಾಗಿದ್ದೆ. ಅಲ್ಲಿರುವ ಕಷ್ಟ ಏನು ಅಂತ ನನಗೆ ಗೊತ್ತು. ಅಲ್ಲಿ ಸರಿಯಾದಂಥ ಕಾರ್ಯಕ್ರಮ ಮಾಡಲಿಕ್ಕೆ ಅವಕಾಶ ಇಲ್ಲ. ಇವೊತ್ತು ಇಡೀ ದೇಶದಲ್ಲಿ ಹೇಳಿಕೊಳ್ಳುವಷ್ಟರ ಮಟ್ಟಿಗೆ ಕಾರ್ಯಕ್ರಮ ಮಾಡಿಲ್ಲ. ಇನ್ನು ಬೀಜೋತ್ಪಾದನೆ ವಿಚಾರದಲ್ಲಿ ಹೇಳಬೇಕು ಅಂದರೆ ಹೈಬ್ರಿಡ್ ಜವಾರ್, ಇನ್ನಿತರೇ ಬೀಜಗಳು ತೆಗೆದುಕೊಳ್ಳಿ. ಈ ದೇಶದಲ್ಲಿ ಒಳ್ಳೆಯ ಬೀಜ ಸಿಕ್ಕುತ್ತಿತ್ತು. ಆದರೆ ಇವೊತ್ತು ಅಗ್ರಿಕಲ್ಚರ್ ಕಾನ್‌ಫೆರೆನ್ಸ್ ಇಲ್ಲ ಯಾವುದು ಇಲ್ಲ. ನಾನು ಏತಕ್ಕೆ ಇವರ ಬಗ್ಗೆ ಹೆಚ್ಚು ವಿಚಾರ ಪ್ರಸ್ತಾಪ ಮಾಡುತ್ತಿದ್ದೇನೆ, ಅಂದರೆ ಇದು ಸರ್ಕಾರಕ್ಕೆ ಗೊತ್ತಾಗಬೇಕಾಗಿದೆ. ಇವೊತ್ತು ಇಲಾಖೆ

ಗಳಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸಲಿಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ? ಇದರ ಬಗ್ಗೆ ಆಲೋಚನೆ ಮಾಡುತ್ತೀರಾ? ತಾವು ಬಜೆಟ್ ಭಾಷಣದಲ್ಲಿ ಏನು ಹೇಳುತ್ತೀರಾ, ಅದು ಒಂದನ್ನೂ ಅನುಕೂಲ ಮಾಡಿಕೊಡದೇ ಡೀಸೆಂಟ್ರಲೈಸ್ ಮಾಡುತ್ತೇವೆ ಅಂತ ಹೇಳಿದರೆ ಹೇಗೆ? ನೀವು ನಿಜ ವಾಗಿಯೂ ಗ್ರಾಮಾಂತರ ಪ್ರದೇಶದಲ್ಲಿ ಜನರ ಹಿತಾಸಕ್ತಿಯನ್ನು ಕಾಯುತ್ತಿದ್ದೀರಾ? ಗ್ರಾಮಗಳ ಅಭಿವೃದ್ಧಿ ಮಾಡಿಸುತ್ತಿದ್ದೀರಾ? ಎಲ್ಲಾ ಸೌಕರ್ಯಗಳನ್ನು ಕಲ್ಪಿಸುತ್ತಿದ್ದೀರಾ? ಇದರ ಬಗ್ಗೆ ಇನ್ನೂ ಆಲೋಚನೆ ಮಾಡಬೇಕು ಇನ್ನು ಎಜುಕೇಷನ್ ವಿಚಾರದಲ್ಲಿ ಹೇಳಬೇಕು ಅಂದರೆ ನಮ್ಮ ಮೈಸೂರು ಜಿಲ್ಲೆ ಯಲ್ಲಿ ಒಬ್ಬ ಸ್ಕೂಲು ಮಾಸ್ಟರು ಇದ್ದಾನೆ. ಅವನು ನಮ್ಮ ಜಿಲ್ಲೆಯ ಒಂದು ತಾಲ್ಲೂಕಿನಲ್ಲಿ ಎರಡು ವರ್ಷ ಇದ್ದು ಸುಮಾರು ೮೦ ಸಾವಿರ ರೂಪಾಯಿ ಮಾಡಿಕೊಂಡಿದ್ದಾನೆ. ಅವನು ಆ ಸ್ಕೂಲಿನಲ್ಲಿ ಕೆಲಸ ಮಾಡುತ್ತಾನೆಯೋ, ಇಲ್ಲವೇ, ಎನ್ನುವುದನ್ನು ಕೇಳುವುದಕ್ಕೆ ಯಾರಾದರೂ ಇದ್ದಾರೆಯೋ? ಇವೊತ್ತು ಅವನು ಒಂದು ತಾಲ್ಲೂಕು ಹಾಳುಮಾಡಿ ಇನ್ನೊಂದು ತಾಲ್ಲೂಕು ಹಾಳು ಮಾಡಲಿಕ್ಕೆ ಹೊರಟಿದ್ದಾನೆ. ಅದೇ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್‌ಗೆ ಅಧಿಕಾರ ಇದ್ದರೆ, ಅವನು ಬರಲಿಲ್ಲ ಅಂದರೆ ಕೇಳ ಬಹುದಿತ್ತು. ಇನ್ನು ಮಿಡ್‌ಡೇ ಮೀಲ್ಸ್ ವಿಚಾರದಲ್ಲಿ ಪಂಚಾಯಿತಿಯವರ ಮೂಲಕ ಕೊಟ್ಟಿರುವುದು ತಪ್ಪು ಅಂತ ಹೇಳುತ್ತೀರಾ. ಇವೊತ್ತು ಎಂಟು ಸಾವಿರ ಪಂಚಾಯಿತಿ ಛೇರ್‌ಮನ್‌ಗಳು ಹಾಗೆ ಇದ್ದರೆ ಅಂತ ಹೇಳಲಿಕ್ಕೆ ಬರುವುದಿಲ್ಲ ತಾವು ಆ್ಯಂಟಿ ಕರಪ್‌ಷನ್ ಡಿಪಾರ್ಟ್‌ಮೆಂಟ್ ಇಟ್ಟುಕೊಂಡಿದ್ದೀರಾ. ಇವೊತ್ತು ಸಮಾಜದಲ್ಲಿ ಎಲ್ಲರೂ ಕಳ್ಳರು ಅಂತ ಹೇಳಲಿಕ್ಕೆ ಆಗುತ್ತದೆಯೋ? ಈ ಮಿಡ್ ಡೇ ಮೀಲ್ಸ್ ವಿಚಾರದಲ್ಲಿ ಅವರಿಗೆ ಪವರ್ ಕೊಡಿ ಅಂತ ಹೇಳುತ್ತೇನೆ. ಇನ್ನು ಸ್ಕೂಲುಗಳ ಕಟ್ಟಡದ ರಿಪೇರಿ ವಿಚಾರದ ಬಗ್ಗೆ ತಿಳಿಸ ಬೇಕೆಂದರೆ ಇವೊತ್ತು ತಾವು ಸ್ಕೂಲುಗಳ ರಿಪೇರಿ ವಿಚಾರದ ಬಗ್ಗೆ ಜುಲೈ, ಆಗಸ್ಟ್ ತಿಂಗಳು ಕಳೆದ ಮೇಲೆ ಅಂದರೆ ಮಳೆಗಾಲ ಮುಗಿದ ಮೇಲೆ ತಾವು ನವೆಂಬರ್‌ನಲ್ಲಿ ದುಡ್ಡು ಕಳುಹಿಸಿ ರಿಪೇರಿ ಮಾಡಿಸಿದರೆ ಪುನಃ ಮಳೆಗಾಲ ಬರುವ ಹೊತ್ತಿಗೆ ಅಲ್ಲಿ ಸ್ಕೂಲುಗಳಲ್ಲಿ ತೂತು ಬಿದ್ದಿರುತ್ತವೆ. ಆದ್ದರಿಂದ ತಾವು ಎಲ್ಲಾ ಡೆವಲಪ್‌ಮೆಂಟ್‌ಗಳಿಗೂ ಕೂಡ ಒಂದು ೫೦೦ ಕೋಟಿ ರೂಪಾಯಿ ಇಂಟ್ರಿಮ್ ಬಜೆಟ್ ಕೊಡಿ, ಅದರಲ್ಲಿ ಕೊನೇ ಪಕ್ಷ ಹತ್ತು ಪರ್‌ಸೆಂಟ್ ಸೋರಿ ಹೋಗುವುದನ್ನು ಬಿಡೋಣ. ಇನ್ನುಳಿದ ೯೦ ಭಾಗವಾದರೂ ಜನರ ಕೈಗೆ ಸೇರುತ್ತದೆ ಇನ್ನು ಎಸ್.ಎಫ್.ಡಿ.ಎ. ಸ್ಕೀಮು, ಇತರೇ ಸ್ಕೀಮುಗಳ ಬಗ್ಗೆ ಸ್ಟೇಟ್ ಗೌರ್ನ್‌ಮೆಂಟ್‌ನವರಾಗಲಿ ಸೆಂಟ್ರಲ್ ಗೌರ್ನ್‌ಮೆಂಟ್‌ನವರಾಗಲಿ ಇದರ ಪರಿಸ್ಥಿತಿ ಏನು ಅಂತ ಯಾರು ಹೇಳಲಿಕ್ಕೆ ಪ್ರಯತ್ನ ಪಟ್ಟಿಲ್ಲ. ನ್ಯಾಷನಲೈಸ್ ಬ್ಯಾಂಕ್ಸ್‌ಗಳಲ್ಲಿ ಫೀಲ್ಡ್ ಆಫೀಸರ್ ಇನ್‌ವಾಲ್ವ್ ಆಗಿರುತ್ತಾರೆ. ಮೊನ್ನೆ ಮೈಸೂರು ಜಿಲ್ಲೆಯಲ್ಲಿ ೨ ಸಾವಿರ ಹಸುಗಳನ್ನು ೧ ಸಾವಿರ ಕುರಿಗಳನ್ನು, ೩೦೦ ಎತ್ತುಗಳನ್ನು ಕೊಳ್ಳಲಿಕ್ಕೆ ಸಾಲ ಕೊಡಬೇಕಾದರೆ, ಇಷ್ಟೊಂದು ಪ್ರಾಣಿಗಳು ಮೈಸೂರು ಜಿಲ್ಲೆಯಲ್ಲಿ ಒಂದೇ ಸಾರಿ ಎಲ್ಲಿ ಹುಟ್ಟಿದವೋ ಗೊತ್ತಾಗುವುದಿಲ್ಲ. ಇವರೇನೆ ಒಂದು ಹಸುವಿಗೆ ಮೂರು ಸಾರಿ ಸೇಲ್ ಮಾಡಿದ ಲೆಕ್ಕ ಬರೆದಿದ್ದಾರೆ. ೫ ಸಾವಿರ ರೂಪಾಯಿ ದುಡ್ಡು ತೆಗೆದುಕೊಂಡವನಿಗೆ ೧ ಸಾವಿರ ರೂಪಾಯಿ ಸಬ್ಸಿಡಿ ಕೊಡುತ್ತಾರೆ. ಅವನ ಹತ್ತಿರ ಹಸು ಇದೆಯೋ ಅಂತ ಕೇಳುವವರು ಯಾರು? ಅವನು ಸಾಲ ವಾಪಸ್ಸು ಕೊಡದೇ ಇದ್ದರೆ ಮಾತ್ರ ಈ ವಿಚಾರ ಬರುತ್ತದೆ. ಆತ ೨ ಸಾವಿರ ರೂಪಾಯಿ ವಾಪಸ್ಸು ಕೊಟ್ಟುಬಿಟ್ಟರೆ ಇನ್ನು ಒಂದು ಸಾವಿರ ರೂಪಾಯಿ ಅವನನ್ನು ಯಾರು ಕೇಳಲಿಕ್ಕೆ ಬರುವುದಿಲ್ಲ. ಇದರಲ್ಲಿ ಏನಾಗುತ್ತದೆ ಅಂದರೆ ಎಲ್ಲರಿಗೂ ಪರ್‌ಸೆಂಟ್ ಇದೆ. ಇದು ಎಲ್ಲಾ ಕಡೆ ನಡೆದುಕೊಂಡು ಬರುತ್ತಿದೆ. ಪಂಚಾಯ್ತಿ ಎಕ್ಸ್‌ಟೆನ್ಷನ್ ಆಫೀಸರ್ಸ್‌ಗಳು ಹಳ್ಳಿ ಮಟ್ಟದಲ್ಲಿ ಕೆಲಸ ಮಾಡುವುದಕ್ಕೆ ಆಸಕ್ತಿ ಇಲ್ಲ. ಕಾರಣ ಅವರಿಗೆ ಯಾವುದೇ ವಿಧವಾದ ಪ್ರಮೋಷನ್ ಅವಕಾಶ ಇಲ್ಲ. ಅವರ ಬಗ್ಗೆ ಡಿ.ಪಿ.ಎ.ಆರ್. ಅವರಿಗೆ ಕನ್ವಿನ್ಸ್ ಮಾಡುವುದಕ್ಕೇ ಆಗುವುದಿಲ್ಲ. ಆದರೆ ಅವರಿಗೆ ಕನ್ವಿನ್ಸ್ ಮಾಡುವ ರೂಪನೇ ಬೇರೆ ಇದೆ. ಆಗ ಸರಿಹೋಗುತ್ತದೆಂದು ಕಾಣುತ್ತದೆ. ಇದು ಆಗಬಾರದು. ಯಾವ ಅಧಿಕಾರಿ ಒಳ್ಳೆಯ ಕೆಲಸ ಮಾಡುತ್ತಾನೋ ಅವನಿಗೆ ನಿಜವಾಗಿಯೂ ಪ್ರೋತ್ಸಾಹ ಕೊಡಬೇಕಾದುದು ಸರ್ಕಾರದ ಕರ್ತವ್ಯ. ಇದು ತಮ್ಮ ಇಲಾಖೆಯ ಕರ್ತವ್ಯ. ಆ ಇಲಾಖೆ ಯನ್ನು ತಾವು ವಹಿಸಿಕೊಂಡಿದ್ದೀರಿ. ಎಲ್ಲಾ ಇಲಾಖೆಗಳಿಗಿಂತ ಹೆಚ್ಚಿಗೆ ಪ್ರಮುಖವಾದ ಇಲಾಖೆ ಅಂದರೆ ಗ್ರಾಮೀಣ ಅಭಿವೃದ್ಧಿ ಇಲಾಖೆ, ಇಲ್ಲಿ ಎಲ್ಲ ಅಧಿಕಾರಿಗಳನ್ನೂ ಕ್ರೋಢೀಕರಿಸಿ ಕಾರ್ಯವನ್ನು ಮಾಡುವಂತಹ ಸ್ಥಾನ ತಮಗೆ ಸಿಕ್ಕಿದೆ. ಈ ಕಾರ್ಯವನ್ನು ಮಾಡುವುದಕ್ಕೆ ಬೇರೆ ಮಂತ್ರಿ ಯವರೂ ಯಾರೂ ಬರುವುದಿಲ್ಲ. ನಾನು ಹತ್ತಾರು ವರ್ಷಗಳಿಂದ ನೋಡಿದ್ದೇನೆ. ಡೆವಲಪ್‌ಮೆಂಟ್ ಮಿನಿಸ್ಟರ್ ಯಾರು ಬರುತ್ತಾರೆ ಅವರೆಲ್ಲರೂ ಇದ್ದದ್ದರಲ್ಲೇ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದರೇ

ಹೊರತು ಕ್ರೋಢೀಕರಿಸುವುದಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ. ಈ ಇಲಾಖೆಗೆ ಪ್ರತ್ಯೇಕ ಡೈರೆಕ್ಟೊರೇಟ್ ಮಾಡಬೇಕೆಂದು ನನ್ನ ಇಚ್ಛೆ,

ಇವತ್ತು ನನ್ನ ಗಮನಕ್ಕೆ ಒಂದು ವಿಚಾರ ಬಂದಿದೆ. ಅದೇನೆಂದರೆ, ರೆವಿನ್ಯೂ ಇಲಾಖೆ ಹಾಗೂ ಬೇರೆ ಇಲಾಖೆಯವರು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿದ್ದಾರೆಂಬುದರ ಬಗ್ಗೆ ಈಗತಾನೆ ನನಗೆ ಒಬ್ಬರು ಒಂದು ವಿಚಾರವನ್ನು ಹೇಳಿದ್ದಾರೆ. ಹಾಸನ ಜಿಲ್ಲೆ, ಆಲೂರು ಗ್ರಾಮದಲ್ಲಿ ಕೂಲಿಗಾಗಿ ಕಾಳು ಯೋಜನೆ ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಬಹಳಷ್ಟು ದುರುಪಯೋಗವಾಗುತ್ತಿದೆ ಅದರ ಬಗ್ಗೆ ತನಿಖೆ ಮಾಡಿಸಿ ಎಂಬುದಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ಅಲ್ಲಿಯ ಲೋಕಲ್ ಪೋಲೀಸಿನವರಿಗೂ ದೂರು ಕೊಟ್ಟಿದ್ದಾರೆ. ಆದರೆ ಅವರು ಯಾವುದೇ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ. ತಾಲ್ಲೂಕು ಮಟ್ಟದಲ್ಲಿ, ಹಾಗೂ ಪಂಚಾಯ್ತಿಗಳಲ್ಲಿ ಯಾವುದೇ ವಿಚಾರವನ್ನು ಪೋಲೀಸಿನವರ ಗಮನಕ್ಕೆ ತಂದರೂ ಕೂಡ ಅವರು ಯಾವುದೇ ರೀತಿಯ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿರ ತಕ್ಕಂಥ ಜನ ಬೇಸತ್ತಿದ್ದಾರೆ. ಅವರ ಮನಸ್ಸು ಕೆಡುತ್ತಿದೆ. ಈ ರೀತಿ ಆಗುವುದಕ್ಕೆ ತಾವು ದಯಮಾಡಿ ಅವಕಾಶ ಮಾಡಿಕೊಡಬೇಡಿ. ಆದ್ದರಿಂದ ಇಂತಹ ವಿಷಯಗಳು ಸರ್ಕಾರದ ಗಮನಕ್ಕೆ ಬಂದಾಗ ಸೂಕ್ತವಾಗಿ ತನಿಖೆ ಮಾಡಿಸುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು.

ಮತ್ತೆ ಪದವೀಧರರ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯವನ್ನು ಹೇಗೂ ಕೊಡುತ್ತಿದ್ದೀರಿ. ಆ ರೀತಿ ಕೊಡುತ್ತಿರುವವರ ಪೈಕಿ ೮ ಸಾವಿರ ಜನ ಉಳಿದಿದ್ದಾರೆ. ಅವರನ್ನು ಪಂಚಾಯ್ತಿ ಸೆಕ್ರೆಟರಿಯಾಗಿ ಕಳುಹಿಸಿಕೊಡಿ. ಅದನ್ನು ತಾವು ಏಕೆ ಆಲೋಚನೆ ಮಾಡುತ್ತಿಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಅವರು ಗ್ರಾಮಾಂತರ ಪ್ರದೇಶಗಳ ಮಕ್ಕಳು. ಅವರುಗಳನ್ನೆಲ್ಲಾ ಪಂಚಾಯ್ತಿ ಎಕ್ಸ್‌ಟೆನ್ಸನ್ ಆಫೀಸರ್ ಆಗಿ ಹಾಕಿದರೆ ಅನುಕೂಲವಾಗುತ್ತದೆ, ಅವರಿಗೂ ಜನ ಸಂಪರ್ಕ ಬೆಳೆಯುತ್ತದೆ. ಹೇಗೂ ಅವರಿಗೆ ೧೫೦ ರೂ ಗಳನ್ನು ಕೊಡುತ್ತಿದ್ದೀರಿ. ಅವರನ್ನು ಹಳ್ಳಿಗಳಿಗೆ ಪಂಚಾಯ್ತಿ ಎಕ್ಸ್‌ಟೆನ್ಸನ್ ಆಫೀಸರ್ ಆಗಿ ಹಾಕಿದರೆ ಅಲ್ಲಿಗೆ ಬಂದು ಕೆಲಸ ಮಾಡುತ್ತಾರೆ. ಅವರಿಗೆ ಬೇರೆ ಕಡೆ ಕೆಲಸ ಸಿಕ್ಕಿದಾಗ ಹೋಗಲಿ, ಅಲ್ಲಿಯವರೆಗೂ ಈ ಕೆಲಸವನ್ನು ಮಾಡಲೆಂದು ನಾನು ತಮಗೆ ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಒಟ್ಟಿನಲ್ಲಿ ಎಲ್ಲ ಗ್ರಾಮಾಂತರ ಪ್ರದೇಶಗಳಿಗೂ ಸೆ ಟರಿಗಳನ್ನು ನೇಮಕ ಮಾಡಬೇಕು. ಮತ್ತೆ ಒಂದು ತಾಲ್ಲೂಕುಗಳಲ್ಲೂ ೧೫೦೦ ರಿಂದ ೧೮೦೦ ರ ರಿಗೂ ಸರ್ಕಾರಿ ಸಿಬ್ಬಂದಿ ಕೆಲಸ ಮಾಡುತ್ತಿದೆ. ಇವರಿಗಾಗಿ ಒಂದು ತಾಲ್ಲೂಕಿನಲ್ಲಿ ೮ರಿಂದ ೯ ಲಕ್ಷ ರೂ. ಆವರೆಗೆ ಸಿಬ್ಬಂದಿಗಾಗಿ ಖರ್ಚು ಮಾಡುತ್ತಿದ್ದೀರಿ. ಆದರೆ ಅವರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂಬುದಾಗಿ ಪ್ರಶ್ನೆ ಮಾಡುವುದಾದರೆ ಖಂಡಿತವಾಗಿ ಕೆಲಸ ಮಾಡುತ್ತಿಲ್ಲ ಎಂಬುದಾಗಿ ಹೇಳಬೇಕಾಗುತ್ತದೆ. ಈ ರೀತಿ ಇರತಕ್ಕಂತಹ ೧೫೦೦ ಜನ ನೌಕರರು ಒಬ್ಬರ ಕೈಕೆಳಗೆ ಕೆಲಸ ಮಾಡುತ್ತಿದ್ದಾರೆಂದರೆ, ಯಾವ ರೀತಿಯಲ್ಲಿ ಅವರು ಕೆಲಸ ಮಾಡುತ್ತಿದ್ದಾರೆಂಬುದನ್ನು ತಾವು ಊಹೆ ಮಾಡಿಕೊಳ್ಳಬಹುದು.

ಇನ್ನು ಎಜುಕೇಷನ್ ಬಗ್ಗೆ ಹೇಳುವುದಾದರೆ, ನನ್ನ ಒಂದು ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಂಡು ಹೇಳುವುದಾದರೆ, ೩೫ ಲಕ್ಷ ರೂಪಾಯಿಗಳನ್ನು ಕೇವಲ ಉಪಾಧ್ಯಾಯರುಗಳಿಗೆ ಒಂದು ವರ್ಷಕ್ಕೆ ಕೊಡುತ್ತಿದ್ದೀರಿ. ಆದರೆ ಅವರು ಅಕ್ಷರಸ್ತರನ್ನು ತಯಾರು ಮಾಡಿರುವುದು ಕೇವಲ ೧೪ ಪರ್ಸೆಂಟ್ ಮಾತ್ರ ಇಷ್ಟು ಅಕ್ಷರಸ್ತರನ್ನು ತಯಾರು ಮಾಡುವುದಕ್ಕಾಗಿ ೩೫ ಲಕ್ಷ ರೂ.ಗಳನ್ನು ಒಂದು ವರ್ಷಕ್ಕೆ ಉಪಾಧ್ಯಾಯರಿಗೆ ಕೊಡುವ ಸಂಬಳಕ್ಕಾಗಿ ಖರ್ಚು ಮಾಡುತ್ತಿದ್ದೀರಿ. ಆ ಉಪಾಧ್ಯಾಯರಿಗೆ ಶಾಲೆಗಳು ಇಲ್ಲದಿದ್ದರೂ ಎಲ್ಲೋ ಕುಳಿತುಕೊಂಡು ಹೋದರೂ ಕೂಡ ಆತನಿಗೆ ಸಂಬಳ ಮಾತ್ರ ಕೊಡುತ್ತಿದ್ದೀರಿ. ಆದರೆ ಅಲ್ಲಿ ಉಪಾಧ್ಯಾಯರುಗಳು ಸರಿಯಾಗಿ ಪಾಠಶಾಲೆಗೇ ಬರುವುದಿಲ್ಲ. ತಾವು ಪಂಚಾಯ್ತಿಗೆ ಯಾವುದೇ ರೀತಿಯ ಅಧಿಕಾರವನ್ನು ಕೊಡದೇ ಇರುವುದರಿಂದ ಅವರು ಹೇಳಿದರೂ ಕೂಡ ಅವರ ಮಾತನ್ನು ಯಾರೂ ಕೇಳುವುದಿಲ್ಲ. ಇದನ್ನು ಆ ಪಂಚಾಯ್ತಿಯ ಅಧ್ಯಕ್ಷರು ಆ ತಾಲ್ಲೂಕಿನಲ್ಲಿರ ತಕ್ಕಂತಹ ಸಹಾಯಕ ವಿದ್ಯಾಧಿಕಾರಿಯವರಿಗೆ ತಿಳಿಸಬೇಕು. ನಂತರ ಸಹಾಯಕ ವಿದ್ಯಾಧಿಕಾರಿಯವರು ಸಂಬಂಧಪಟ್ಟಂತಹ ಪಾಠಶಾಲೆಯ ಉಪಾಧ್ಯಾಯರಿಗೆ ತಿಳಿಸಬೇಕು. ಈ ರೀತಿ ಅಲ್ಲಿ ನಿಜವಾಗಿಯೂ ಇರತಕ್ಕಂತಹ ಪರಿಸ್ಥಿತಿ. ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಸಲಹೆ ಮಾಡುವುದೇನೆಂದರೆ, ಪಂಚಾಯ್ತಿಯಲ್ಲಿರ ತಕ್ಕಂತಹ ಛೇರ್ಮನ್ನರಿಗೆ ಸ್ವಲ್ಪ ಅಧಿಕಾರವನ್ನು ಕೊಟ್ಟರೆ ಅವರು, ಈ ರೀತಿ ಶಾಲೆಗಳು ನಡೆಯದೇ ಇರತಕ್ಕಂತಹ ಕಡೆಗಳಲ್ಲಿ ಉಪಾಧ್ಯಾಯರಿಗೆ ತಿಳಿಸಿ, ಸರಿಯಾಗಿ ಪಾಠಶಾಲೆಗಳನ್ನು ನಡೆಸುವಂತೆ ತಿಳಿಸುತ್ತಾರೆ.

ಅವರಿಗೆ ಸೂಪರ್‌ವಿಷನ್ ಮಾಡತಕ್ಕಂತಹ ಅಧಿಕಾರವನ್ನು ಕೊಡಿ ಈವತ್ತು ಏನಾಗಿದೆ ಎಂದರೆ ಎಲ್ಲ ವ್ಯವಸ್ಥೆಯನ್ನೂ ಸರ್ಕಾರವೇ ಆಲೋಚನೆ ಮಾಡಿ ತೀರ್ಮಾನ ಮಾಡುವಂತಹ ಪರಿಸ್ಥಿತಿಯಲ್ಲಿದೆ.

(ಮಾನ್ಯ ಅಧ್ಯಕ್ಷರು ಸಭಾ ಪೀಠವನ್ನಲಂಕರಿಸಿದರು)

ಈ ರೀತಿ ಇರುವುದರಿಂದ ಯಾವ ತಾಲ್ಲೂಕು ಅಭಿವೃದ್ಧಿ ಮಂಡಲಿಯಾಗಲಿ ಅಥವಾ ಪಂಚಾಯ್ತಿಗಳಾಗಲಿ ಕೆಲಸ ಮಾಡುವುದಕ್ಕೆ ಸಾಧ್ಯ ಎಂಬುದನ್ನು ತಾವೇ ಯೋಚನೆ ಮಾಡಿ.

ಇನ್ನು ಕಾನೂನು ಬಗ್ಗೆ ಒಂದು ಮಾತನ್ನು ಹೇಳುವುದು ಇದೆ ಗ್ರಾಮಾಂತರ ಪ್ರದೇಶಗಳಲ್ಲಿ ಪಂಚಾಯ್ತಿಯ ಚೇರ್ಮನ್‌ರವರು ಲೈಸನ್ಸ್ ಕೊಡಬೇಕು. ಯಾರಾದರೂ ಲೈಸನ್ಸ್ ತೆಗೆದುಕೊಳ್ಳದೆ ಮನೆಯನ್ನು ಕಟ್ಟಿದರೆ ಅಥವಾ ಸರ್ಕಾರಿ ಜಮೀನನ್ನು ಅತಿಕ್ರಮಣಮಾಡಿದರೆ ಅದನ್ನು ಡಿಮಾಲಿಷ್ ಮಾಡುವುದಕ್ಕೆ ಕಾನೂನಿನಲ್ಲಿ ಅಧಿಕಾರ ಇದೆ. ಆದರೆ ಇದಕ್ಕೆ ಪೊಲೀಸಿನವರ ಸಹಕಾರ ಅಗತ್ಯ. ಆದರೆ. ಆ ಛೇರ್ಮನ್ ಆದವನು ಕಂಪ್ಲೇಂಟ್ ಕೊಟ್ಟರೆ ಕ್ರಮ ತೆಗೆದುಕೊಳ್ಳುವುದಿಲ್ಲ. ಕಂಪ್ಲೇಂಟ್ ಕೊಟ್ಟವನನ್ನೇ ಅರೆಸ್ಟ್ ಮಾಡಿಕೊಂಡು ಹೋಗಿದ್ದಾರೆ.

ಶ್ರೀ ಸಿ. ಎ. ಚಂದ್ರೇಗೌಡ. ಪಂಚಾಯ್ತಿ ಅಧ್ಯಕ್ಷರವರನ್ನು ಅವನು ಇವನು ಅಂತ ಹೇಳುತ್ತಿದ್ದಾರೆ. ಇದು ನನ್ನ ಮನಸ್ಸಿಗೆ ನೋವಾಗುತ್ತದೆ.

ಶ್ರೀ ಡಿ. ಜಯದೇವರಾಜ ಅರಸು.—ಪೋಲೀಸಿನವರು ಅರೆಸ್ಟ್ ಮಾಡಿಕೊಂಡು ಹೋಗಿದ್ದಾರೆ. ಇನ್ನು ಅವನು, ಇವನು ಅಂದರೆ ಅತನ ಗೌರವ ಹೋಗುತ್ತದಂತೆ, ಕಾನೂನನ್ನು ಜಾರಿಗೆ ತರುವುದಕ್ಕೆ ಆತ ಪ್ರಯತ್ನ ಪಟ್ಟರೆ ಆತನನ್ನೇ ಅರೆಸ್ಟ್ ಮಾಡಿದ್ದಾರೆ. ಇದರಿಂದ ತಾವು ಅರ್ಥಮಾಡಿಕೊಳ್ಳಬಹುದು, ವಿಲೇಜ್ ಪಂಚಾಯ್ತಿ ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತದೆಂದು. ಪಂಚಾಯ್ತಿ ಚೇರ್ಮನ್‌ಗಳಾಗಿ ಕೆಲಸಮಾಡುವುದು ಬಹಳ ಕಷ್ಟವಾಗಿದೆ. ಬರೀ ಪಕ್ಷದ ದೃಷ್ಟಿಯಿಂದ ಕೆಲಸ ಮಾಡುವುದಲ್ಲ, ರಾಜಕೀಯ ಮಾಡುವುದರಿಂದ ಯಾವುದನ್ನೂ ಸಾಧನೆ ಮಾಡಿದಂತಾಗುವುದಿಲ್ಲ ಪೋಲೀಸಿನವರು ನಿಮಗಿಂತ ಮೇಲಿದ್ದಾರೆ, ಬಹಳ ವಿವೇಕದಿಂದ ಕಾನೂನು ಮಾಡಿ. ಏಕೆಂದರೆ ನಿನ್ನೆ ನಮ್ಮ ಊರಿನಲ್ಲಿ ಒಂದು ಪರಿಸ್ಥಿತಿ ಆಗಿದೆ, ಅದನ್ನು ನಾನು ಇಂದು ಅಧ್ಯಕ್ಷರ ಗಮನಕ್ಕೆ ತರಲೇಬೇಕು. ಮೊನ್ನೆ ನಮ್ಮ ಕೆ.ಆರ್. ನಗರದಲ್ಲಿ ಭಾನುವಾರದ ಸಂತೆ, ಆ ಮನುಷ್ಯ ಯಾವುದೇ ಒಂದು ತಪ್ಪು ಮಾಡಿದವನಲ್ಲ. ಬಹಳ ಒಳ್ಳೆಯ ಮನುಷ್ಯ. ಆತನು ಸಂತೆಗೆ ಹೋಗಿದ್ದಾಗ, ಅಲ್ಲಿ ಒಂದು ಕುರಿಯನ್ನು ೨೦೫ ರೂ,ಗಳನ್ನು ಕೊಟ್ಟು ಕೊಂಡುಕೊಂಡ. ಆ ಕುರಿ ಕಳ್ಳತನ ಮಾಡಿದ್ದಂತಹ ಮಾಡಲಾಗಿತ್ತಂತೆ, ಆತನಿಗೆ ಗೊತ್ತಿಲ್ಲದೆ ತೆಗೆದುಕೊಂಡು ಹೋದ. ಆದರೆ ಪೋಲೀಸಿನವರು ಬಂದು ಆತನನ್ನು ಅರೆಸ್ಟ್ ಮಾಡಿಕೊಂಡು ಕೆ.ಆರ್. ನಗರಕ್ಕೆ ಕಳುಹಿಸಿದರು. ಮಾರನೆ ಬೆಳಗ್ಗೆ ಬಿಟ್ಟರು. ಆದರೆ ಆತ ಈ ಅವಮಾನವನ್ನು ಸಹಿಸಿಕೊಳ್ಳದೆ ಬೆಳಗ್ಗೆ ಬಂದವನೇ ಪಾಯಿಸನ್ ತೆಗೆದುಕೊಂಡು ಸತ್ತುಹೋದ. ಅಧಿಕಾರಿಗಳು ಯಾವ ರೀತಿ ಹಳ್ಳಿಯ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆಂಬುದಕ್ಕೆ ನಿಮಗೆ ಇದು ಒಂದು ಉದಾಹರಣೆಯನ್ನು ಕೊಟ್ಟೆ. ಆದರೆ ಇಂತಹ ಅನಾಹುತಗಳು ಬೇಕಾದಷ್ಟು ಎಲ್ಲರ ಗಮನಕ್ಕೆ ಬಾರದೆ ನಡೆಯುತ್ತಿವೆ. ಅಧಿಕಾರಿಗಳು ಹಳ್ಳಿಯ ಜನಗಳ ಹತ್ತಿರ ಬಹಳ ವಿವೇಕದಿಂದ ನಡೆದುಕೊಳ್ಳಬೇಕು. ನಾನು ಸಾಕಷ್ಟು ಸಮಸ್ಯೆಗಳನ್ನು ಇಲ್ಲಿ ಸರ್ಕಾರದ ಒಂದು ಗಮನಕ್ಕೆ ತಂದಿದ್ದೇನೆ. ಗ್ರಾಮ ಪಂಚಾಯಿತಿಗಳಿಗೆ ತಾಲ್ಲೂಕು ಬೋರ್ಡುಗಳಿಗೆ ಏನು ಅಧಿಕಾರವನ್ನು ಕೊಡಬೇಕು ಹೇಗೆ ಹಣಕಾಸಿನ ಸಹಾಯವನ್ನು ಒದಗಿಸಬೇಕು ಎನ್ನುವ ಬಗ್ಗೆ ನಾನು ಸಾಕಷ್ಟು ಮಾಹಿತಿಯನ್ನು ತಮಗೆ ಕೊಟ್ಟಿದ್ದೇನೆ. ಅವುಗಳನ್ನೆಲ್ಲಾ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕೆಂದು ಒತ್ತಾಯ ಮಾಡಿ ಈ ಆಯವ್ಯಯದಲ್ಲಿ ೮೦ ಪರ್ಸೆಂಟ್ ರೈತರಿಗಾಗಿ ಇರತಕ್ಕ ಈ ಇಲಾಖೆಗೆ ೨೦ ಕೋಟಿ ರೂಪಾಯಿ ಕೊಟ್ಟಿರುವುದು ಸಾಲದು, ಇನ್ನೂ ಹೆಚ್ಚು ಮಾಡಬೇಕು, ನಾವು ತಾಲ್ಲೂಕು ಬೋರ್ಡುಗಳಲ್ಲಿ ಮಾತನಾಡಬೇಕಾದರೆ ಬಹಳ ಕಷ್ಟವಾಗುತ್ತದೆಂದು ಹೇಳಿ ಹೆಚ್ಚು ಸಮಯ ತೆಗೆದುಕೊಂಡಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ಕ್ಷಮಾಪಣೆ ಕೋರಿ, ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಮಾನ್ಯ ಅಧ್ಯಕ್ಷರೆ. ಕೆಲವು ದಿನಗಳ ಹಿಂದೆ ಮಾನ್ಯ ಸುಬ್ಬಯ್ಯನವರು ರೂಲ್ ೩೧೨ರ ಕೆಳಗೆ ಉಗ್ರಾಣವನ್ನು ಹುಬ್ಬಳ್ಳಿಯಿಂದ ಮಂಗಳೂರಿಗೆ ವರ್ಗಾವಣೆ ಮಾಡಲಾಗಿದೆಯೆಂಬ ಬಗ್ಗೆ ಪ್ರಸ್ತಾಪ ಮಾಡಿದ್ದರು. ಆ ಬಗ್ಗೆ ಕೇಂದ್ರದ ಸಂಬಂಧಪಟ್ಟವರೊಂದಿಗೆ ಮಾತುಕತೆ ನಡೆಸಿದ್ದು ಈ ಬಗ್ಗೆ ಪುನಃ ೨೭ನೇ ತಾರೀಖು ಚರ್ಚೆ ಇದೆ. ಆ ಬಗ್ಗೆ ಈಗ ಸದನದಲ್ಲಿ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಸಮ್ಮತಿಸಿದರೆ ಅದನ್ನು ಓದುತ್ತೇನೆ.

ಶ್ರೀ ಎಂ. ಸಿ ನಾಣಯ್ಯ.—ಈ ವಿಷಯವನ್ನು ಪ್ರಸ್ತಾಪ ಮಾಡಿದವರು ಮಾನ್ಯ ಸದಸ್ಯರಾದ ಸುಬ್ಬಯ್ಯನವರು ಹಾಗೂ ಮಾನ್ಯ ಮಳ್ಳೂರು ಆನಂದರಾವ್ ಅವರು ಅವರಿಬ್ಬರೂ ಈಗ ಸಭೆಯಲ್ಲಿ ಇಲ್ಲವಾದ್ದರಿಂದ ಮಾನ್ಯ ಸಚಿವರು ತಮ್ಮ ಸ್ಟೇಟ್‌ಮೆಂಟನ್ನು ನಾಳೆ ಸದನದಲ್ಲಿ ಓದಬೇಕೆಂದು ಅಧ್ಯಕ್ಷರ ಮುಖಾಂತರ ವಿನಂತಿಸಿಕೊಳ್ಳುತ್ತೇನೆ.

ಅಧ್ಯಕ್ಷರು —ಆಗಲಿ, ನಾಳೆ ಮಾಡಲಿ.

† ಶ್ರೀ ಎ. ಬಿ. ಬೆಡಗಿ (ಸದಲಗ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಗ್ರಾಮೀಣ ನೀರು ಸರಬರಾಜು ಯೋಜನೆ, ಸರ್ವ ಸಮಾಜ ಅಭಿವೃದ್ಧಿ ಯೋಜನೆ ಹಾಗೂ ಗ್ರಾಮೀಣ ವಿಕಾಸ ಯೋಜನೆಯ ಮೇಲೆ ನಮ್ಮ ಗ್ರಾಮೀಣ ಮತ್ತು ಪಂಚಾಯಿತಿ ರಾಜ್ ಮಂತ್ರಿಗಳವರ ಒಂದು ಬೇಡಿಕೆಯ ಮೇಲೆ ಸುಮಾರು ೬೦ ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆಗೆ ಬೆಂಬಲವನ್ನು ನೀಡುತ್ತಾ, ಈ ಮೂರು ವಿಷಯಗಳ ಚರ್ಚೆಯಲ್ಲಿ ಭಾಗವಹಿಸಲು ನಾನು ಇಚ್ಛಿಸಿ ಕೆಲವು ವಿಚಾರಗಳನ್ನು ತಮ್ಮ ಮುಂದೆ ಮಂಡಿಸಲು ಇಚ್ಛಿಸುತ್ತೇನೆ. ಈ ಗ್ರಾಮೀಣ ವಿಕಾಸ ಹಾಗೂ ಹಳ್ಳಿಗಳ ವಿಕಾಸಕ್ಕೂ ಸಂಬಂಧಿಸಿದ ವಿಷಯವಾಗಿದೆ. ಈ ಸಭಾಗೃಹದಲ್ಲಿ ಇದುವರೆಗೆ ಬಡ್ಜೆಟ್ ಅಧಿವೇಶನದಲ್ಲಿ ಮಂಡಿಸಿದಂತಹ ವಿವಿಧ ಖಾತೆಗಳಿಗೂ ಎಲ್ಲಾ ರೀತಿಯಿಂದಲೂ ಸಮನ್ವಯವಾಗಿ ಇದು ಅನ್ವಯವಾಗುತ್ತದೆ. ದೇಶದಲ್ಲಿ ಗ್ರಾಮೀಣ ವಿಕಾಸ ಬಹು ಬೇಗ ಸಾಧಿಸಿದರೆ, ದೇಶದ ವಿಕಾಸವನ್ನು ಸಾಧಿಸಿದಂತಾಗುತ್ತದೆ. ಇಷ್ಟಾಗ್ಯೂ ನಮ್ಮ ದೇಶದ ಈ ವಿಕಾಸಮಯ ಜೀವನದಲ್ಲಿ ನಮ್ಮ ದೇಶದ ಸ್ವಾತಂತ್ರ್ಯಪೂರ್ವಕಾಲದಿಂದ ಇಲ್ಲಿಯವರೆಗೆ ೧೦೦ ಶತಮಾನದ ಇತಿಹಾಸವಿದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಪಕ್ಷದ ವತಿಯಿಂದ ಕಳೆದ ೩೦ ವರ್ಷಗಳಿಂದ ಪಕ್ಷದ ಪರವಾಗಿ ಸತತವಾಗಿ ದೇಶದ ಸರ್ಕಾರಗಳು ಮತ್ತು ಪ್ರಾಂತೀಯ ಸರ್ಕಾರಗಳು ಈ ವರೆಗೆ ಗ್ರಾಮೀಣ ಅಭಿವೃದ್ಧಿ ದೃಷ್ಟಿಯಿಂದ ಮಾಡಿದ ಮತ್ತು ಮಾಡುತ್ತಾ ಬಂದ ಜನ ಹಿತದ ಆಸೆ ಆಕಾಂಕ್ಷೆಗಳನ್ನು ಒಳಗೊಂಡು ಮಾಡಿರುವ ಕಾರ್ಯಕಲಾಪಗಳಿಗೆ ಒಳ್ಳೆಯ ಮಹತ್ವದ ಸ್ಥಾನವಿದೆ ಒಂದು ಆದರ್ಶವಾದಂತ ರಾಷ್ಟ್ರೀಯ ನಿರ್ಮಾಣದಲ್ಲಿ ಗ್ರಾಮೀಣ ವಿಕಾಸ ದೇಶದ ಅಡಿಗಲ್ಲಾಗಿದೆ. ಇಷ್ಟಿದ್ದಾಗ್ಯೂ ಕೂಡ ಒಂದು ಗ್ರಾಮದ ಕಡೆಗೆ ನಾವು ಪ್ರತಿದಿನ ದೃಷ್ಟಿಯನ್ನು ಹರಿಸಿದರೆ ನಮ್ಮ ದೃಷ್ಟಿಗೆ ಕಾಣಿಸುವುದು ಏನು ? ಕಳೆದ ೩೦ ವರ್ಷದ ಪರಿಶ್ರಮದಿಂದ ದೇಶವನ್ನು ಆಳುತ್ತಾ ಇದ್ದಂತಹ ರಾಷ್ಟ್ರ ಮತ್ತು ಪ್ರಾಂತೀಯ ಸರ್ಕಾರಗಳು ಮಾಡಿದ ಅಭಿವೃದ್ಧಿ ಯೋಜನೆ ಪರವಾಗಿ ನಾವು ಸ್ವಲ್ಪ ಆತ್ಮನಿರೀಕ್ಷೆ ಮಾಡಿದರೆ ನಮಗೆ ಅರಿವಾಗದೇ ಇರುವುದಿಲ್ಲ. ಮೊದಲು ನಾನು ಹೇಗೆ ಇದ್ದೆ ? ಈಗ ಹೇಗೆ ಇದ್ದೇನೆ ? ಈ ಮೊದಲು ನಮ್ಮ ಊರು ಹೇಗೆ ಇತ್ತು ? ಈಗ ಹೇಗೆ ಇದೆ ಈ ಮೊದಲು ನಮ್ಮ ತಾಲ್ಲೂಕು ಹೇಗೆ ಇತ್ತು ? ಈಗ ಹೇಗೆ ಇದೆ ? ಇವೆಲ್ಲವನ್ನೂ ಸಮೀಕ್ಷೆ ಮಾಡಿದರೆ ಎಷ್ಟೊಂದು ಸುಧಾರಣೆಗಳು ಕಂಡುಬರುತ್ತವೆ. ಪ್ರತಿಯೊಂದು ವಿಷಯದಲ್ಲಿ ನಾವು ಕುಂದುಕೊರತೆಗಳನ್ನು ನೋಡುತ್ತಾ ಹೋದರೆ ಯಾವುದೂ ಜಗತ್ತಿನಲ್ಲಿ ಪೂರ್ಣವಾದುದು ಇಲ್ಲ. ನಮ್ಮ ಹಿರಿಯರು ನಡೆದ ದಾರಿ ಯಾವುದು ? ಕಳೆದ ೩೦ ವರ್ಷಗಳಿಂದ ಹಳ್ಳಿಗಳಲ್ಲಿ ಎಷ್ಟು ವ್ಯತ್ಯಾಸಗಳಾಗಿವೆ ಎಂಬುದನ್ನು ನಾವು ಕಾಣಬಹುದು. ರೋಡುಗಳ ವಿಷಯದಲ್ಲಿ, ಶಿಕ್ಷಣ ಸಂಸ್ಥೆಗಳ ವಿಷಯದಲ್ಲಿ. ಸಂಘ ಸಂಸ್ಥೆಗಳ ವಿಷಯದಲ್ಲಿ. ಎಲ್ಲವುಗಳಲ್ಲಿಯೂ ಅಭಿವೃದ್ಧಿಯಾಗಿದೆ. ಕೆಲವು ಕುಂದುಕೊರತೆಗಳು ಇದ್ದರೂ ಸಹಾ ನಾವು ಎಷ್ಟೊಂದು ಪ್ರಗತಿಯನ್ನು ಸಾಧಿಸಿದ್ದೇವೆ ಈ ಪ್ರಗತಿಗಳನ್ನು ಬದಿಗೊತ್ತಿ ನಾವು ಕುಂದುಕೊರತೆಗಳನ್ನೇ ಲಕ್ಷ್ಯದಲ್ಲಿಟ್ಟುಕೊಂಡು ಅವನ್ನೇ ಮುಂದೆ ಮಾಡಿಕೊಂಡು ಬಂದರೆ ನಾವು ಆ ಪ್ರಗತಿಯನ್ನು ಮರೆಯುವಂತಿಲ್ಲ. ಈಗ ನಾವು ಒಂದು ಸೊಸೈಟಿಯನ್ನು ಉದಾಹರಣೆಗೆ ತೆಗೆದುಕೊಂಡರೆ ಹಿಂದೆ ೧೪ ಸಾವಿರ ರೂಪಾಯಿಯಷ್ಟು ಸಾಲವನ್ನು ಕೊಡುತ್ತಿದ್ದಂತಹ ಸೊಸೈಟಿಗಳು ಈಗ ರೈತರಿಗೆ ಹಳ್ಳಿಗಳಲ್ಲಿ ಐದೂವರೆ ಲಕ್ಷ ರೂಪಾಯಿಗಳವರೆವಿಗೂ ಸಾಲವನ್ನು ಕೊಡುತ್ತ ಬಂದಿವೆ. ಪಂಚಾಯಿತಿ ಅಭಿವೃದ್ಧಿ ಕಾರ್ಯ ಅನೇಕ ದೃಷ್ಟಿಯಲ್ಲಿ ಮುಂದುವರಿದಿದೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಅನೇಕ ದೃಷ್ಟಿಯಿಂದ ಮುಂದುವರಿದಿವೆ. ನೀರು ಸರಬರಾಜು ಯೋಜನೆಯಲ್ಲಿ ಸರ್ವೇ ಸಾಮಾನ್ಯವಾಗಿ ಪ್ರತಿ ಹಳ್ಳಿಗಳಲ್ಲಿಯೂ ಒಂದೆರಡು ಕೊಳವೆ ಬಾವಿಗಳು ಆಗಿವೆ. ನೀರಿನ ಸಮಸ್ಯೆ ಬಹುಮಟ್ಟಿಗೆ ನಿವಾರಣೆ ಆಗಿದೆ. ಆದಷ್ಟು ರೂರಲ್ ಪೈಪ್ ವಾಟರ್ ಸ್ಕೀಮ್ ಬಗ್ಗೆ, ಊರುಗಳಲ್ಲಿನ ಮುಖಂಡರು, ಶಾಸಕರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಪ್ರತಿಯೊಂದು ಊರಿನಲ್ಲಿಯೂ ಪೈಪ್ ವಾಟರ್ ಸ್ಕೀಮ್ ಆಗಬೇಕೆಂದು ಹಟ ಹಿಡಿಯುತ್ತಿದ್ದಾರೆ. ಆದ್ದರಿಂದ ಎಲ್ಲ ಊರುಗಳಿಗೂ ಕೊಡಲು ಸಾಧ್ಯವಿಲ್ಲ. ಅದಕ್ಕೆ ಸ್ವಲ್ಪ ಸಾವಧಾನ ಮತಿಕೆ ಇದ್ದರೆ ತಾನೇ ತಾನಾಗಿ ಎಲ್ಲವೂ ಸರಾಗವಾಗಿ ಸಿಗುತ್ತದೆ. ಕೋಟಿ ವಿದ್ಯೆಗಳಿಗಿಂತ ಮೇಟಿ ವಿದ್ಯೆಯೇ ಮೇಲೆಂದು

ಅನುಕೂಲತೆಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ. ಗ್ರಾಮ ವಿಭಾಗದಲ್ಲಿ ಕಾರ್ಮಿಕರಿಗೆ ಇರುವ ಒಂದು ದೊಡ್ಡ ರೋಗ ಎಂದರೆ ಮಧ್ಯಪಾನ ಮತ್ತು ಎರಡನೆಯದಾಗಿ ಮಟ್ಕಾ. ಈ ಮದ್ಯಪಾನದ ವಿಷಯವಾಗಿ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೬೭ನೇ ಇಸವಿಯಲ್ಲಿ ಮದ್ಯಪಾನ ಪ್ರತಿಭಂದಕಾಜ್ಞೆಯನ್ನು ಜಾರಿಗೆ ತಂದುದರಿಂದ ಹಳ್ಳಿಗಳಲ್ಲಿ ಮತ್ತಷ್ಟು ಅವ್ಯವಸ್ಥೆಗೆ ಕಾರಣವಾಗಿರುತ್ತದೆ. ಈ ಮದ್ಯಪಾನ ಪ್ರತಿಬಂಧಕಾಜ್ಞೆಯಿಂದ ಕೆಲವು ಖಾತೆಗಳ ಅಧಿಕಾರಿಗಳ ವರಮಾನವು ಜಾಸ್ತಿಯಾಗಿರುತ್ತದೆ. ಮದ್ಯಪಾನ ನಿರೋಧ ವರ್ಲ್ಡ್ ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯ ಸದಸ್ಯನಾಗಿ ೧೯೭೨ನೇ ಇಸವಿಯಲ್ಲಿ ಇದರ ಬಗ್ಗೆ ನಾನು ಭಾಷಣ ಮಾಡುತ್ತಿರುತ್ತೇನೆ. ೪-೫ ಸಾವಿರ ಜನಸಂಖ್ಯೆ ಇರುವ ಒಂದು ಹಳ್ಳಿಯಿಂದ ಮಟಕ ಮತ್ತು ಮದ್ಯಪಾನ ನಿರೋಧದಿಂದ ೨೦ ಸಾವಿರ ರೂಪಾಯಿಗಳವರೆಗೆ ಹಣ ಸರ್ಕಾರಕ್ಕೆ ಲುಕ್ಸಾನು ಆಗುತ್ತಿದೆ. ಕೆಲವು ಅಧಿಕಾರಿಗಳು ಇದರ ಫಲವಾಗಿ ಹಣದ ದುರುಪಯೋಗವನ್ನು ಮಾಡುತ್ತಿರುತ್ತಾರೆ. ಆದ್ದರಿಂದ ಸರ್ಕಾರ ಮಟ್ಟಕ್ಕೆ ವ್ಯವಸ್ಥೆಯನ್ನು ಒಂದು ಕಾಯಿದೆ ಶಿರಬದ್ಧವಾಗಿ ಸುಗಮವಾಗಿ ಸಾಗಿಸಬೇಕೆಂದು ತಮ್ಮ ಮೂಲಕವಾಗಿ ಬೇಡಿಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಬ್ಯಾಡಗಿಯವರು ಇದನ್ನು ಬಂದ್ ಮಾಡಬೇಕು ಎಂದು ಹೇಳುತ್ತಾರೋ ಅಥವಾ ಇದನ್ನು ಕಾಯಿದೆಶಿರ ಮಾಡಬೇಕೆಂದು ಹೇಳುತ್ತಾರೋ ಸ್ಪಷ್ಟವಾಗಿ ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ಎ. ಬಿ. ಬ್ಯಾಡಗಿ.—ಇದನ್ನು ಬಂದ್‌ಮಾಡಬೇಕೆಂದು ಹೇಳುತ್ತಿಲ್ಲ. ಪಾನ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತಂದುದರ ಪರಿಣಾಮ ಏನಾಯಿತು ಎಂಬುದು ತಮಗೆ ತಿಳಿದಿರುತ್ತದೆ. ಇದರಿಂದ ಕಳ್ಳಬಟ್ಟಿ ತಯಾರು ಮಾಡತಕ್ಕಂಥ ಜನ ಜಾಸ್ತಿಯಾಗಿರುತ್ತಾರೆ. ಇವರಿಂದ ಸರ್ಕಾರಕ್ಕೆ ಬರತಕ್ಕಂಥ ಉತ್ಪತ್ತಿ ಕಡಿಮೆಯಾಗಿರುತ್ತದೆ. ಮಟ್ಕ ವ್ಯವಹಾರದಿಂದ ಹಣ ಹೋಗುತ್ತಾ ಇದೆ. ಉತ್ತಮವಾದ ಉದ್ದೇಶವನ್ನು ಸಾಧಿಸಲಿಕ್ಕೆ ಹೋಗಿ ಸರ್ಕಾರದವರು ಇಂದು ಒಂದು ಭಯಾನಕ ಅನಾಹುತವನ್ನೇ ಎದುರಿಸಬೇಕಾಗಿ ಬಂದಿರುತ್ತದೆ. ಆದ್ದರಿಂದ ಸರ್ಕಾರದವರು ಮೊಟ್ಟಮೊದಲನೆಯದಾಗಿ ಶಾಸನಬದ್ಧವಾಗಿ ಕಾಯಿದೆಬದ್ಧವಾಗಿ ಮಟ್ಕ ನಡೆಸುವಂತಾಗಬೇಕು. ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಈವತ್ತಿನ ದಿವಸ ಲಾಟರಿಯನ್ನು ಯಾವ ಒಂದು ನೈತಿಕ ಆಧಾರದಮೇಲೆ ನಡೆಯುತ್ತಿದೆ, ಅದೇ ರೀತಿ ಇದನ್ನು ನಡೆಸುವುದರಿಂದ ಯಾವ ತೊಂದರೆಯು ಇಲ್ಲವೆಂದು ಹೇಳುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಟ್ಕದಿಂದ ಬರತಕ್ಕಂಥ ಕಮಿಷನ್ ಗ್ರಾಮ ಪಂಚಾಯಿತಿಗಳಿಗೆ ಹೋಗಬೇಕು ಎನ್ನುವುದು ನಿಮ್ಮ ಅಭಿಪ್ರಾಯವಾಗಿದ್ದರೆ, ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಮಟ್ಕ ಆಫೀಸರನ್ನು ನೇಮಕ ಮಾಡುವುದಕ್ಕೆ ಬದಲು ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ವಹಿಸಿಬಿಟ್ಟರೆ ಚೆನ್ನಾಗಿರುತ್ತದೆ. ತಾವು ಯೋಚನೆ ಮಾಡಿ?

ಶ್ರೀ ಎ. ಬಿ. ಬ್ಯಾಡಗಿ.—ರಾಜ್ಯ ಲಾಟರಿಯವರನ್ನು ಯಾವ ಒಂದು ಕಾಯಿದೆಶಿರಬದ್ಧವಾಗಿ ನಡೆಸುತ್ತಿರುತ್ತಾರೆ ಅದೇ ಪ್ರಕಾರವಾಗಿ ಜನತೆಯ ನಿಶ್ಚಿತವಾದ ಮನೋಭಾವ ಯಾವುದೇ ಕಾಯಿದೆ ಮುಖಾಂತರ ನಡೆಯಬೇಕೆಂದು ಹೇಳುತ್ತೇನೆ.

ದಿನೇ ದಿನೇ ಗ್ರಾಮೀಣ ವಿಭಾಗದಲ್ಲಿ ಕುಸಿಯುತ್ತಿರುವ ಕಾಯಿದೆ ಮತ್ತು ಸುವ್ಯವಸ್ಥೆ ಬಗ್ಗೆ ವಿಶೇಷ ವ್ಯವಸ್ಥೆ ಏರ್ಪಾಡು ಮಾಡಬೇಕು. ಗುನ್ಹೇಗಾರಿ ನಿರ್ಮೂಲನೆ ಮಾಡಬೇಕಾದರೆ ಮೊದಲು ಪಟ್ಟಬದ್ರ ಹಿತಾಶಕ್ತಿಗಳ ನಿರ್ಮೂಲನಕ್ಕೆ ಪಣತೊಡಬೇಕು. ಗುನ್ಹೇಗಾರಿ ನಿರ್ಮೂಲನ ಮಾಡುವ ಸಲುವಾಗಿ ಪೋಲೀಸರ ಸಂಖ್ಯೆಯನ್ನು ಹೆಚ್ಚು ಬೆಳಸಿದರೆ ಉಪಯೋಗವಿಲ್ಲ. ಗುನ್ಹೇಗಾರಿ ವಲಯದಲ್ಲಿ ಪೋಲೀಸರೆಂದರೆ ದಹಶತ್ ಅಂದರೆ ಭಯ, ಅಂಜಿಕೆ ಬರುವಂತೆ ಮಾಡಬೇಕಾಗುತ್ತದೆ. ಅದೇ ಪ್ರಕಾರ, ಸಮಾಜದಲ್ಲಿರುವ ಸಜ್ಜನರೊಂದಿಗೆ ಪೋಲೀಸರು ಆತ್ಮೀಯತೆಯಿಂದಿರಬೇಕಾಗುತ್ತದೆ. ಆದುದರಿಂದ ವ್ಯಾಪಕ ಕ್ಷೇತ್ರದಲ್ಲಿ ಕಡಮೆ ಜನ ಪೋಲೀಸರು ಹೆಚ್ಚು ದಕ್ಷತೆಯಿಂದ ಕಾರ್ಯನಿರ್ವಹಿಸಬಲ್ಲರು. ಉದಾಹರಣೆಗೆ: ಕಡಮೆ ಕ್ಷೇತ್ರದಲ್ಲಿ ಹೆಚ್ಚು ಫಸಲು ಬೆಳೆಯುವುದಿಲ್ಲವೆ? ಹಾಗೆ. ಇದೇ ಪ್ರಕಾರ ಎಲ್ಲ ಕ್ಷೇತ್ರಗಳಲ್ಲೂ ಇದೇ ನಮ್ಮ ಗುರಿಯಾಗಿರಬೇಕು.

ಅಧಿಕಾರಿಗಳ ಭ್ರಷ್ಟಾಚಾರದ ಬಗ್ಗೆ ಮತ್ತು ಅಧಿಕಾರೇತರ ಭ್ರಷ್ಟಾಚಾರದ ಬಗ್ಗೆ ಈ ಸದನದಲ್ಲಿ ಸಾಕಷ್ಟು ಸಲ ಪ್ರಸ್ತಾಪಿಸಲಾಗಿದೆ. ಅಧಿಕಾರಿಗಳು ಮತ್ತು ಅಧಿಕಾರೇತರರು ಮಾಡುವ ಭ್ರಷ್ಟಾಚಾರದಿಂದಾಗಿ ಅನೇಕ ಅನ್ಯಾಯಗಳಾಗುತ್ತಿವೆ. ಇದನ್ನು ತಡೆಗಟ್ಟುವ ದಿಸೆಯಲ್ಲಿ ಪರಿಣಾಮಕಾರಿಯಾದ

ಎಲ್ಲರೂ ಹೇಳುತ್ತಾರೆ. ಆದರೆ ನಾನು ಕೋಟಿ ವಿದ್ಯೆಗಳಿಗಿಂತ ಚಾಟಿ ವಿದ್ಯೆಯೇ ಮೇಲೆಂದು ನಾನೂ ಹೇಳುತ್ತೇನೆ. ಬೆಳೆಯುವವನ ಹಾಗು ತಿನ್ನುವವನ ಮಧ್ಯ ಬಂದಿರುವ ಮಧ್ಯವರ್ತಿಗಳು ಚಾಟಿಯಿಂದ ಹೊಡೆಯುತ್ತಿರತಕ್ಕದ್ದು ಒಂದು ವಿಧವಾದ ಪರಿಣಾಮ ದೇಶದಲ್ಲಿ ಬೀರಿದೆ. ಈ ಮಧ್ಯವರ್ತಿಗಳಿಂದ ರೈತರಿಗೆ ಯಾವ ಲಾಭವೂ ಆಗುವುದಿಲ್ಲ. ಪ್ರತಿದಿನ ನಮ್ಮ ಗ್ರಾಮೀಣ ವ್ಯವಸ್ಥೆ ಬುಡಮೇಲಾಗುತ್ತಿರುವ ಸ್ಥಿತಿಗೆ ಬಂದಿದೆ. ಹಳ್ಳಿಯ ಒಂದು ಸಮೀಕ್ಷೆಯನ್ನು ಮಾಡಿದರೆ ಹಳ್ಳಿಗಳಲ್ಲಿ ಸುಮಾರು ೫ ರಿಂದ ೧೦ ಸುಶಿಕ್ಷಿತರನ್ನು ನೋಡಬಹುದು. ೫೦ ರಿಂದ ೬೦ ಜನ ದಾರಿದ್ರ್ಯ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಇರುವವರನ್ನು ನಾವು ನೋಡಬಹುದು. ೩೦ ರಿಂದ ೪೦ ಜನ ನಿರ್ಗತಿಕರನ್ನು ನೋಡಬಹುದು, ೧೦ ರಿಂದ ೧೫ ಜನರು ಮಧ್ಯಮ ಪರಿಸ್ಥಿತಿಯಲ್ಲಿ ಇರತಕ್ಕವರನ್ನು ನೋಡಬಹುದು. ಹೀಗೆ ಗ್ರಾಮೀಣ ವಿಕಾಸದ ಸಮಸ್ಯೆ ಬಗೆಹರಿಯದ ಹೊರತು ನಮ್ಮ ದೇಶದ ಸಮಸ್ಯೆ ಬಗೆಹರಿಯದು. ಆದರೆ ಹೇಗೆ ಬಗೆಹರಿಸುವುದು ? ಸುಶಿಕ್ಷಿತ ಜನರು ಏನೋ ಸ್ವಲ್ಪ ವ್ಯವಸಾಯವನ್ನು ಉತ್ತಮವಾಗಿ ಮಾಡಿದ್ದಾರೆ, ಆದರೆ ಸಣ್ಣ ಸಣ್ಣ ರೈತರು ತನ್ನ ಒಕ್ಕಲುತನವನ್ನು ಸುಧಾರಿಸುವುದು ಬಹಳ ತೊಂದರೆಯಾಗಿದೆ. ಏಕೆಂದರೆ ಅವನಲ್ಲಿ ಭೂಮಿ ಇದೆ, ಆದರೆ ಆತನ ಬಳಿ ಹಣವಿಲ್ಲ. ಅವನಿಗೆ ಸಾಲದ ಸೌಕರ್ಯದ ವ್ಯವಸ್ಥೆ ಇಲ್ಲ. ಒಂದು ವೇಳೆ ಸಾಲ ಸೌಕರ್ಯದ ವ್ಯವಸ್ಥೆ ಇದ್ದರೂ ಕೂಡ ಅದನ್ನು ಮತ್ತೆ ವಾಪಸ್ ಕೊಡುವ ಸಾಧ್ಯತೆ ಇಲ್ಲ. ಅದಕ್ಕಾಗಿ ಈ ಸಮಸ್ಯೆಯನ್ನು ಹೇಗೆ ನಿವಾರಣೆ ಮಾಡಬೇಕು ? ಅದಕ್ಕೆ ಪರಿಹಾರ ಇಷ್ಟೇ, ಯಾವ ಊರಿನಲ್ಲಿ ಇರುವ ಸೊಸೈಟಿ ಆ ಊರಿನ ಒಕ್ಕಲತನಕ್ಕೆ ಅವಶ್ಯವಾಗಿರುವ ಸಾಲ ಸೌಕರ್ಯಗಳನ್ನು ಒದಗಿಸಿ ಕೊಟ್ಟು ಅವರಿಗೆ ನೆರವಾಗಬೇಕು. ಆ ಒಂದು ಸೌಕರ್ಯ ಬಡವರಿಗೆ ಸಿಕ್ಕುವಹಾಗೆ ಆದಷ್ಟು ವ್ಯವಸ್ಥೆ ಮಾಡಬೇಕು.

೫–೩೦ ಪಿ. ಎಂ.

ಗ್ರಾಮ ಅಭಿವೃದ್ಧಿಯಾಗಬೇಕಾದರೆ ಚಿಕ್ಕ ನೀರಾವರಿ ಪಾತ್ರ ಬಹಳ ಮಹತ್ತರದ್ದಾಗಿರುತ್ತದೆ. ಇದು ದುರ್ದೈವದಿಂದ ಈವರೆಗೆ ಆಗಿರುವುದನ್ನು ಸೂಕ್ಷ್ಮವಾಗಿ ನೋಡಿದರೆ ನೀರಾವರಿ ಸಂಖ್ಯೆ ಬಹು ಕಡಿಮೆಯಿರುತ್ತದೆ. ಸುವ್ಯವಸ್ಥಿತವಾಗಿ ಕಾರ್ಯನಿರ್ವಹಿಸಲು ಸರ್ಕಾರಿ ಅಡ್ಮಿನಿಸ್ಟ್ರೇಟಿವ್ ಲೆವಲ್‌ನಲ್ಲಿ ಒಂದು ಸಣ್ಣ ನೀರಾವರಿಗೆ ಮಂಜೂರಾತಿಯನ್ನು ದೊರಕಿಸಿಕೊಳ್ಳಬೇಕಾದರೆ ಬಹಳಷ್ಟು ಪ್ರಯಾಸವನ್ನು ಪಡಬೇಕಾದ ಸಂದರ್ಭಗಳು ಇರುತ್ತವೆ. ಎರಡು ವರ್ಷಗಳಾದರೂ ಸರ್ಕಾರಿ ಮಂಜೂರಾತಿ ದೊರಕುವುದಿಲ್ಲ ಕಳೆದ ೧೦–೨೦ ವರ್ಷಗಳಿಂದಲೂ ಸಣ್ಣ ನೀರಾವರಿಯ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಆದ್ದರಿಂದ ಒಂದು ವಿಷಯವನ್ನು ಹೇಳುವುದೇನೆಂದರೆ ನೀರಾವರಿಯನ್ನು ಮಂಜೂರಾತಿ ಮಾಡತಕ್ಕಂಥ ಯಾವುದೇ ಖಾತೆ ಇರಲಿ ಯಶಸ್ವಿಯಾಗಿ ಕೆಲಸ ಮಾಡತಕ್ಕಂಥ ವ್ಯವಸ್ಥೆ ಇರಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರೈತನು ಉತ್ತಮವಾದ ಬೆಳೆಯನ್ನು ಬೆಳೆಯಬೇಕಾದರೆ ಯೋಗ್ಯವಾದ ಬೀಜ, ಗೊಬ್ಬರ ಇವುಗಳನ್ನು ಒದಗಿಸಬೇಕು ಜನತೆಯ ಆರೋಗ್ಯಕ್ಕೆ ಉತ್ತಮವಾದ ಸಬ್‌ಸ್ಟಾನ್‌ಷಿಯಲ್ ಫುಡ್, ಅಂದರೆ ಒಳ್ಳೆಯ ಆಹಾರಧಾನ್ಯಗಳನ್ನು ಉತ್ಪಾದನೆ ಮಾಡುತ್ತಾನೆ. ಜೋಳ, ರಾಗಿ, ನವಣೆ ಇವೆಲ್ಲ ಉತ್ತಮವಾದ ಆಹಾರ. ಇವೆಲ್ಲವನ್ನೂ ನಾವು ಪುರಾತನ ಕಾಲದಿಂದಲೂ ಉಪಯೋಗಿಸಿಕೊಂಡು ಬಂದಿದ್ದೇವೆ. "ಜೋಳ ತಿಂದು ಜಟ್ಟಿಯಾದ, ಅಕ್ಕಿ ತಿಂದು ಹಕ್ಕಿಯಾದ ರಾಗಿ ತಿಂದು ನಿಯೋಗಿಯಾದ" ಎಂದು ಹೇಳಿದಾಗೆ ಒಳ್ಳೆಯ ಆಹಾರ ಪದಾರ್ಥಗಳಾಗಿರುತ್ತವೆ. ರೈತನು ಬೆಳೆಯನ್ನು ಬೆಳೆದು, ಬೆಳೆ ಕೈಗೆ ಬಂದಾಗ ಅದಕ್ಕೆ ಯೋಗ್ಯ ಬೆಲೆಯು ಈವತ್ತಿನ ದಿವಸ ದೊರೆಯುವುದಿಲ್ಲ. ಮಾರ್ಕೆಟಿಂಗ್ ಸೊಸೈಟಿಗಳಿಂದು ಇದ್ದರೂ, ರೈತರಿಗೆ ಸಮಸ್ಯೆಯಾಗಿರುತ್ತದೆ. ಇವುಗಳು ಇದ್ದರೂ ಇದರ ಉಪಯೋಗ ರೈತರಿಗೆ ತಿಳಿದಿರುವುದಿಲ್ಲ. ಹಣಬೇಕಾದರೆ ಈವತ್ತಿಗೂ ದೊಡ್ಡ ದೊಡ್ಡ ವ್ಯಾಪಾರಸ್ಥರ ಹತ್ತಿರ ಹೋಗುತ್ತಾರೆ. ರೈತರಿಗೆ ಮಾರ್ಕೆಟಿಂಗ್ ಸೊಸೈಟಿಯ ಬಗ್ಗೆ ಹೆಚ್ಚಿನ ಮಾಹಿತಿಗಳು ರೈತರಿಗೆ ತಿಳಿಯುವಂಥ ವ್ಯವಸ್ಥೆಯನ್ನು ಮಾಡಬೇಕು. ಈ ಖಾತೆಯನ್ನು ಹೊಂದಿರತಕ್ಕಂಥ ಸಹಕಾರಿ ಮಂತ್ರಿಗಳು ಇದರಬಗ್ಗೆ ಹೆಚ್ಚಿನ ಅನುಭವ ಉಳ್ಳವರಾಗಿರುತ್ತಾರೆ. ಸಂಘಸಂಸ್ಥೆಗಳು ಉತ್ತಮ ರೀತಿಯಲ್ಲಿ ಕೆಲಸಮಾಡಲು ಅವರ ಬೇಡಿಕೆಗಳ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸುವಂಥ ವ್ಯವಸ್ಥೆಯನ್ನು ಮಾಡಬೇಕು. ರೈತನು ಬೆಳೆಯತಕ್ಕಂಥ ಫಸಲು ರಾಗಿ, ಜೋಳ, ಗೋಧಿ ವೇರ್‌ಹೌಸ್‌ನಲ್ಲಿ ಇಟ್ಟು, ಯೋಗ್ಯಬೆಲೆ ಬಂದಾಗ ಹಣ ದೊರೆಯುವಂಥ ಏರ್ಪಾಡು ಮಾಡಬೇಕು. ಗ್ರಾಮಾಂತರ ಪ್ರದೇಶದ ರೈತರ ಆರ್ಥಿಕ ವ್ಯವಸ್ಥೆಯನ್ನು ರೂಪಿಸಲು

ಪರಿಹಾರವಿನ್ನೂ ದೊರೆಯದಿದ್ದರೂ, ಸಮಾಜದಲ್ಲಿನ ಪ್ರಗತಿಪರ ತಿಳುವಳಿಕೆಯಿಂದಾಗಿ ಅಧಿಕಾರಿಗಳ ಕಾರ್ಯಕ್ಷಮತೆ ಮತ್ತು ನಡವಳಿಕೆಗಳು ಸಾಗಿದಂತೆ ಭ್ರಷ್ಟಾಚಾರ ಕ್ರಮೇಣ ಕಡಮೆಯಾಗುವುದೆಂದು ನಾನು ನಂಬಿದ್ದೇನೆ. ಅದೇ ಪ್ರಕಾರ ಅಧಿಕಾರಿಗಳ ಕಾರ್ಯನಿರ್ವಹಣೆಯಲ್ಲಿ ಲೋಪದೋಷಗಳಿಂದಲೂ ಸಹ ಅವರ ಸ್ಥೈರ್ಯ ಕುಸಿಯದ ಹಾಗೆ ನೋಡಿಕೊಳ್ಳಬೇಕು. ನಾವು ಎಷ್ಟು ಶ್ರಮವಹಿಸಿ ಕಾರ್ಯನಿರ್ವಹಿಸಿದರೂ ನಮ್ಮ ಬಗ್ಗೆ ಗೌರವಾದರಗಳು ಅಷ್ಟಕ್ಕಷ್ಟೆ ಎನ್ನುವ ಭಾವನೆ ಅವರಲ್ಲಿ ಉಂಟಾಗಬಾರದು. ಇದರ ಜೊತೆಗೆ, ಅವರು ದಕ್ಷರೆಂದೂ, ದುಷ್ಟ ಮತ್ತು ಸಮಾಜಘಾತುಕ ಪ್ರವೃತ್ತಿಗೆ ಪ್ರೋತ್ಸಾಹ ಕೊಡುವವರಲ್ಲವೆಂದೂ ಜನತೆಯಲ್ಲೂ ಮತ್ತು ಸಮಾಜದಲ್ಲೂ ವಿಶ್ವಾಸ ಮೂಡುವ ದಿಸೆಯಲ್ಲಿ ಅವ್ಯಾಹತ ಪ್ರಯತ್ನ ಸಾಗಬೇಕು.

ಇನ್ನು, ನಿವೃತ್ತ ಅಧಿಕಾರಿಗಳ ಅನುಭವ ಲಾಭ ಪಡೆಯಬೇಕು. ಆದರೆ, ಅವರನ್ನು ಯಾರ ತಲೆಯ ಮೇಲೂ ಹೇರದೆ, ಬರೀ ಸಲಹೆಗಳ ರೂಪದಲ್ಲಿ ಅವರ ಅನುಭವದ ಲಾಭವನ್ನು ಪಡೆಯಲು ಪ್ರಯತ್ನಿಸಬೇಕೆಂದು ಸಲಹೆ ಮಾಡಿ, ಇಷ್ಟು ಹೊತ್ತು ಮಾತನಾಡಲು ಅವಕಾಶಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಎಫ್. ಭೈರಿ (ಷಹಾಬಾದ್).—ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿ ಇಲಾಖೆ ಬೇಡಿಕೆ ಮೇಲೆ ಮಾತನಾಡುವುದು ಬಹಳ ಅಗತ್ಯವಿದೆ. ನಾನು ತಿಳಿದ ಮಟ್ಟಿಗೆ ಗ್ರಾಮಾಭಿವೃದ್ಧಿ ಕೆಲಸ ಕಾರ್ಯಗಳೆಲ್ಲ ಬರೀ ಕಾಗದದ ಮೇಲೆ ಆಗಿದೆ. ನಮ್ಮ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ನಿರ್ಮಿಸಿರುವ ಜನತಾ ಗೃಹಗಳಲ್ಲಿ ಕೆಲವು ಬಿದ್ದುಹೋಗಿವೆ ಮತ್ತೆ ಕೆಲವು ಇನ್ನೂ ಪೂರ್ಣವಾಗಿಲ್ಲ. ಚಿತ್ತಾಪುರ, ಮಾಳಗತ್ತಿ ಮತ್ತು ಹಳಿಯಾಳ ತಾಲ್ಲೂಕುಗಳಲ್ಲಿ ಜನತಾ ಗೃಹಗಳು ಇನ್ನೂ ಪೂರ್ಣಗೊಂಡಿಲ್ಲದಿದ್ದರೂ, ಫೈನಲ್ ಬಿಲ್‌ನ್ನು ತೆಗೆದುಕೊಳ್ಳಲಾಗಿದೆ. ಈ ಮನೆಗಳಲ್ಲಿ ಯಾರು ವಾಸ ಮಾಡುತ್ತಿಲ್ಲ ಮತ್ತು ಅನೇಕ ಮನೆಗಳು ಬಿದ್ದುಹೋಗಿವೆ. ಈ ಮನೆಗಳ ದುಸ್ಥಿತಿ ಬಗ್ಗೆ ಯಾವೊಬ್ಬ ಅಧಿಕಾರಿಯೂ ಹೋಗಿ ನೋಡಿಲ್ಲ; ವರದಿ ಮಾಡಿಲ್ಲ. ಆದರೆ, ಮನೆಗಳು ಪೂರ್ಣಗೊಂಡಿವೆ ಎಂದು ಸುಳ್ಳು ದಾಖಲೆಯನ್ನು ಯಾರು ತಯಾರು ಮಾಡಿದರೋ ಗೊತ್ತಾಗುತ್ತಿಲ್ಲ.

ನಮ್ಮ ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಗಳ ಪಟ್ಟಿಯಲ್ಲಿ ಸೇರಿಸಿದ್ದಾರೆ. ಆದರೆ, ಹಿಂದುಳಿದ ಜಿಲ್ಲೆಗಳ ಬಗ್ಗೆ ತೆಗೆದುಕೊಳ್ಳುವ ಕಾಮಗಾರಿಗಳೊಂದೂ ನಮ್ಮ ಜಿಲ್ಲೆಯಲ್ಲಿ ನಡೆಯುತ್ತಿಲ್ಲ. ನಮ್ಮ ಜಿಲ್ಲೆಯನ್ನು ಮುಂದಕ್ಕೆ ತರಲು ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ನಾನು ಎಷ್ಟೋ ಸಾರಿ ಈ ಸದನದಲ್ಲಿ ನಮ್ಮ ಜಿಲ್ಲೆಯಲ್ಲಿ ತೆಗೆದುಕೊಳ್ಳಬೇಕಾದ ನೀರಾವರಿ ಮತ್ತು ಕೆರೆ ಕಾಮಗಾರಿಗಳ ವಿಷಯವಾಗಿ ಪ್ರಶ್ನೆ ಕೇಳುತ್ತಾ ಇರುತ್ತೇನೆ. ಆದರೂ, ನೀರಾವರಿ ಕಾಮಗಾರಿಗಳ ಕೆಲಸವನ್ನು ಅಲ್ಲಿ ಪ್ರಾರಂಭಿಸಿಲ್ಲ. ನನ್ನ ಕ್ಷೇತ್ರದಲ್ಲಿ ಕಳೆದ ಹತ್ತು ವರ್ಷಗಳ ಹಿಂದೆ ತಾಲ್ಲೂಕು ಅಭಿವೃದ್ಧಿ ಮಂಡಲಿ ವತಿಯಿಂದ ಶಾಲೆಯೊಂದನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕಟ್ಟಲು ಕೊಟ್ಟರು. ಆ ಶಾಲೆ ಕಟ್ಟಡ ಇನ್ನೂ ಪೂರ್ಣಗೊಂಡಿಲ್ಲ. ಬೇಸ್ಮೆಂಟ್ ಬಿಟ್ಟು ಕಟ್ಟಡ ಮೇಲೆದ್ದಿಲ್ಲ. ಕಂಟ್ರಾಕ್ಟರು ಇದ್ದಾನೋ ಅಥವಾ ಸತ್ತಿದ್ದಾನೋ ಗೊತ್ತಿಲ್ಲ. ಗ್ರಾಮಾಭಿವೃದ್ಧಿ ಕೆಲಸಗಳು ಈ ರೀತಿ ನಡೆದರೆ ಹೇಗೆ ?

ನಮ್ಮ ಕಡೆಯ ಎಷ್ಟೋ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸೌಲಭ್ಯವಿಲ್ಲ. ಐ.ಸಿ.ಆರ್.ಸಿ. ಯೋಜನೆಯಲ್ಲಿ ಗ್ರಾಮ ವಿದ್ಯುಚ್ಛಕ್ತೀಕರಣ ಮಾಡುತ್ತಾರೆಂದು ಹೇಳುತ್ತಿದ್ದಾರೆ. ಆದರೆ, ವಿಶೇಷವಾಗಿ ಒಂದು ಹಳ್ಳಿಯನ್ನು ತೆಗೆದುಕೊಂಡು ವಿದ್ಯುಚ್ಛಕ್ತೀಕರಣ ಮಾಡಿದ್ದು ನನಗೆ ಕಾಣುತ್ತಿಲ್ಲ. ಇದೂ ಅಲ್ಲದೆ, ಕೆಲವು ಗ್ರಾಮಗಳಲ್ಲಿ ಪ್ರಭಾವಿ ಜನರು ಮಾತ್ರ ವಿದ್ಯುಚ್ಛಕ್ತಿ ಸೌಲಭ್ಯ ಪಡೆಯುವುದರಿಂದ ಅರ್ಧ ಊರು ಕತ್ತಲೆಯಲ್ಲಿದ್ದರೆ, ಇನ್ನರ್ಧ ಊರು ಮಾತ್ರ ಬೆಳಕಿನಲ್ಲಿರುತ್ತದೆ. ಹೀಗಾಗಿ, ನಮ್ಮ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಕೆಲಸಗಳು, ನೀರಾವರಿ ಕಾಮಗಾರಿಗಳು ಮತ್ತು ಹರಿಜನ-ಗಿರಿಜನರ ಅಭಿವೃದ್ಧಿ ಕೆಲಸಕಾರ್ಯಗಳೊಂದೂ ಆಗಿಲ್ಲ. ನಮ್ಮ ಕಡೆಗಳಲ್ಲಿ ಕುಡಿಯುವ ನೀರನ್ನು ಒದಗಿಸುವುದಕ್ಕಾಗಿ ಬಾವಿಗಳನ್ನು ತೋಡಲಾಗಿದೆ ಎಂದು ಹೇಳಿದ್ದಾರೆ. ಆದರೆ, ಬೇಸಿಗೆ ಬಂದರೆ ಅಲ್ಲಿನ ಜನ ಕೊಳಚೆ ನೀರು ಕುಡಿಯುವ ಪರಿಸ್ಥಿತಿ ಇದೆ. ಆದುದರಿಂದ, ಅತ್ಯಂತ ಹಿಂದುಳಿದಿರುವ ಗುಲ್ಬರ್ಗ ಜಿಲ್ಲೆ ಕಡೆ ಹೆಚ್ಚಿನ ಲಕ್ಷ್ಯ ಕೊಟ್ಟು, ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಹೆಚ್ಚು ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಪ್ರಾರ್ಥಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಗಂಗಣ್ಣ (ಕುಷ್ಟಗಿ).—ಸನ್ಮಾನ್ಯ ಅಧ್ಯಕ್ಷರೇ. ಮಾನ್ಯ ಗ್ರಾಮಾಭಿವೃದ್ಧಿ ಸಚಿವರು ಮಂಡಿಸಿರುವ ಬೇಡಿಕೆಯನ್ನು ಸಮರ್ಥಿಸುತ್ತಾ, ನಾನು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೨೬,೮೨೬ ಹಳ್ಳಿಗಳಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಈ ಎಲ್ಲ ಗ್ರಾಮಗಳಿಗೂ ಕುಡಿಯುವ ನೀರನ್ನು ಪೂರೈಕೆ ಮಾಡುವ ಕಾರ್ಯ ನಮಗೆ ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳಾದರೂ ಇನ್ನೂ ಆಗಿಲ್ಲ ಹೈದರಾಬಾದ್ ಪ್ರಾಂತ್ಯಕ್ಕೆ ಸೇರಿದ ಮೂರು ಜಿಲ್ಲೆ ಗಳಲ್ಲೂ ಕುಡಿಯುವ ನೀರಿಲ್ಲದೆ ಜನರು ಅನುಭವಿಸುತ್ತಿರುವ ಬವಣೆ ಹೇಳತೀರದಾಗಿದೆ. ನಮ್ಮ ಭಾಗ ದಲ್ಲಿ ಹಿಂದೆ, ಅಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ಮನ್ನಾ ಎನ್ನುವ ಪ್ರಖ್ಯಾತ ಭೂಗರ್ಭಶಾಸ್ತ್ರಜ್ಞರಿದ್ದರು. ಅವರು ಪ್ರತಿ ಊರಿಗೆ ಕನಿಷ್ಟ ಮೂರು ಬಾವಿಗಳನ್ನೂ ಮತ್ತು ಮೂರು-ನಾಲ್ಕು ರಸ್ತೆ ಕೂಡುವ ಕಡೆ ಗಳಲ್ಲಿ ಕನಿಷ್ಟ ಒಂದು ಭಾವಿಯನ್ನು ಕಟ್ಟಿಸಿದ್ದನು. ಇಂದು ಅವುಗಳನ್ನು ಸರಿಯಾಗಿ ನೋಡಿಕೊಳ್ಳುವ ವ್ಯವಸ್ಥೆ ಇಲ್ಲದೆ ಅವು ಹಾಳಾಗುತ್ತಿವೆ. ನಮ್ಮ ತಾಲ್ಲೂಕಿನ ಒಂದು ಸ್ಥಳದಲ್ಲಿ ಆ ಪ್ರಖ್ಯಾತ ಭೂಗರ್ಭ ಶಾಸ್ತ್ರಜ್ಞನ ಗೋರಿ ಇದೆ. ಅದರ ಮೇಲೆ "ನೀರಿಗಾಗಿ ಹಾಹಾಕಾರ ಪಡುತ್ತಿದ್ದವರಿಗೆ ನೀರು ಕುಡಿಸಿದ ಪುಣ್ಯಾತ್ಮ" ಎಂದು ಬರೆಯಲಾಗಿದೆ. ಕನಿಷ್ಠ ಕುಡಿಯುವ ನೀರಿನ ವ್ಯವಸ್ಥೆಯನ್ನು ಪೂರೈಸಲಿಕ್ಕೆ ನಮಗೆ ಸ್ವಾತಂತ್ರ್ಯ ಬಂದು ೩೩ ವರ್ಷಗಳಾದರೂ ಆಗಲಿಲ್ಲವೆಂದರೆ ಇದಕ್ಕೆ ನಾವು ವ್ಯಥೆಪಡಬೇಕೋ ದುಃಖ ಪಡಬೇಕೋ ಎನ್ನುವುದು ಗೊತ್ತಾಗುತ್ತಿಲ್ಲ. ನಮ್ಮ ಜಿಲ್ಲೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುತ್ತಿದ್ದು, ಅಲ್ಲಿಯ ಜನರಿಗೆ ಜೀವನಕ್ಕೆ ಎಷ್ಟು ತೊಂದರೆಯಾಗುತ್ತಿದೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಇವತ್ತಿನದಿನ ನಾನು ಊರಿಗೆ ಹೋಗಿ ಬಂದಿದ್ದೇನೆ, ಅಲ್ಲಿ ಇನ್ನೂ ಕೂಡ ಬಿತ್ತನೆ ಆಗಲಿಲ್ಲ ಎಂದರೆ ಇದನ್ನು ತಾವು ಅರ್ಥಮಾಡಿಕೊಳ್ಳಬೇಕು. ಅಲ್ಲಿ ಒಂದು ರಿಗ್ ಮೆಷೀನ್ ಕೂಡ ಇಲ್ಲ, ತಮ್ಮ ಮುಖಾಂತರ ಮಾನ್ಯ ಸಚಿವರ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ, ನನ್ನ ಕ್ಷೇತ್ರದಲ್ಲಿ ಒಂದು ಹಳ್ಳಿ ಇದೆ ಅಲ್ಲಿ ಹರಿಜನರ ೫ ಕುಟುಂಬಗಳು ಇವೆ, ಅಲ್ಲಿ ಏನಾಗಿದೆ ಎಂದರೆ ಸವರ್ಣೀಯರ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುವಂತಿಲ್ಲ. ಇದು ಅಲ್ಲಿಯ ಜನರ ಹಣೆಬರಹ ಅದನ್ನು ನೋಡುವವರು ಇಲ್ಲ ಕೇಳುವವರು ಮೊದಲೇ ಇಲ್ಲ ಇದನ್ನು ಮಾನ್ಯ ಸಚಿವರು ಗಮನಿಸಬೇಕೆಂದು ಕೇಳುತ್ತೇನೆ. ಅಲ್ಲಿ ಒಂದು ಬೋರ್‌ವೆಲ್ ಕೂಡಾ ಹಾಕಿಲ್ಲ. ಅನೇಕ ಸಾರಿ ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಕೂಡ ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೇನೆ, ಆದರೂ ಕೂಡ ಏನೂ ಪ್ರಯೋಜನವಾಗಿಲ್ಲ. ಇನ್ನು ಈ ಬೋರ್‌ವೆಲ್ ತೆಗೆಯುವಾಗ ಎಲ್ಲಿ ನೀರು ಸಿಕ್ಕುತ್ತದೆ ಅಥವಾ ಎಲ್ಲಿ ನೀರು ಸಿಕ್ಕುವುದಿಲ್ಲವೆಂದು ಸರಿಯಾಗಿ ಪರಿಶೀಲನೆಮಾಡಿ ಬೋರ್‌ವೆಲ್ ತೆಗೆಯುವುದಿಲ್ಲ, ಎಲ್ಲಿ ಬೇಕಾದರೆ ಅಲ್ಲಿ ತೆಗೆದುಬಿಡುತ್ತಾರೆ ಅಲ್ಲಿ ನೀರು ಬರುವುದಿಲ್ಲ. ಒಂದು ಬೋರ್ ವೆಲ್‌ಗೆ ಸುಮಾರು ೭-೮ ಸಾವಿರ ರೂಪಾಯಿ ಬೇಕಾಗುತ್ತದೆ. ಒಂದು ಹಳ್ಳಿಯಲ್ಲಿ ಎರಡು ಮೂರು ಬಾವಿಗಳು ಇವೆ, ಒಂದರಲ್ಲೂ ನೀರು ಬಂದಿರುವುದಿಲ್ಲ, ಆದ್ದರಿಂದ ಅಲ್ಲಿಗೆ ಒಬ್ಬ ಜಿಯಾಲಿಜಿಸ್ಟ್ ಕಳುಹಿಸಿ ಅಲ್ಲಿ ನೀರು ಸಿಕ್ಕುತ್ತದೆಯೋ, ಇಲ್ಲವೇ ಎಂದು ನೋಡಿ ತೆಗೆಯಬೇಕು. ನಮ್ಮ ಹಳ್ಳಿಗಳಲ್ಲಿ ಬಾಂದ್ ಕಲ್ಲು ಹಾಕಿ ಗುರುತು ಮಾಡುತ್ತಾರೆ ಆ ರೀತಿ ಮಾಡಿದರೆ ಬೋರ್‌ವೆಲ್ ತೆಗೆಯುವಾಗ ಆ ಗುರುತಿನಲ್ಲಿ ತೆಗೆದರೆ ನೀರು ಸಿಕ್ಕುತ್ತದೆ ಅದನ್ನು ಮಾಡುತ್ತಿಲ್ಲ, ಯಾವಾಗ ರಿಗ್ ಮೆಷಿನ್ ಸಿಕ್ಕುತ್ತದೆ ಆಗ ತೆಗೆದರೂ ಚಿಂತೆಯಿಲ್ಲ. ಹಿಂದೆ ನಮ್ಮ ಹೈದರಾಬಾದ್ ಕರ್ನಾಟಕದಲ್ಲಿ ಮೊದಲು ವೆಲ್ ಡಿಂಕಿಂಗ್ ಡಿಪಾರ್ಟ್‌ಮೆಂಟ್ ಎಂದು ಇರುತ್ತಿತ್ತು. ಯಾವ ಕೆಲಸವನ್ನು ಮಾಡುವಾಗಲೂ ಇದು ಯೋಚನೆ ಮಾಡಿ ಯಾವ ಕೆಲಸ ಮಾಡಬೇಕು, ಎಲ್ಲಿ ಮಾಡಬೇಕು ಇದರಿಂದ ಎಷ್ಟು ಉಪಯೋಗ ಆಗುತ್ತದೆಂದು ಯೋಚನೆ ಮಾಡುವ ಒಂದು ಕ್ರಮ ಇತ್ತು. ಅದು ಈಗ ಇಲ್ಲ. ಎಲ್ಲಿ ಕೊರತೆಯಿದೆ ಎಂದು ತಿಳಿದು ಆ ಕೊರತೆಯನ್ನು ನೀಗಿಸಲಿಕ್ಕೆ ಪ್ರಯತ್ನ ಮಾಡುತ್ತಿತ್ತು. ಆದ್ದರಿಂದ ಆ ರೀತಿ ಮಾಡಿದರೆ ಅನುಕೂಲವಾಗುತ್ತದೆ. ನಮ್ಮ ರಾಜ್ಯದ ರಾಜ್ಯೋತ್ಸವದ ಸಿಲ್ವರ್ ಜೂಬಿಲಿ ನಡೆಯುವ ನವೆಂಬರ್ ತಿಂಗಳೊಳಗೆ ಕುಡಿಯುವ ನೀರಿನ ಬವಣೆ ಯನ್ನು ರಾಜ್ಯಾದ್ಯಂತ ಪೂರೈಸುವಂತೆ ಆಗಬೇಕೆಂದು ಮಾನ್ಯ ಸಚಿವರು ಏನು ಹೇಳಿದ್ದಾರೆ ಇದು ಕೇವಲ ಪೇಪರ್‌ನಲ್ಲಿ ಸ್ಟೇಟ್‌ಮೆಂಟ್ ಆಗದೆ ಅದು ಕಾರ್ಯಗತವಾಗುವಂತೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ಒಂದು ವಿಷಯ ಈ ವರದಿಯನ್ನು ಏನು ಕೊಟ್ಟಿದ್ದಾರೆ ಅದರಲ್ಲಿ ಏನು ಇದೆ. ಏನು ಮಹಿಳಾ ಮಂಡಲಿಗಳಿಗೆ ಒಂದು ಲಕ್ಷರೂಪಾಯಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇಡೀ ರಾಜ್ಯಕ್ಕೆ ಒಂದು ಕೋಟಿ ರೂಪಾಯಿ ಕೊಟ್ಟರೆ ೧೯ ಜಿಲ್ಲೆಗಳಿಗೆ ಏನು ಸಾಧನೆ ಮಾಡಲಿಕ್ಕೆ ಸಾಧ್ಯವೆಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

SRI M. C. NANAIAH.—What does hon. Member Smt. Pramila say for this ?

ಶ್ರೀಮತಿ ಎಸ್. ಪ್ರಮೀಳಾ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ನಾನಯ್ಯನವರು ಕೇಳುತ್ತಿದ್ದಾರೆ, ಅದಕ್ಕೆ ನಾನು ಏನು ಹೇಳಲಿ. ಹಳ್ಳಿಯಲ್ಲಿ ಹೆಣ್ಣು ಮಕ್ಕಳು ಇದ್ದಾರೆ ಅವರು ಇನ್ನೂ ಊದುಕೊಳವೆ ಊದುವುದನ್ನು ನಿಲ್ಲಿಸಿಲ್ಲ. ಇದರ ಬಗ್ಗೆ ಮತ್ತೊಂದು ವಿಚಾರ ಇದೆ, ಅದನ್ನೆಲ್ಲಾ ಹೇಳಲಿಕ್ಕೆ ಅವಕಾಶ ಕೊಟ್ಟರೆ ಹೇಳಬಹುದು ?

ಶ್ರೀ ಎಂ. ಗಂಗಣ್ಣ.—ಸನ್ಮಾನ್ಯ ಅಧ್ಯಕ್ಷರೆ, ಇವತ್ತು ತಾಲ್ಲೋಕು ಮತ್ತು ನನ್ನ ಕ್ಷೇತ್ರದಲ್ಲಿ ಏನು ಈ ಬೋರ್‌ವೆಲ್ ಯಾವ ರೀತಿಯಿಂದ ಇವೆ ಎಂದು ನೋಡುವವರು ಇಲ್ಲ. ಸರಿಯಾದ ವ್ಯವಸ್ಥೆಯಿಲ್ಲ. ಇದರ ಜೊತೆಗೆ ಒಂದು ಮೊಬೈಲ್ ವ್ಯಾನ್ ಇದೆ ಎಂದು ಹೇಳುತ್ತಾರೆ ಅದು ಎಲ್ಲಿದೆ ಎಲ್ಲಿ ಓಡಾಡುತ್ತದೆ ಎನ್ನುವುದೇ ನಮಗೆ ಗೊತ್ತಿಲ್ಲ. ನಮ್ಮಲ್ಲಿ ಬೇಕಾದಷ್ಟು ಅನ್‌ಎಂಪ್ಲಾಯ್‌ಗಳು ಇದ್ದಾರೆ ತಾಲ್ಲೋಕು ಬೋರ್ಡುಗಳು ಏನು ಇವೆ ಅಲ್ಲಿ ಈ ನಿರುದ್ಯೋಗಿಗಳಿಗೆ ಏನಾದರೂ ಒಂದು ಸ್ಕೀಮ್ ಮಾಡಿ ಅವರಿಗೆ ಉದ್ಯೋಗ ಮತ್ತು ಯಾವುದಾದರೂ ಸಹಾಯ ಕೊಟ್ಟು ಅವರ ಜೀವನಕ್ಕೆ ದಾರಿ ಮಾಡಿಕೊಡಬೇಕು. ಇನ್ನು ಡಿಪಿಎಪಿ ಪ್ರೋಗ್ರಾಂ ಏನು ಇದೆ, ಅದು ನನ್ನ ಕ್ಷೇತ್ರದ ರೋಣ, ಬಾದಾಮಿ ಹುನಗುಂದ ಮತ್ತು ಲಿಂಗಸುಗೂರು ಹಾಗೂ ಶೋರಾಪುರ ಎಲ್ಲಾ ಕಡೆಯಲ್ಲಿಯೂ ಇದ್ದರೂ ಒಂದೊಂದು ತಾಲ್ಲೂಕಿಗೂ ಒಂದೊಂದು ರೀತಿಯ ಕೆಲಸಕಾರ್ಯಗಳನ್ನು ಕೊಟ್ಟಿದ್ದಾರೆ, ಜೊತೆಗೆ ಅಧಿಕಾರಿಗಳನ್ನು ಕೂಡ ಅದೇ ರೀತಿ ಕೊಟ್ಟಿದ್ದಾರೆ. ಆದ್ದರಿಂದ ಇವೆಲ್ಲ ಒಂದು ಕಡೆಯೇ ಇರುವುದರಿಂದ ಅಲ್ಲಿಗೆ ಒಬ್ಬ ಅಧಿಕಾರಿಯ ಕೈಕೆಳಗೆ ಕೊಟ್ಟರೆ ಎಲ್ಲರಿಗೂ ಒಂದೇ ರೀತಿಯಾದ ವ್ಯವಸ್ಥೆ ಮಾಡಲಿಕ್ಕೆ ಅನುಕೂಲವಾಗುತ್ತದೆ ಈ ಎಲ್ಲಾ ೬-೭ ತಾಲ್ಲೂಕುಗಳು ಒಂದೇ ಭಾಗದಲ್ಲಿ ಇರುವುದರಿಂದ ಯಾವುದೇ ಯೋಜನೆ ತೆಗೆದುಕೊಂಡರೂ ಸಮನಾಗಿ ಕೆಲಸಕಾರ್ಯಗಳು ನಡೆಯುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಬೀದರ್, ರಾಯಚೂರು ಮತ್ತು ಧಾರವಾಡ ಎಲ್ಲಾ ಜಿಲ್ಲೆಗೂ ಒಬ್ಬ ಸಮನ್ವಯ ಅಧಿಕಾರಿಯನ್ನು ನೇಮಿಸಿದರೆ ಎಲ್ಲಾ ಅಭಿವೃದ್ಧಿ ಕಾರ್ಯಗಳು ಸರಿಯಾದ ರೀತಿಯಲ್ಲಿ ಆಗುವುದಕ್ಕೆ ಸಾಧ್ಯವೆಂದು ಹೇಳುತ್ತೇನೆ. ಇನ್ನು ಒಂದು ಈ ವರದಿಯಲ್ಲಿ ಹೇಳಿದ್ದಾರೆ ಮಾನ್ಯ ಅಧ್ಯಕ್ಷರೆ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಒಂದು ವಿವರಣೆ ಕೇಳಲಿಕ್ಕೆ ಬಯಸುತ್ತೇನೆ. ನಮ್ಮ ಚಿಕ್ಕಮಗಳೂರು ಜಿಲ್ಲೆಗೆ ೨೨ ಲಕ್ಷ ರೂಪಾಯಿ ಸ್ಯಾಂಕ್ಷನ್ ಮಾಡಿ ಅದರಲ್ಲಿ ೧೨ ಲಕ್ಷರೂಪಾಯಿ ಖರ್ಚು ಮಾಡಿದ್ದಾರೆ, ಅದೇ ಬಳ್ಳಾರಿ ಜಿಲ್ಲೆಗೆ ೩೩ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಇದೇ ರೀತಿ ಬೇರೆ ಜಿಲ್ಲೆಗಳಿಗೂ ನಮಗೂ ಹೋಲಿಸಿ ನೋಡಿದರೆ ನಮಗೆ ಬಹಳ ಕಡಿಮೆ ಹಣವನ್ನು ಮಂಜೂರು ಮಾಡಿದ್ದಾರೆ. ಏತಕ್ಕೆ ಈ ತಾರತಮ್ಯವೆಂದು ಕೇಳುತ್ತೇನೆ ನಮಗೆ ಹಣ ಕೊಟ್ಟರೆ ಖರ್ಚು ಮಾಡುವ ಯೋಗ್ಯತೆ ಇಲ್ಲವೆ ? ಇನ್ನು ಎಸ್‌ಎಫ್‌ಡಿಎ ಯಲ್ಲಿಯೂ ಕೂಡಾ ೯ ಜಿಲ್ಲೆಗೆ ೧೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಇದನ್ನು ನೋಡಿದರೆ ನನಗೆ ಏನೂ ತಿಳಿಯುತ್ತಿಲ್ಲ.

SRI M. C. NANAIAH.—Mr. Speaker, Sir, I do not know whether Government has taken hon. Member Sri Ganganna to be an ineffective M-L.A by alloting lesser than other districts. This is a charge the hon. Member is making. The Hon'ble Minister should take note of these things.

ಶ್ರೀ ಎಂ ಗಂಗಣ್ಣ.—ನಮ್ಮ ಡಿಪಿಎಪಿ ಪ್ರೋಗ್ರಾಂನಲ್ಲಿ ನಮ್ಮ ಭಾಗದಲ್ಲಿ ಕೆಲವು ಹಳ್ಳಿಗಳಲ್ಲಿ ನೀರು ನಿಂತು ಜಮೀನಿನಲ್ಲಿರುವ ಕೆಲವು ಬೆಳೆಗಳು ಹಾಳಾಗುತ್ತಿವೆ. ಅವರು ಪಿ.ಎಲ್.ಡಿ ಬ್ಯಾಂಕಿನಿಂದ ಸಾಲ ತೆಗೆದುಕೊಂಡಿದ್ದಾರೆ, ಇದಕ್ಕೆ ಸರ್ಕಾರದಿಂದ ಯಾವುದೇ ರೀತಿ ಸಹಾಯ ಸಿಕ್ಕುತ್ತಿಲ್ಲ, ನೀರು ನಿಂತು ಬೆಳೆ ನಷ್ಟವಾದವರಿಗೆ ಯಾವ ರೀತಿಯ ಪರಿಹಾರ ಕೊಟ್ಟಿಲ್ಲ. ಮಾನ್ಯ ಕಂದಾಯ ಸಚಿವರನ್ನು ಎಷ್ಟೋ ಸಾರಿ ಕೇಳಿದ್ದೇನೆ. ಇನ್ನು ನಮ್ಮ ಭಾಗದಲ್ಲಿರುವ ಅಪ್ಪರ್‌ಕೃಷ್ಣ, ಘಟಪ್ರಭಾ ಮುಂತಾದ ಯೋಜನೆಗಳು ನಡೆಯುತ್ತಿದ್ದರೂ ಅಲ್ಲಿ ಯಾರು ಜಮೀನುಗಳನ್ನು ಕಳೆದುಕೊಂಡಿರುತ್ತಾರೆ ಅವರಿಗೆ ಪರಿಹಾರ ಸರಿಯಾಗಿ ದೊರಕಿಲ್ಲ. ಮತ್ತು ಅವರಿಗೆ ಉದ್ಯೋಗದ ಸೌಲಭ್ಯವೂ ಸಿಕ್ಕಿಲ್ಲ. ಆದ್ದರಿಂದ ಅಲ್ಲಿಯ ಪರಿಸ್ಥಿತಿ ಬಹಳ ಕಷ್ಟವಾಗಿದೆ, ಜೊತೆಗೆ ಅಲ್ಲಿ ಹಿಂದುಳಿದ ಜನರ ಮತ್ತು ಹರಿಜನರ ಕಷ್ಟ ಹೇಳತೀರದು. ಯಾರು ಜಮೀನನ್ನು ಕಳೆದುಕೊಂಡಿದ್ದಾರೆ ಇಲ್ಲಿವರೆಗೆ ಒಂದು ಪೈಸೆ ಕೊಟ್ಟಿಲ್ಲ. ೧೦-೧೨ ವರ್ಷಗಳು ಆಗಿವೆ

ಇದು ಏನು ಎಂದು ನನಗೆ ತಿಳಿಯುತ್ತಿಲ್ಲ. ಇನ್ನು ಪಿಡಬ್ಲ್ಯೂಡಿ ಇಲಾಖೆಯಿಂದಲೂ ಒಂದು ಪೈಸೆ ಕೊಟ್ಟಿಲ್ಲ.

೬-೦೦ ಪಿ. ಎಂ.

ಕೂಲಿಗೆ ಕಾಳು ಏನು ಯೋಜನೆಯನ್ನು ಸರ್ಕಾರದವರು ತಂದಿದ್ದಾರೆ ಇದರಲ್ಲಿ ಒಂದು ಪಂಚಾಯಿತಿಗೆ ಮ್ಯಾಕ್ಸಿಮಮ್ ೧೦೦ ಕ್ವಿಂಟಾಲ್ ಎಂದು ಮಾಡಿದ್ದಾರೆ ಒಂದು ಪಂಚಾಯಿತಿಯಲ್ಲಿ ನಾಲ್ಕೈದು ಹಳ್ಳಿಗಳಿರಬಹುದು ಅಥವಾ ಜಾಸ್ತಿ ಇರಬಹುದು. ಟೌನ್ ಪಂಚಾಯಿತಿ ಮತ್ತು ಗ್ರೂಪ್ ಪಂಚಾಯಿತಿಗಳಲ್ಲಿ ಹಳ್ಳಿಗಳ ಸಂಖ್ಯೆ ಜಾಸ್ತಿಯಿರುತ್ತದೆ. ಈಗಿರುವಾಗ ಮ್ಯಾಕ್ಸಿಮಮ್ ೧೦೦ ಕ್ವಿಂಟಾಲ್ ಯೆಂದು ಗೊತ್ತುಮಾಡಿರತಕ್ಕದ್ದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಕೂಲಿಗೆ ಕಾಳು ಯೋಜನೆ ಯಲ್ಲಿ ನಮ್ಮ ರಾಜ್ಯದಲ್ಲಿ ಅಕ್ಕಿ ಮತ್ತು ಗೋಧಿಯನ್ನು ಸರಬರಾಜು ಮಾಡತಕ್ಕಂಥಹ ಯೋಜನೆ ಏನು ಇದೆ ಅದರಲ್ಲಿ ಕೆಲವು ಗಲಾಟೆಗಳಾಗಿವೆ. ನನ್ನ ಅಭಿಪ್ರಾಯದಲ್ಲಿ ಕೂಲಿಗೆ ಕಾಳು ಯೋಜನೆ ಏನು ಇದೆ ಅದರಲ್ಲಿ ಸಾಕಷ್ಟು ಕೆಲಸ ಆಗಿಲ್ಲ. ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಮಾಡತಕ್ಕ ಕೆಲಸವಾಗಲೀ, ಲೋಕೋಪಯೋಗಿ ಇಲಾಖೆಯವರು ಮಾಡತಕ್ಕ ಕೆಲಸವಾಗಲೀ ಕಾಗದ ಪತ್ರಗಳನ್ನು ಸರಿಯಾಗಿ ಮೇನ್‌ಟೈನ್ ಮಾಡಿಲ್ಲ ಸಾಕಷ್ಟು ಕೆಲಸ ಆಗಿಲ್ಲ. ಕೆಲವು ಕಡೆ ದುರುಪಯೋಗ ಕೂಡ ಆಗಿದೆ. ನನ್ನ ಕ್ಷೇತ್ರದಲ್ಲಿಯೂ ಕೂಡ ಈ ಯೋಜನೆಯಲ್ಲಿ ದುರುಪಯೋಗ ನಡೆದಿದೆ. ಒಂದು ಪಂಚಾಯಿತಿಗೆ ೧೦೦ ಕ್ವಿಂಟಾಲ್ ಧಾನ್ಯವನ್ನು ಏನು ಗೊತ್ತುಮಾಡಿದ್ದಾರೆ ಅದು ಅಷ್ಟು ಸಮರ್ಪಕವಾಗಿ ಕಾಣುತ್ತಿಲ್ಲ. ಒಂದು ಪಂಚಾಯಿತಿಯಲ್ಲಿ ಎಷ್ಟು ಹಳ್ಳಿಗಳಿವೆ ಎಂಬುದನ್ನು ನೋಡಿಕೊಂಡು ಅದರ ಪ್ರಕಾರ ಈ ಕಾಳನ್ನು ಹಂಚುವುದು ಸೂಕ್ತವಾಗಿ ಕಾಣುತ್ತದೆ. ಕೂಲಿಗೆ ಕಾಳು ಯೋಜನೆ ಏನು ಇದೆ ಇದರ ಬಗ್ಗೆ ದೂರು ಬರಲಿ ಬಾರದೆ ಇರಲಿ ಎಲ್ಲೆಲ್ಲಿ ಕೆಲಸ ಆಗಿದೆ ಎಲ್ಲೆಲ್ಲಿ ಕೆಲಸ ಸರಿಯಾಗಿ ಆಗಿಲ್ಲ ಎನ್ನುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ತನಿಖೆಮಾಡಿ ವರದಿಯನ್ನು ಸರ್ಕಾರಕ್ಕೆ ಕಳುಹಿಸುವಂತಹ ಒಂದು ವ್ಯವಸ್ಥೆ ಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ರಾಷ್ಟ್ರೀಯ ನೀರು ಸರಬರಾಜು ಯೋಜನೆಯಲ್ಲಿ ಆಯಾಯ ಪಂಚಾಯಿತಿಗಳಲ್ಲಿ ಗ್ರಾಮಕ್ಕೆ ನೀರು ಸರಬರಾಜು ಮಾಡಲು ಆಯಾಯ ಪಂಚಾಯಿತಿ ಯವರು ೧೦ ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕು ಎನ್ನುವ ಒಂದು ಪದ್ಧತಿ ಇದೆ. ಈ ಪದ್ಧತಿ ಯನ್ನು ತಪ್ಪಿಸಿ ಸರ್ಕಾರದವರೇ ಪೂರ್ತಿ ಹಣವನ್ನು ಕೊಟ್ಟು ಕುಡಿಯುವ ನೀರು ಸರಬರಾಜು ಯೋಜನೆ ಯನ್ನು ಕಾರ್ಯಗತ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಷಯ ವೇನೆಂದರೆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ದೀಪವನ್ನು ಕೊಟ್ಟಿರುವ ಕಡೆ ಬಲ್ಬುಗಳೇನಾದರೂ ಒಡೆದು ಹೋದರೆ ಆ ಬಲ್ಬುಗಳನ್ನು ಹಾಕಲು ಇತರೆ ಸಣ್ಣಪುಟ್ಟ ಖರ್ಚುಗಳಿಗಾಗಿ ಮುನಿಸಿಪಾಲಿಟಿ ಮತ್ತು ತಾಲ್ಲೂಕು ಬೋರ್ಡ್‌ಗಳಿಗೆ ಯಾವ ರೀತಿ ಗ್ರ್ಯಾಂಟ್ ಕೊಡುತ್ತೀರಿ ಅದೇ ರೀತಿ ಸರ್ಕಾರದವರು ಪಂಚಾಯಿತಿಗಳಿಗೂ ಗ್ರ್ಯಾಂಟ್‌ನ್ನು ಕೊಡಬೇಕು, ಇಂತಹ ಅಭಿವೃದ್ಧಿ ಕೆಲಸಗಳನ್ನೆಲ್ಲಾ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ನನ್ನ ತಾಲ್ಲೂಕಾದ ಲಿಂಗಸುಗೂರುನಲ್ಲಿ ಹರಿಜನ-ಗಿರಿಜನ ಅಭಿವೃದ್ಧಿಗೋಸ್ಕರ ಮುನಿಸಿಪಾಲಿಟಿ ಯವರು ಶೇಕಡ ೧೮ರಷ್ಟು ಹಣವನ್ನು ಖರ್ಚುಮಾಡಬೇಕೆಂದು ಸರ್ಕಾರದ ಆಜ್ಞೆ ಇದೆ. ಆಜ್ಞೆಯ ಪ್ರಕಾರ ಹಣವನ್ನು ಖರ್ಚುಮಾಡದೆ, ಅದು ಹಾಗೆಯೇ ಉಳಿದುಕೊಂಡಿದೆ. ಅಲ್ಲಿ ಸುಮಾರು ೩೮ ಸಾವಿರದವರೆಗೂ ಉಳಿದಿದೆ ಅದನ್ನು ಖರ್ಚುಮಾಡುವ ಅವಕಾಶವಿಲ್ಲವೇ? ಅದನ್ನು ಯಾತಕ್ಕೆ ಹರಿಜನ-ಗಿರಿಜನರ ಅಭಿವೃದ್ಧಿಗೆ ಖರ್ಚುಮಾಡಬಾರದು. ನಮ್ಮ ತಾಲ್ಲೂಕಿನಲ್ಲಿ ಜನತಾ ಸ್ಕೀಮ್‌ನಲ್ಲಿ ಮನೆಗಳನ್ನು ಕಟ್ಟಿಸುವ ಯೋಜನೆ ಏನು ಇದೆ ಅದು ಲ್ಯಾಪ್ಸ್ ಆಗುತ್ತಿದೆ. ಕಟ್ಟಿರತಕ್ಕಂಥ ಕೆಲವು ಮನೆಗಳು ಪೂರ್ತಿಯಾಗಿಲ್ಲ. ಜೂನಿಯರ್ ಇಂಜಿನಿಯರ್ ಅಲ್ಲಿಗೆ ಸರಿಯಾಗಿ ಬರುತ್ತಿಲ್ಲಾ. ಆದ್ದರಿಂದ ಮಾನ್ಯ ಸಚಿವರು ಇದರ ಬಗ್ಗೆ ತಮ್ಮ ಗಮನಹರಿಸಿ ನಮ್ಮ ತಾಲ್ಲೂಕಿನಲ್ಲಿ ಜನತಾ ಯೋಜನೆಯ ಮನೆಗಳನ್ನು ಕಾರ್ಯಗತ ಮಾಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತ ನಾಡಲು ಸಮಯ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ್ಯ ಅಧ್ಯಕ್ಷರೇ, ಮಾನ್ಯ ಪಂಚಾಯತ್‌ರಾಜ್ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಮನವರಿಕೆ ಮಾಡಿ ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ಸುಮಾರು ಬೇಡಿಕೆಗಳ ಮೇಲೆ ಮಾತನಾಡಬೇಕೆಂದು ಹೆಸರು ಕೊಟ್ಟಿದ್ದರು ಸಹ ನನಗೆ ಅವಕಾಶ ಸಿಗಲಿಲ್ಲ. ಈಗ ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿರತಕ್ಕವರು ಯುವಕರು ಆದರೂ ಸಹ ನಮ್ಮಂಥಹ ಯುವಕರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲ ಎಂದರೆ ಕಷ್ಟವಾಗುತ್ತದೆ. ಮಾನ್ಯ ಅಧ್ಯಕ್ಷರು ಈ ವಿಚಾರವನ್ನು ಗಮನಿಸಿ ಇನ್ನು ಮುಂದೆ ಯುವಕರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ ಮೊದಲು ಮಾತನಾಡಿದವರಿಗೆ ೧ ಗಂಟೆ, ೪೦ ನಿಮಿಷ ಹೀಗೆಲ್ಲಾ ಕಾಲವನ್ನು ಕೊಟ್ಟು ನಾವು ಮಾತನಾಡುವ ಕಾಲಕ್ಕೆ ೫ ನಿಮಿಷ ಕಳೆದರೆ ಬೆಲ್ಲು ಹೊಡೆಯುತ್ತಾರೆ ಅದು ಆಗಬಾರದು, ನನಗೆ ಹೆಚ್ಚು ಕಾಲಾವಕಾಶವನ್ನು ಕೊಡಬೇಕು. ಮೊಟ್ಟಮೊದಲನೆಯದಾಗಿ ಈ ಒಂದು ಇಲಾಖೆಯಲ್ಲಿ ಇರತಕ್ಕ ವ್ಯವಸ್ಥೆಯನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಈ ಇಲಾಖೆ ಮಹತ್ವಪೂರಿತವಾದ ಇಲಾಖೆ ಯಾತಕ್ಕೆಂದರೆ ಎಲ್ಲಾ ರೀತಿಯಲ್ಲಿಯೂ ಕೂಡ ಗ್ರಾಮೀಣ ಜನತೆಗೆ ಸಹಾಯವಾಗುವಂತಹ ಇಲಾಖೆ. ಈ ಒಂದು ಖಾತೆಗೆ ಡೈರೆಕ್ಟರ್ ಇದ್ದಾರೆಯೋ ? ಯಾರಾದರೂ ಅಧಿಕಾರಿಗಳಿದ್ದಾರೆಯೋ ? ಎಂಬುದು ನಮಗೆ ಕಾಣುವುದಿಲ್ಲ. ಸಚಿವರೊಬ್ಬರು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರೆಂದು ಇರುತ್ತಾರೆ. ಈ ಇಲಾಖೆಗೆ ಸುಮಾರು ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೇಡಿಕೆಯನ್ನು ಇಟ್ಟಿದ್ದಾರೆ. ಈ ಇಲಾಖೆಗೆ ಡೈರೆಕ್ಟರೇಟ್ ಆಗಲೀ ಒಂದು ಪ್ರತ್ಯೇಕವಾದ ಇಲಾಖೆಯಾಗಲೀ ಒಂದು ಸ್ವಾತಂತ್ರ್ಯವಾಗಲೀ ಇಲ್ಲ. ಹೀಗಿರುವಾಗ ಯಾವ ರೀತಿಯಲ್ಲಿ ಇದರ ಆಡಳಿತ ನಡೆಸುವುದಕ್ಕಾಗುತ್ತದೆ. ರೈತರು ಕೈಮುಗಿದು ಕೇಳುವ ಕಾಲವಿತ್ತು. ಈಗ ಕೈಗೆ ಕಟ್ಟಿಗೆ ತೆಗೆದುಕೊಳ್ಳುವ ಕಾಲ ಬಂದಿದೆ ; ಆ ಒಂದು ಸ್ಥಿತಿಗೆ ಬಂದಿದೆ. ಈ ಇಲಾಖೆಯ ಬಗ್ಗೆ ಹಿಂದಿನ ಸರ್ಕಾರವಾಗಲೀ ಈ ಸರ್ಕಾರವಾಗಲೀ ಇಲ್ಲಿಯವರೆಗೆ ಇದರ ಬಗ್ಗೆ ಯೋಚನೆ ಮಾಡಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಏಕೆ ಹೀಗಾಯಿತು ಎಂದು ತಿಳಿಸಬೇಕು. ಈ ಇಲಾಖೆಯಲ್ಲಿ ಪ್ಲಾನ್ ಮಾಡತಕ್ಕವರೊಬ್ಬರು, ಇದನ್ನು ಎಕ್ಸಿಕ್ಯೂಟ್ ಮಾಡತಕ್ಕವರೊಬ್ಬರು ಅಡ್ಮಿನಿಸ್ಟ್ರೇಷನ್ ನಡೆಸತಕ್ಕವರೊಬ್ಬರು ಯಾರಿಗೂ ಇದರ ಮೇಲೆ ಕಂಟ್ರೋಲ್ ಇಲ್ಲ. ಪ್ಲಾನ್ ಪಿ.ಡಬ್ಲ್ಯೂ.ಡಿ. ಯವರಿಗೆ ಬರುತ್ತದೆಯೋ ಅಥವಾ ರೆವಿನ್ಯೂಯವರಿಗೆ ಬರುತ್ತದೆಯೋ ಅರ್ಥವಾಗುವುದಿಲ್ಲ ಆದರೆ ಈ ಇಲಾಖೆಯ ಕೆಲಸಕಾರ್ಯಗಳು ವ್ಯವಸ್ಥಿತವಾಗಿ ಸರಿಯಾಗಿ ಎಫೆಕ್ಟೀವ್ ಆಗಿ ಇಂಪ್ಲಿಮೆಂಟ್ ಆಗುವುದಿಲ್ಲವೆಂದು ನಾನು ಹೇಳುತ್ತೇನೆ. ಇವತ್ತು ಸರ್ಕಾರದವರು ಹಾಕಿ ಕೊಂಡಿರತಕ್ಕಂಥ ಬಹಳ ಒಳ್ಳೆಯ ಕಾರ್ಯಕ್ರಮ ಎಂದರೆ ಜನತಾ ಮನೆಗಳನ್ನು ಕಟ್ಟಿಸತಕ್ಕಂಥದ್ದು, ಈ ಯೋಜನೆಯಲ್ಲಿ ೧ ಲಕ್ಷ ಮನೆಗಳನ್ನು ಕಟ್ಟಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಈಗಾಗಲೇ ೨ ಲಕ್ಷ ಮನೆಗಳನ್ನು ಕಟ್ಟಿ ಆಗಿದೆ, ಆ ಮನೆಗಳಲ್ಲಿ ಅನೇಕ ಮನೆಗಳು ಬಿದ್ದು ಹೋಗಿವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಜನತಾ ಮನೆಗಳನ್ನು ಎಲ್ಲೆಲ್ಲಿ ಕೊಟ್ಟಿದ್ದಾರೆ. ಈ ಮನೆಗಳಿಗೆ ರಿಪೇರಿಗಾಗಿ ದುಡ್ಡನ್ನು ಕೇಳತಕ್ಕಂಥಹ ಪರಿಸ್ಥಿತಿ ಬಂದಿದೆ ಇದಕ್ಕೆ ಕಾರಣಗಳು ಬೇಕಾದಷ್ಟು ಇವೆ. ಈಗ ಒಂದು ಮನೆಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಮನೆ ಕಟ್ಟುವ ಸಾಮಾನುಗಳ ಬೆಲೆಗಳು ಬಹಳ ಜಾಸ್ತಿಯಾಗಿವೆ. ಆದ್ದರಿಂದ ಮನೆಗಳನ್ನು ಸಾಕಷ್ಟು ಭದ್ರವಾಗಿ ಕಟ್ಟುವುದಕ್ಕಾಗುವುದಿಲ್ಲ, ೧ ಲಕ್ಷ ಮನೆಗಳನ್ನು ಕಟ್ಟುವ ಬದಲು ೫೦ ಸಾವಿರ ಮನೆಗಳನ್ನು ಕಟ್ಟುವ ಯೋಜನೆಯನ್ನು ಹಾಕಿಕೊಂಡು ಆ ಮನೆಗಳು ಶಾಶ್ವತವಾಗಿ ಉಳಿಯುವಂತೆ ಸ್ವಲ್ಪ ಭದ್ರವಾಗಿ ಮಳೆಗಾಳಿಗೆ ತಡೆಯುವಂತಹ ವ್ಯವಸ್ಥೆಯನ್ನು ಮಾಡಬೇಕು. ಈಗ ಹೊಸ ಸರ್ಕಾರ ಬಂದ ಮೇಲೆ ಗ್ರಾಮಾಂತರ ಪ್ರದೇಶಗಳ ಜನಗಳು ಹೆಚ್ಚು ಆಸೆಯನ್ನು ಇಟ್ಟುಕೊಂಡಿದ್ದರು. ಆದರೆ ಗ್ರಾಮಾಂತರ ಪ್ರದೇಶಗಳ ಆಡಳಿತಕ್ಕೆ ಈ ಬಡ್ಜೆಟ್‌ನಲ್ಲಿ ಒದಗಿಸಿರತಕ್ಕಂಥ ಹಣ ಕಡಿಮೆ ಇದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳ ಜನಗಳಿಗೆ ರೈತರಿಗೆ ವ್ಯವಸಾಯಕ್ಕೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾದರೂ ಕೂಡ ಇನ್ನು ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲ ಎಂದರೆ ಎಷ್ಟರ ಮಟ್ಟಿಗೆ ರೈತರ ಬಗ್ಗೆ ಹಳ್ಳಿಗಳ ಬಗ್ಗೆ ಎಚ್ಚರಿಕೆ ವಹಿಸಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).— ಮಾನ್ಯ ಅಧ್ಯಕ್ಷರೇ, ಮಾನ್ಯ ಪಂಚಾಯತ್‌ರಾಜ್ ಸಚಿವರು ಈ ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಮನವರಿಕೆ ಮಾಡಿಕೊಡಲು ನಾನು ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ಸುಮಾರು ಬೇಡಿಕೆಗಳ ಮೇಲೆ ಮಾತನಾಡಬೇಕೆಂದು ಹೆಸರು ಕೊಟ್ಟಿದ್ದರೂ ಸಹ ನನಗೆ ಅವಕಾಶ ಸಿಗಲಿಲ್ಲ. ಈಗ ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿರತಕ್ಕವರು ಯುವಕರು ಆದರೂ ಸಹ ನಮ್ಮಂಥ ಯುವಕರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಲಿಲ್ಲ ಎಂದರೆ ಕಷ್ಟವಾಗುತ್ತದೆ ಇದನ್ನು ಮಾನ್ಯ ಅಧ್ಯಕ್ಷರು ಗಮನಿಸಿ ಇನ್ನು ಮುಂದೆ ಯುವಕರಿಗೆ ಹೆಚ್ಚು ಹೆಚ್ಚು ಅವಕಾಶಗಳನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮೊದಲು ಮಾತನಾಡಿದಂಥವರಿಗೆ ೧ ಗಂಟೆ, ೪೦ ನಿಮಿಷ ಹೀಗೆಲ್ಲಾ ಕಾಲವನ್ನು ಕೊಟ್ಟು ನಾವು ಮಾತನಾಡುವ ಕಾಲಕ್ಕೆ ೫ ನಿಮಿಷ ಕಳೆದರೆ ಬೆಲ್ಲು ಹೊಡೆಯುತ್ತಾರೆ ಅದು ಆಗ ಬಾರದು ನನಗೆ ಹೆಚ್ಚು ಕಾಲಾವಕಾಶವನ್ನು ಕೊಡಬೇಕು. ಮೊಟ್ಟಮೊದಲನೆಯದಾಗಿ ಈ ಒಂದು ಇಲಾಖೆಯಲ್ಲಿ ಇರತಕ್ಕ ವ್ಯವಸ್ಥೆಯನ್ನು ನೋಡಿದರೆ ಬಹಳ ದುಃಖವಾಗುತ್ತದೆ. ಈ ಇಲಾಖೆ ಮಹತ್ವಪೂರಿತವಾದ ಇಲಾಖೆ ಯಾತಕ್ಕೆಂದರೆ ಎಲ್ಲಾರೀತಿಯಲ್ಲಿಯೂ ಕೂಡ ಗ್ರಾಮೀಣ ಜನತೆಗೆ ಸಹಾಯವಾಗುವಂತಹ ಇಲಾಖೆ. ಈ ಒಂದು ಖಾತೆಗೆ ಡೈರೆಕ್ಟರು ಇದ್ದಾರೆಯೇ? ಯಾರಾದರೂ ಅಧಿಕಾರಿಗಳಿದ್ದಾರೆಯೇ ? ಎಂಬುದು ನಮಗೆ ಕಾಣುವುದಿಲ್ಲ. ಸಚಿವರೊಬ್ಬರು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರೆಂದು ಇರುತ್ತಾರೆ. ಈ ಇಲಾಖೆಗೆ ಸುಮಾರು ೬೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬೇಡಿಕೆಯನ್ನು ಇಟ್ಟಿದ್ದಾರೆ. ಈ ಇಲಾಖೆಗೆ ಡೈರೆಕ್ಟರೇಟ್ ಆಗಲೇ ಒಂದು ಪ್ರತ್ಯೇಕವಾದ ಇಲಾಖೆಯಾಗಲೀ ಒಂದು ಸ್ವಾತಂತ್ರವಾಗಲೀ ಇಲ್ಲ. ಹೀಗಿರುವಾಗ ಯಾ ರೀತಿಯಲ್ಲಿ ಇದರ ಆಡಳಿತ ನಡೆಸುವುದಕ್ಕಾಗುತ್ತದೆ ? ರೈತರು ಕೈಮುಗಿದು ಕೇಳುವ ಕಾಲವಿತ್ತು. ಈಗ ಕೈಗೆ ಕಟ್ಟಿಗೆ ತೆಗೆದು ಕೊಳ್ಳುವ ಕಾಲ ಬಂದಿದೆ; ಆ ಒಂದು ಸ್ಥಿತಿಗೆ ಬಂದಿದೆ. ಈ ಇಲಾಖೆಯ ಬಗ್ಗೆ ಹಿಂದಿನ ಸರ್ಕಾರವಾಗಲೀ ಈ ಸರ್ಕಾರವಾಗಲೀ ಇಲ್ಲಿಯವರೆಗೆ ಇದರ ಬಗ್ಗೆ ಯೋಚನೆ ಮಾಡಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಏಕೆ ಹೀಗಾಯಿತು ಎಂದು ತಿಳಿಸಬೇಕು. ಈ ಇಲಾಖೆಯಲ್ಲಿ ಪ್ಲಾನ್ ಮಾಡತಕ್ಕವರೊಬ್ಬರು ಇದನ್ನು ಎಕ್ಸಿಕ್ಯೂಟ್ ಮಾಡತಕ್ಕವರೊಬ್ಬರು, ಅಡ್ಮಿನಿಸ್ಟ್ರೇಶನ್ ನಡೆಸತಕ್ಕವರೊಬ್ಬರು ಯಾರಿಗೂ ಇವುಗಳ ಮೇಲೆ ಕಂಟ್ರೋಲ್ ಇಲ್ಲ. ಪ್ಲಾನ್ ಪಿ.ಡಬ್ಲ್ಯೂ. ಡಿ. ಯವರಿಗೆ ಬರುತ್ತದೆಯೋ ಅಥವಾ ರೆವಿನ್ಯೂ ಅವರಿಗೆ ಬರುತ್ತದೆಯೋ ಅರ್ಥವಾಗುವುದಿಲ್ಲ. ಆದರೆ ಈ ಇಲಾಖೆಯ ಕೆಲಸಕಾರ್ಯಗಳು ವ್ಯವಸ್ಥಿತವಾಗಿ ಸರಿಯಾಗಿ ಎಫೆಕ್ಟೀವ್ ಆಗಿ ಇಂಪ್ಲಿಮೆಂಟ್ ಆಗುವುದಿಲ್ಲವೆಂದು ನಾನು ಹೇಳುತ್ತೇನೆ, ಇವತ್ತು ಸರ್ಕಾರದವರು ಹಾಕಿಕೊಂಡಿರತಕ್ಕಂಥದ್ದು ಬಹಳ ಒಳ್ಳೆಯ ಕಾರ್ಯಕ್ರಮ ಎಂದರೆ ಜನತಾ ಮನೆಗಳನ್ನು ಕಟ್ಟಿಸತಕ್ಕಂತಾಥದ್ದು. ಈ ಯೋಜನೆಯಲಿಲ್ಲ ಒಂದು ಲಕ್ಷ ಮನೆಗಳನ್ನು ಕಟ್ಟಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಈಗಾಗಲೇ ೨ ಲಕ್ಷ ಮನೆಗಳನ್ನು ಕಟ್ಟಿ ಆಗಿದೆ. ಆ ಮನೆಗಳಲ್ಲಿ ಅನೇಕ ಮನೆಗಳು ಬಿದ್ದು ಹೋಗಿವೆ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಜನತಾ ಮನೆಗಳನ್ನು ಎಲ್ಲೆಲ್ಲಿ ಕೊಟ್ಟಿದ್ದಾರೋ ಆ ಮನೆಗಳಿಗೆ ರಿಪೇರಿಗಾಗಿ ದುಡ್ಡನ್ನು ಕೇಳತಕ್ಕಂಥ ಪರಿಸ್ಥಿತಿ ಬಂದಿದೆ ಇದಕ್ಕೆ ಕಾರಣಗಳು ಬೇಕಾದಷ್ಟು ಇವೆ. ಈಗ ಒಂದು ಮನೆಗೆ ಎರಡೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಮನೆ ಕಟ್ಟುವ ಸಾಮಾನುಗಳ ಬೆಲೆಗಳು ಬಹಳ ಜಾಸ್ತಿಯಾಗಿವೆ, ಆದ್ದರಿಂದ ಮನೆಗಳನ್ನು ಸಾಕಷ್ಟು ಭದ್ರವಾಗಿ ಕಟ್ಟುವುದಕ್ಕಾಗುವುದಿಲ್ಲ, ಒಂದು ಲಕ್ಷ ಮನೆಗಳನ್ನು ಕಟ್ಟುವ ಬದಲು ೫೦ ಸಾವಿರ ಮನೆಗಳನ್ನು ಕಟ್ಟುವ ಯೋಜನೆಯನ್ನ ಹಾಕಿಕೊಂಡು ಆ ಮನೆಗಳು ಶಾಶ್ವತವಾಗಿ ಉಳಿಯುವಂತೆ ಸ್ವಲ್ಪ ಭದ್ರವಾಗಿ ಮಳೆಗಾಳಿಗೆ ತಡೆಯುವಂತಹ ವ್ಯವಸ್ಥೆಯನ್ನು ಮಾಡಬೇಕು. ಈ ಹೊಸ ಸರ್ಕಾರ ಬಂದಮೇಲೆ ಗ್ರಾಮಾಂತರ ಪ್ರದೇಶಗಳ ಜನಗಳಿಗೆ ಹೆಚ್ಚು ಆಸೆಯನ್ನು ಇಟ್ಟುಕೊಂಡಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳ ಆಡಳಿತಕ್ಕೆ ಈ ಬಡ್ಜೆಟ್ಟಿನಲ್ಲಿ ಒದಗಿಸಿರತಕ್ಕಂಥ ಹಣ ಕಡಿಮೆ ಇದೆ. ಆದರೆ ಗ್ರಾಮಾಂತರ ಪ್ರದೇಶಗಳ ಜನಗಳಿಗೆ ಅಂದರೆ ರೈತರಿಗ ವ್ಯವಸಾಯಕ್ಕೆ ಹೆಚ್ಚು ಹೆಚ್ಚು ಸೌಲಭ್ಯಗಳನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಂದು ಮುಖ್ಯವಾದ ವಿಚಾರವೇನಂದರೆ ನಮಗೆ ಸ್ವಾತಂತ್ರ. ಬಂದು ೩೩ ವರ್ಷಗಳಾದರೂ ಕೂಡ ಇನ್ನೂ ಎಲ್ಲಾ ಹಳ್ಳಿಗಳಿಗೂ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸಿಕೊಟ್ಟಿಲ್ಲ. ಅಂದರೆ ಎಷ್ಟರ ಮಟ್ಟಿಗೆ ರೈತರ ಬಗ್ಗೆ ಹಳ್ಳಿಗಳ ಬಗ್ಗೆ ಎಚ್ಚರಿಕೆ ವಹಿಸಿದ್ದಾರೆಂಬುದನ್ನು ನೋಡಬೇಕಾಗುತ್ತದೆ. ಆದ್ದರಿಂದ ಆದಷ್ಟು ಜಾಗ್ರತೆ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು.

ನೀವು ಕೊಟ್ಟಿರತಕ್ಕಂಥಾ ರೀಪೋರ್ಟಿನಲ್ಲಿ ಎಷ್ಟೋ ಕಡೆಗಳಲ್ಲಿ ಬಾವಿಗಳನ್ನು ತೆಗೆಯುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆ. ನಾನು ಈ ಮಾತನ್ನು ಒಪ್ಪುವುದಿಲ್ಲ. ಈ ಬಗ್ಗೆ ತಮಗೆ ಒಂದು ಉದಹರಣೆ ಹೇಳುತ್ತೇನೆ. ನನ್ನ ತಾಲ್ಲೂಕಿನ ಚಿಟ್ಟದ ಹಳ್ಳಿಯ ಒಂದು ಹಳ್ಳಿಯಲ್ಲಿ ಸುಮಾರು ೫೦-೬೦ ವರ್ಷಗಳಿಂದ ಅಲ್ಲಿಂದ ಬಂದಂಥಾ ಪ್ರತಿಯೊಬ್ಬ ಶಾಸಕರೂ ಕೂಡ, ಪ್ರತಿಯೊಬ್ಬ ಮಂತ್ರಿಗಳೂ ಕೂಡ ಇಲ್ಲಿ ಬಾವಿಯನ್ನು ತೆಗೆಯುವುದಕ್ಕಾಗುವುದಿಲ್ಲ ಎಂದು ಹೇಳಿದರು. ನಾನಾದರೂ ಕೂಡ ಈ ಬಗ್ಗೆ ಸರ್ಕಾರದಲ್ಲಿ ತುಂಬಾ ಹೊಡೆದಾಡಿ ಇದಕ್ಕೆ ಎಷ್ಟು ಹಣ ಖರ್ಚಾದರೂ ಪರವಾಗಿಲ್ಲಾ ಇಲ್ಲಿ ಬಾವಿ ಆಗಲೇಬೇಕು ಎಂದು ಹಟ ಮಾಡಿದ ಮೇಲೆ ಸ್ವಲ್ಪ ದೂರ ತೋಡಿದ ನಂತರ ನೀರು ಬಂತು. ಆದುದರಿಂದ ನಾನು ಈ ವರದಿಯನ್ನು ಒಪ್ಪುವುದಿಲ್ಲ. ನೀರು ಬರುವುದಕ್ಕೆ ಸಾಧ್ಯತೆ ಇದೆ, ಆದರೆ ಅಂತಾ ಜಾಗಗಳಲ್ಲಿ ಸ್ವಲ್ಪ ಹೆಚ್ಚು ಖರ್ಚು ಮಾಡಬೇಕಾಗುತ್ತದೆ ಅಷ್ಟೆ. ಸ್ವಲ್ಪ ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ ಎಂದರೆ ಆಗುವುದಿಲ್ಲ.

ಇನ್ನು ಈಗ ನೀವು ಸಾಕಷ್ಟು ರಿಗ್‌ವೆಲ್ಸ್ ಮತ್ತು ಬೋರ್‌ವೆಲ್‌ಗಳನ್ನು ಹಾಕಿದ್ದೀರಿ. ಆದರೆ ಇದರ ಒಂದು ಕಂಟ್ರೋಲ್ ಪಿ. ಹೆಚ್. ಇ. ಇಲಾಖೆಗೆ ಇದೆ. ಹಣ ಕೊಟ್ಟರೂ ಕೂಡ ತಾಲ್ಲೂಕು ಬೋರ್ಡ್ ಕಂಟ್ರೋಲ್‌ನಲ್ಲಿರತಕ್ಕಂಥಾ ಅಧಿಕಾರಿಗಳನ್ನು ಕಳುಹಿಸಿದರೂ ಕೂಡ ಕೆಲವು ಸಂದರ್ಭಗಳಲ್ಲಿ ತಕ್ಷಣ ರಿಪೇರಿ ಮಾಡಿಸುವುದಕ್ಕಾಗುವುದಿಲ್ಲ, ಏತಕ್ಕೆಂದರೆ ಇದರ ಒಂದು ಸಂಪೂರ್ಣ ಜವಾಬ್ದಾರಿ ಆ ಇಲಾಖೆಗೆ ಬಿಟ್ಟಿರುವುದರಿಂದ ಅವರು ಯಾವಾಗ ಬಂದು ರಿಪೇರಿ ಮಾಡುತ್ತಾರೋ ಅವಾಗ ರಿಪೇರಿ ಮಾಡಿಸಿಕೊಳ್ಳಬೇಕಾಗುತ್ತದೆ. ಆ ಅಧಿಕಾರಿಗಳು ಯಾರು ಎಂದು ಸರಿಯಾಗಿ ತಾಲ್ಲೂಕು ಬೋರ್ಡ್ ಅಧ್ಯಕ್ಷರಿಗೂ ಗೊತ್ತಿರುವುದಿಲ್ಲ, ತಾಲ್ಲೂಕು ಬೋರ್ಡ್ ಅಧಿಕಾರಿಗಳಿಗೂ ಗೊತ್ತಿರುವುದಿಲ್ಲ. ಶಾಸಕರಿಗೂ ಗೊತ್ತಿರುವುದಿಲ್ಲ. ನಮ್ಮ ಅಧಿಕಾರಿಗಳು ಹೋದಾಗ ಅವರು ಸಿಕ್ಕುವುದೂ ಇಲ್ಲ. ಆದುದರಿಂದ, ನಾನು ಈ ಸಂದರ್ಭದಲ್ಲಿ ತಮ್ಮನ್ನು ಕೇಳುವುದೇನೆಂದರೆ ಈ ಅಧಿಕಾರವನ್ನು ತಾಲ್ಲೂಕ್ ಬೋರ್ಡ್‌ಗೇನೆ ವಹಿಸಿದರೆ ಇದರ ಸಮಸ್ಯೆ ಪರಿಹಾರ ಆಗುತ್ತದೆ. ಈಗ ನಿಮ್ಮ ವರದಿಯಲ್ಲಿರುವಂತೆ ಶೇಕಡ ೬೦ಕ್ಕಿಂತಲೂ ಹೆಚ್ಚು ಭಾವಿಗಳು ಕೆಟ್ಟು ಹೋಗಿವೆ. ಸುಮಾರು ೨೧ ಸಾವಿರ ಭಾವಿಗಳು ರಿಪೇರಿಯಾಗಬೇಕಾಗಿದೆ, ಇನ್ನೂ ೪೦ ಸಾವಿರ ಭಾವಿಗಳನ್ನು ತೋಡಬೇಕು ಎಂದು ಹೇಳಿದ್ದೀರಿ. ಈವೊತ್ತಿನ ದಿವಸ ಕೆಲವು ಕಡೆ ರಿಪೇರಿ ಮಾಡಿದರೂ ಕೂಡ ಮತ್ತೆ ನಾಳೆ ಕೆಟ್ಟು ಹೋಗುತ್ತದೆ. ಇದನ್ನು ಯಾವ ರೀತಿ ಉಪಯೋಗ ಮಾಡಬೇಕು ಎನ್ನುವುದು ಜನರಿಗೆ ಗೊತ್ತಿಲ್ಲ. ಯಾರೋ ಮಾಡಿದಂಥಾ ತಪ್ಪನ್ನು ಯಾರ ಮೇಲೋ ಹೊರಿಸಿಬಿಡುತ್ತಾರೆ, ಈ ಬಗ್ಗೆ ನನ್ನ ಒಂದು ಅನುಭವ ಹೇಳಬೇಕಾದರೆ ಒಂದು ಸಾರಿ ರಿಗ್‌ವೆಲ್ಸ್ ಕೆಟ್ಟು ಹೋದರೆ ಮತ್ತೆ ಅದೂ ಪುನಃ ಉಪಯೋಗಕ್ಕೆ ಬರುವುದಿಲ್ಲ. ಆದುದರಿಂದ ಆ ರಿಗ್‌ವೆಲ್ಸ್ ತೆಗೆಸುವುದನ್ನು ಬಿಟ್ಟು ಓಪನ್‌ವೆಲ್ಸ್ ತೆಗೆಸುವ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇದಕ್ಕೆ ಸಂಬಂಧವಾಗಿ ಒಂದು ವಿಷಯ ಹೇಳುತ್ತೇನೆ. ಅದೇನೆಂದರೆ ಈಗ ಇನ್ನೂ ಬಂದಿಲ್ಲ, ಬರುತ್ತದೆ ಹೊಸದಾಗಿ ಮಾರ್ಕ್ ೨ ರಿಗ್ಸ್ ಅನ್ನುವುದು ಬರುತ್ತದೆ. ನಾನು ಚೀಫ್ ಇಂಜಿನಿಯರ್ ಆಫೀಸ್ ಹತ್ತಿರ ಇದ್ದುದನ್ನು ನೋಡಿದೆ ಹೊಸದಾಗಿ ಎಲ್ಲೆಲ್ಲಿ ಕೆಲಸತೆಗೆದುಕೊಳ್ಳುತ್ತಿರೋ ಅಲ್ಲಿ ಈ ಹೊಸ ರಿಗ್ಸ್‌ಗಳನ್ನು ಹಾಕಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಇನ್ನು ನಮಗೆ ಇರತಕ್ಕಂಥಾ ಬಹಳ ಮುಖ್ಯವಾದಂಥಾದ್ದು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥಾ ಕೂಲಿಗಾರರಿಗೆ ಮತ್ತು ರೈತ ಕಾರ್ಮಿಕರಿಗೆ ಸರ್ಕಾರ ಏನಾದರೂ ಒಂದು ವ್ಯವಸ್ಥೆ ಮಾಡಿ ಸಹಾಯ ಮಾಡಬೇಕು. ನನಗೂ ಗೊತ್ತುಂಟು, ಎಲ್ಲರಿಗೂ ಸಹಾಯ ಮಾಡುವುದು ಕಷ್ಟ, ಆದರೇ ಈ ೨೦ ಅಂಶದ ಕಾರ್ಯಕ್ರಮದಲ್ಲಿ ಒಂದು ಅಂಶದ ಕಾರ್ಯಕ್ರಮವನ್ನು ಅಂದರೆ ಗ್ರಾಮಾಂತರ ಪ್ರದೇಶದಲ್ಲಿ ಬಡವರಿಗೆ ನಿವೇಶನ ಕೊಡತಕ್ಕಂಥಾ ಒಂದು ಕಾರ್ಯಕ್ರಮವನ್ನು ಚೆನ್ನಾಗಿ ಮಾಡಿದ್ದೀರಿ. ಬಡವರಿಗೆ ಲಕ್ಷಾಂತರ ಸೈಟುಗಳನ್ನು ಕೊಟ್ಟಿದ್ದೀರಿ. ಇನ್ನೂ ಲಕ್ಷಾಂತರ ಸೈಟುಗಳನ್ನು ಕೊಡಬೇಕಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಬಡವರಿಗೆ ಸೈಟು ಕೊಡಬೇಕಾದರೆ ಸರ್ಕಾರಿ ಜಮೀನಿದ್ದರೆ ಅದನ್ನು ಅಕ್ವೈರ್ ಮಾಡಿಕೊಂಡು ಕೊಡುವುದು ಬಹು ಸುಲಭ. ಆದರೆ ಆ ಸೈಟು ಜಮೀನ್ದಾರರ ಹಿಡುವಳಿಯಾಗಿದ್ದರೆ ಅದನ್ನು ಅಕ್ವೈರ್ ಮಾಡಿಕೊಂಡು ಸೈಟುಗಳನ್ನು ಹಂಚಬೇಕಾದರೆ ೧೦ ವರ್ಷವಾದರೂ ಆಗುವುದಿಲ್ಲ. ಇದು ರಾಜಕೀಯ ದೋಷದಿಂದಲೋ ಅಥವಾ ಅಲ್ಲಿಯ ಒಂದು ಗೊಂದಲದಿಂದಲೋ ಗೊತ್ತಿಲ್ಲ. ಯಾರಾದರೂ ಕೋರ್ಟಿಗೆ ಹೋಗಿ ಸ್ಟೇ ತರುತ್ತಾರೆ, ಅದಕ್ಕೆ ತಯಾರಾಗಿರಬೇಕು. ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲಿರುವ ರೈತರು ಒಂದು ಎಕರೆಯನ್ನೂ ಬಿಟ್ಟುಕೊಡುವುದಕ್ಕೆ ತಯಾರಿಲ್ಲಾ. ಅದಕ್ಕೋಸ್ಕರವಾಗಿ ನಾನು ಹೇಳುತ್ತೇನೆ,

ಈ ಅಕ್ವಿಸೆಷನ್ ರೂಲ್ಸ್ ಬಗ್ಗೆ ಏನಾದರೂ ಒಂದು ಸಿಂಪ್ಲಿಫೈ ಮಾಡಿ. ಹಾಗೆ ಮಾಡದೇ ಹೋದರೆ ಬಡವರಿಗೆ ಸೈಟುಗಳನ್ನು ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ಸಮಗ್ರವಾದ ತಿದ್ದುಪಡಿಯನ್ನು ತರಬೇಕು ಎಂದು ಹೇಳುತ್ತೇನೆ. ಈ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಿ. ಈವೊತ್ತು ಒಬ್ಬನ ಜಮೀನನ್ನು ಅಕ್ವೈರ್ ಮಾಡಿದ ಮೇಲೆ ಅವನು ಕೋರ್ಟಿಗೆ ಹೋಗಿ ಸ್ಟೇ ತಂದರೆ ಆ ಕೇಸ್ ಡಿಸ್‌ಪೋಸಲ್ ಆಗುವುದಕ್ಕೆ ೫–೧೦ ವರ್ಷಗಳಾದರೂ ಸಾಧ್ಯವಿಲ್ಲ. ಇಂತಹ ನಿದರ್ಶನಗಳು ಬೇಕಾದಷ್ಟು ಇವೆ ಆದುದರಿಂದ, ತಾವು ಈ ಒಂದು ಕೆಲಸವನ್ನಾದರೂ ಮಾಡಬೇಕು. ಇಂತಹ ಅಕ್ವಿಸಿಷನ್ ಕೇಸಸ್‌ಗೆ ಪ್ರಿಯಾರಿಟಿ ಕೊಟ್ಟು ಆದಷ್ಟು ಬೇಗ ಡಿಸ್‌ಪೋಸಲ್ ಮಾಡುವ ಹಾಗೆ ಮಾಡಿಸಬೇಕು. ಹಾಗಾದರೆ ಇದರಿಂದ ಸ್ವಲ್ಪಮಟ್ಟಿಗೆ ಏನಾದರೂ ಪ್ರಯೋಜನ ಆದೀತು ಎಂದು ನಾನಾದರೂ ಕೂಡ ಭಾವಿಸಿದ್ದೇನೆ.

ಇನ್ನು ಡಿ.ಪಿ.ಎ.ಪಿ., ಎಸ್.ಎಫ್.ಡಿ.ಎ. ಮತ್ತು ಐ.ಆರ್ ಡಿ. ಈ ಯೋಜನೆಗಳು ಏನು ಇವೆ ಇವು ಕೇಂದ್ರ ಸರ್ಕಾರದಿಂದ ಸಹಾಯ ಪಡೆದಂಥಾ ಯೋಜನೆಗಳಾಗಿವೆ. ಆದರೆ ಇದರಿಂದ ಎಷ್ಟರ ಮಟ್ಟಿಗೆ ಪ್ರಯೋಜನವಾಗಬೇಕೋ ಅಷ್ಟರ ಮಟ್ಟಿಗೆ ಆಗುತ್ತಾ ಇಲ್ಲ. ಈವೊತ್ತು ಕೇಂದ್ರ ಸರ್ಕಾರದಿಂದ ಬರತಕ್ಕಂಥಾ ಹಣವನ್ನು ನೀವು ಸರಿಯಾಗಿ ಖರ್ಚು ಮಾಡುತ್ತಾ ಇಲ್ಲ ಎನ್ನುವುದೇ ನನ್ನ ಒಂದು ವ್ಯಥೆ. ನಾನು ಇದರ ಬಗ್ಗೆ ಹೆಚ್ಚು ವಿವರವಾಗಿ ಹೇಳುವುದಕ್ಕೆ ಸಿದ್ಧನಿಲ್ಲ. ನನ್ನ ಜಿಲ್ಲೆ ಮಟ್ಟಿಗೆ ಹೇಳುವುದಾದರೆ ಹೋದಸಾರಿ ಇದಕ್ಕಾಗಿ ಕೊಟ್ಟಿರತಕ್ಕಂಥಾ ಹಣದಲ್ಲಿ ಲಕ್ಷಾಂತರ ಖರ್ಚಾಗದೇ ಉಳಿದಿದೆ. ಈವೊತ್ತು ನನ್ನ ತಾಲ್ಲೂಕಿನಲ್ಲಿ ೩ ಯೋಜನೆಗಳನ್ನು ಮಾಡಿದ್ದೀರಿ ಅದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ಅಲ್ಲದೆ ನನ್ನ ತಾಲ್ಲೂಕಿಗೆ ಖರ್ಚು ಮಾಡುವುದಕ್ಕೆ ೬೩ ಲಕ್ಷ ರೂಪಾಯಿಗಳನ್ನು ಏನು ಕೊಟ್ಟಿದ್ದೀರೋ ಆ ಬಗ್ಗೆ ಸರಿಯಾದ ಒಂದು ವ್ಯವಸ್ಥೆ ಮಾಡಿಲ್ಲ? ಅದನ್ನು ಮಾಡುವುದಕ್ಕೆ ಎಕ್ಸಿಕ್ಯೂಟೀವ್ ಇಂಜನೀಯರ್ ಕೈಯಲ್ಲೂ ಆಗಲಿಲ್ಲ ? ಈವೊತ್ತು ಎಲ್ಲಾ ಕೆಲಸವನ್ನು ಕೂಡ ಪಿ.ಡಬ್ಲ್ಯೂ.ಡಿ ಯವರೊಬ್ಬರೇ ಮಾಡುವುದಕ್ಕೆ ಸಾಧ್ಯವಿಲ್ಲ. ಈ ಹಣವನ್ನು ಖರ್ಚು ಮಾಡುವ ಬಗ್ಗೆ ಆದಷ್ಟು ಬೇಗನೆ ಸರಿಯಾದ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಇಎಎಸ್ ಸ್ಕೀಮಿನ ವಿಚಾರವಾಗಿ ಈ ಸದನದಲ್ಲಿ ಪ್ರಶ್ನೆ ಹಾಕಿದ್ದೆ. ಈ ಸ್ಕೀಂನಿಂದ ಪ್ರಯೋಜನವಾಗುವುದಕ್ಕೆ ಸಾಧ್ಯವಿಲ್ಲ. ಅದನ್ನು ನಿಲ್ಲಿಸಿ ಬೇರೆ ಇನ್ನೊಂದು ರೂರಲ್ ಪ್ರೋಗ್ರಾಂ ಸ್ಕೀಂ ತಂದಿದ್ದಾರೆ. ಅದರಿಂದಲೂ ಕೂಡ ಪ್ರಯೋಜನವಾಗುವುದಿಲ್ಲ. ಸರ್ಕಾರದ ಹಣ ಪೋಲಾಗುತ್ತದೆ, ಅಷ್ಟೆ. ಯಾವನೋ ತಿನ್ನುವುದಕ್ಕೆ ದಾರಿ ಮಾಡಿಕೊಟ್ಟ ಹಾಗಾಗುತ್ತದೆ ಇದರಿಂದ ಇದಕ್ಕ ದಕ್ಷತೆ ಇರಬೇಕು. ಇಎಎಸ್ ಸ್ಕೀಂನಲ್ಲಿ ಏನು ಒದಗಿಸುತ್ತಿದ್ದೀರೋ ಅದು ದುರುಪಯೋಗವಾಗುತ್ತಾ ಇದೆ. ಅದನ್ನು ಸರಿಯಾಗಿ ಅಭಿವೃದ್ಧಿಪಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಹೊಸದಾಗಿ ಒಂದು ಇ ಎಸ್ ಎಸ್ ಸ್ಕೀಂ ಅಂತ ಮಾಡಿದ್ದೀರಿ. ಆ ಬಗೆ ಅಧಿಕಾರ ಮಟ್ಟದಲ್ಲೂ ಕೂಡ ಅನೇಕ ಲೋಪದೋಷಗಳು ಇವೆ. ಈ ಮನೆಯಲ್ಲಿ ಅದರ ಬಗ್ಗೆ ಕೆಲವರು ಪ್ರಶ್ನೆ ತಂದಾಗ ಕೆಲವರನ್ನು ಸಸ್ಪೆಂಡ್ ಮಾಡಿದ್ದೀರಿ. ಈ ಬಗ್ಗೆ ಹಿಂದೆ ಸಸ್ಪೆಂಡ್ ಆದಂಥಾ ಅಧಿಕಾರಿಗಳೂ ಇದ್ದಾರೆ. ಸಚಿವರಿಗೂ ಗೊತ್ತಿದೆ. ಅವರಿಗೆ ಕಾಗದವನ್ನೂ ಬರೆದಿದ್ದೇನೆ. ಮುಖ್ಯಮಂತ್ರಿಗಳಿಗೂ ಕಾಗದ ಬರೆದಿದ್ದೇನೆ. ಆ ಜನರನ್ನು ೬ ತಿಂಗಳು ೮ ತಿಂಗಳು ಬರೇ ಸಸ್ಪೆನ್‌ಷನ್‌ನಲ್ಲಿ ಇಡುತ್ತಾ ಹೋಗಬೇಡಿ; ಏನಾದರೂ ಒಂದು ಕ್ರಮವನ್ನು ಬೇಗನೆ ತೆಗೆದುಕೊಳ್ಳಿ. ಅವರನ್ನು ಹೀಗೆ ಸಸ್ಪೆನ್‌ಷನ್ ಇಡುತ್ತಾ ಹೋದರೆ ಸರ್ಕಾರದ ಹಣ ವೃಥಾ ವ್ಯಯವಾಗುತ್ತದೆ; ಹಾಗೆ ಮಾಡಬೇಡಿ. ಇನ್ನು ನಾನು ಮೊನ್ನೆ ಲೈಬ್ರರಿಗೆ ಹೋದಾಗ ಅಲ್ಲಿ ಕೂತಿದ್ದಾಗ 'ಎಕನಾಮಿಕ್ ಡೆವಲಪ್‌ಮೆಂಟ್ ಆಫ್ ಕರ್ನಾಟಕ' ಎನ್ನುವ ಒಂದು ಪುಸ್ತಕವನ್ನು ಓದಿದೆ. ಈ ಪುಸ್ತಕವು ೧೬೦೦ ಪುಟಗಳ ಎರಡು ವಾಲ್ಯೂಂಗಳಲ್ಲಿದೆ. ಇದನ್ನು ಇನ್ನೂ ಅನೇಕ ಗ್ರಂಥಕರ್ತರಾದ ಹಾಗೂ ನಿಮ್ಮ ಇಲಾಖೆಯ ಡೈರಕ್ಟರ್‌ರವರೇ ಆದ ಡಾ. ಕೆ. ಪುಟ್ಟಸ್ವಾಮಯ್ಯನವರು ಬರೆದಿದ್ದಾರೆ. ಅದರಲ್ಲಿ ಕರ್ನಾಟಕದ ಆರ್ಥಿಕ ಚರಿತ್ರೆಯನ್ನು ಬಹಳ ಸ್ವಾರಸ್ಯವಾಗಿ ಬರೆದಿದ್ದಾರೆ. ನೊಬೆಲ್ ಪ್ರಶಸ್ತಿ ವಿಜೇತ ಗುನ್ನಾರ್ ಮಿ.ರ್ಡಾಲ್‌ರವರ 'ಏಷ್ಯನ್ ಡ್ರಾಮಾ'ದ ಮಾದರಿಯಲ್ಲಿ ಇರುವ ಈ ಗ್ರಂಥ ನಿಜಕ್ಕೂ ಕರ್ನಾಟಕದ ಹೆಮ್ಮೆಯ ಗ್ರಂಥ, ನಿಜವಾಗಿಯೂ ಅದನ್ನು ಓದಿದಾಗ ನಮಗೆ ಬಹಳ ಸಂತೋಷವಾಯಿತು. ಈ ಗ್ರಂಥದಲ್ಲಿ ಕರ್ನಾಟಕ ಆರ್ಥಿಕ–ಹಿಂದಿನ, ಈಗಿನ ಮತ್ತು ಮುಂದಿನ–ವ್ಯವಸ್ಥೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ್ದಾರಲ್ಲದೆ ಎಲ್ಲೆಲ್ಲೂ ಹೊಗಳಿಕೆ ಬಂದಿದೆ. ನಮ್ಮ

ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರೂ ಈ ಎರಡು ವಾಲ್ಯೂಮಿನ ಅದ್ಭುತ ಸಹಾಸದ ಬಗ್ಗೆ ಮೆಚ್ಚಿ ಪತ್ರ ಬರೆದಿದ್ದಾರೆ. ಭಾರತದಲ್ಲೇ ಮಾದರಿಯಾಗಿದೆ ಎಂದಿದ್ದಾರೆ. ಕರ್ನಾಟಕಕ್ಕೆ ಈ ಗ್ರಂಥದ ಮೂಲಕ ಡಾ. ಕೆ. ಪುಟ್ಟಸಾಮಯ್ಯನವರ ಸೇವೆಯನ್ನು ಎಂದಿಗೂ ಮರೆಯು ವಂತಿಲ್ಲ. ಈ ಗ್ರಂಥವನ್ನು ಓದಿದ ವೇಳೆ ಅವರನ್ನು ನೋಡಲು ಅವರ ಛೇಂಬರ್‌ಗೆ ಹೋದೆ. ಅವರ ಛೇಂಬರ್‌ನಲ್ಲಿ ಬರೇ ಪುಸ್ತಕಗಳ ಲೈಬ್ರರಿ ಇತ್ತು. ಯಾವಾಗ ಹೋದರೂ ಕೂಡ ಅವರು ಬರೆಯುತ್ತಿರು ತ್ತಾರೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಕರ್ನಾಟಕ ಸರ್ಕಾರದ ಮಟ್ಟದಲ್ಲೂ ಕೂಡ ಈ ರೀತಿಯಾಗಿ ಕೆಲಸ ಮಾಡತಕ್ಕಂಥಾ ಅಧಿಕಾರಿಗಳು ಇದ್ದಾರೆ. ಅವರ ಸೇವೆಯನ್ನು ಗಣನೀಯ ವಾದಷ್ಟು ರೀತಿಯಲ್ಲಿ ಬಳಸಿಕೊಳ್ಳುವುದು ಒಳ್ಳೆಯದು ಎಂದು ನಾನಾದರೂ ಕೂಡ ಅಭಿಪ್ರಾಯಪಟ್ಟಿ ದ್ದೇನೆ. ನಾನು ಪೇಪರಿನಲ್ಲಿ ಈ ಗ್ರಂಥದ ಬಗೆಗೆ ಓದಿದ್ದೇನೆ ಮತ್ತು ಅವರು ಬರೆದಂಥಾ ಇತರ ಪುಸ್ತಕ ಗಳನ್ನೂ ಕೂಡ ನೋಡಿದ್ದೇನೆ ಇಂಥಾ ಅಧಿಕಾರಿಗಳೂ ಕೂಡ ನಮ್ಮಲ್ಲಿ ಇದ್ದಾರಲ್ಲಾ ಎಂದು ಬಹಳ ಸಂತೋಷವಾಗಿದೆ. ಈವೊತ್ತು ನಮ್ಮ ಅಧಿಕಾರಿಗಳು ಬರೆದಿರತಕ್ಕಂಥಾ ಪುಸ್ತಕಗಳನ್ನು ಮತ್ತು ಯೋಜನೆ ಗಳನ್ನೂ ನೋಡಿ ಕೇಂದ್ರ ಸರ್ಕಾರದವರು ಹೊಗಳಿ ಪ್ರಶಂಸೆ ಮಾಡುವಷ್ಟು ಮಟ್ಟಿಗೆ ನಮ್ಮ ಅಧಿಕಾರಿ ಗಳು ಇದ್ದಾರೆ. ಆದ್ದರಿಂದ ಅವರ ಸೇವೆಯನ್ನು ನಾವು ಸದುಪಯೋಗಪಡಿಸಿಕೊಳ್ಳುವುದು ಸೂಕ್ತ ಎಂದು ಹೇಳುತ್ತೇನೆ. ಇವರ ಕಾರ್ಯದಕ್ಷತೆ ಮೆಚ್ಚುವಂಥಾದ್ದು.

ಇವರ ಬಗ್ಗೆ ಪತ್ರಿಕೆಗಳಲ್ಲಿ ಬಂದಿರುವ ವಿಚಾರಗಳನ್ನು ಓದಲು ನನಗೆ ಆಸೆ ಇತ್ತು. ಆದರೆ ಕಾಲಾವಕಾಶವಿಲ್ಲ ಇಷ್ಟನ್ನು ಮಾತ್ರ ಹೇಳುತ್ತೇನೆ. ಹಿಂದು ಪತ್ರಿಕೆಯಲ್ಲಿ ಡಾ. ಕೆ. ಪುಟ್ಟಸ್ವಾಮಯ್ಯ ನವರ ಕರ್ನಾಟಕದ ಪುಸ್ತಕದ ಬಗ್ಗೆ 'A romantic profile of the State'' ಎಂದೂ ಮತ್ತು ಅವರ ಬಗ್ಗೆ 'he is pasionately in love with his home State'' ಎಂದೂ ಈ ಡೈರೆಕ್ಟರರ ಬಗ್ಗೆ ಹೊಗಳಿದ್ದಾರೆ. Eastern Economist ಪತ್ರಿಕೆಯಲ್ಲಿ "He has done a commendable job by bringing out these two volumes which are backed with statistical data and critical analysis of practically every aspect of the economy of Karnataka. It is to his everlasting credit that, single handed, he has produced a book which would have brought honour to the economics department of a University or a specialised research institute none, of which however has been thought of bringing out such studies on regional economics. The author has kept before individual scholars and institutions a model which it would be worthwhile for them to follow in view of the growing importance of regions l economic studies and planning. The University Grants Commission would do well to encourage such studies by universities and research institutes in different States. Studies such as this would provide sound basis for the preparation of regional plans in the country''.

ಆದ ಕಾರಣ, ಇವರ ಸೇವೆಯನ್ನು ಸರ್ಕಾರದವರು ಸರಿಯಾದ ರೀತಿಯಲ್ಲೂ ಮತ್ತು, ಉನ್ನತ ಮಟ್ಟದಲ್ಲೂ ಬಳಸಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಯಾವುದೇ ಒಂದು ಯೋಜನೆ ಕೈಕೊಳ್ಳಬೇಕಾದರೂ ಡಿ.ಡಿ.ಸಿ, ಮೂಲಕವೇ ಬರಬೇಕೆಂದು ಸರ್ಕಾರ ಆದೇಶ ಹೊರಡಿಸಿದೆ. ಇದರಿಂದ ಬಹಳ ಕಷ್ಟವಾಗಿದೆ. ತಾಲ್ಲೂಕ್ ಬೋರ್ಡಿನವರು ಒಂದು ವರದಿಯನ್ನು ಸರ್ಕಾರಕ್ಕೆ ಕಳುಹಿಸಬೇಕಾದರೂ ಸಹ ಡಿ.ಡಿ.ಸಿ. ಮೂಲಕವೇ ಕಳುಹಿಸಬೇಕಾಗಿದೆ. ಶಾಸಕರಿಗೆ ಅನುಕೂಲ ಇರಲಿ ಅಥವಾ ಇಲ್ಲದಿರಲಿ ಡಿ.ಡಿ.ಸಿ. ಮೀಟಿಂಗ್ ಇಟ್ಟುಕೊಳ್ಳುತ್ತಾರೆ. ಇದರಿಂದ ಕೆಲವು ಸಲ ಶಾಸಕರು ಅಲ್ಲಿನ ಚರ್ಚೆಯಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಕೆಲವು ಕಡೆಗಳಲ್ಲಿ ರಿಗ್ ವೆಲಗಳನ್ನು ತೆಗೆಸಬೇಕಾಗಿದೆ. ಈ ಬಗ್ಗೆ ನಾವು ನೇರವಾಗಿ ಸರ್ಕಾರಕ್ಕೆ ಬರೆಯುವಂತಿಲ್ಲ. ಡಿ.ಡಿ.ಸಿ. ಮೂಲಕವೇ ಅಪ್ರೂವ್ ಮಾಡಿ ಸರ್ಕಾರಕ್ಕೆ ಪಟ್ಟಿ ಕೊಡಬೇಕಾಗಿದೆ. ಇದರಿಂದ ಕೆಲಸ ಜಾಗ್ರತೆ

ಆಗುವುದಕ್ಕೆ ಅವಕಾಶವಾಗುತ್ತಿಲ್ಲ. ಸಚಿವರು ಪ್ರವಾಸ ಹೋದಾಗ ಹಳ್ಳಿಯ ಜನರು ಭಾವಿ ಬೇಕೆಂದು ಕೇಳಿದಾಗ ಅದು ಡಿ.ಡಿ.ಸಿ. ಮೂಲಕವೇ ಅಪ್ರೂವ್ ಆಗಬೇಕೆಂದರೆ ಕಷ್ಟವಾಗುತ್ತದೆ. ಆದ ಕಾರಣ ಸರ್ಕಾರದವರೇ ನೇರವಾಗಿ ಅಂತಿಮ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಡಿ.ಪಿ ಎ ಪಿ. ನಲ್ಲಿ ಒಳ್ಳೆಯ ಕೆಲಸಗಳು ಆಗುತ್ತಿವೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ತೀತಾ ಪ್ರಾಜೆಕ್ಟಿಗಾಗಿ 2 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಅದೇ ರೀತಿ ಹಾಗಲವಾಡಿ ಹತ್ತಿರ ಗ್ರಾಮಗುಡ್ಡ ಯೋಜನೆಯನ್ನು ಜಾಗ್ರತೆ ತೆಗೆದುಕೊಳ್ಳಬೇಕೆಂದು ಸಾಕಷ್ಟು ಸಲ ಸರ್ಕಾರಕ್ಕೆ ಪತ್ರ ಬರೆದಿದ್ದೇನೆ. ಆದರೆ ಅದನು ಇನ್ನೂ ಬಡ್ಜೆಟಿನಲ್ಲಿ ಸೇರಿಸಿಲ್ಲ. ಸಿರಾ, ತ್ಯಾಮಗೊಂಡ್ಲು ಭಾಗ ಗಳಲ್ಲಿಯೂ ಸಹ ಕೆಲವೊಂದು ಯೋಜನೆಗಳನ್ನು ಕೈಗೊಳ್ಳಬೇಕಾಗಿದೆ. ಇವುಗಳನ್ನು ಸಹ ಡಿ.ಪಿ.ಎ.ಪಿ. ನಲ್ಲಿ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡಿನ ಹತ್ತಿರ ಸಾಕಷ್ಟು ಹಣ ಇಲ್ಲದ ಕಾರಣ ತಾಲ್ಲೂಕ್ ಬೋರ್ಡಿನ ವಶದಲ್ಲಿರುವ ರಸ್ತೆಗಳನ್ನೆಲ್ಲಾ ಲೋಕೋಪಯೋಗಿ ಇಲಾಖೆಗೆ ವಹಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಮುಂದೆ ಈ ರಸ್ತೆಗಳ ಗೋಜಿಗೆ ಈ ತಾಲ್ಲೂಕ್ ಬೋರ್ಡಿನವರು ಹೋಗಬಾರದೆಂದು ಹೇಳುತ್ತೇನೆ.

ಇನ್ನು ಥ್ರಿ ಟೈರ್ ಸಿಸ್ಟಮ್ ಜಾರಿಯಲ್ಲಿರುವ ಕಾರಣದಿಂದ ಪಂಚಾಯಿತಿಗಳಿಗೆ ನೇರವಾಗಿ ಸರ್ಕಾರದಿಂದ ಸೌಲಭ್ಯಗಳು ದೊರೆಯುತ್ತಿಲ್ಲ. ಏನಿದ್ದರೂ ತಾಲ್ಲೂಕ್ ಬೋರ್ಡುಗಳ ಮೂಲಕವೇ ದೊರೆ ಯಬೇಕಾಗಿದೆ. ಇದು ಸರಿಯಲ್ಲ. ಈಗ ತಾಲ್ಲೂಕ್ ಬೋರ್ಡುಗಳಿಗೆ ಕೊಟ್ಟಿರುವ ಈ ಅಧಿಕಾರವನ್ನು ಮೊಟಕು ಮಾಡಿ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು, ಪಂಚಾಯಿತಿಗಳಿಗೂ ಮತ್ತು ಸರ್ಕಾರಕ್ಕೂ ನೇರವಾದಂಥ ಸಂಬಂಧ ಇರುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇದರಿಂದ ರೈತರ ಕಷ್ಟಗಳನ್ನು ತಪ್ಪಿಸಲು ಸಹಾಯವಾಗುತ್ತದೆ. ಈಗ ರೈತರು ಸಕಾಲದಲ್ಲಿ ಸಹಾಯ ಸಿಗದೆ ಸಾಯುತ್ತಿದ್ದಾರೆ. ಆದ ಕಾರಣ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಹೇಳುತ್ತೇನೆ. ನಾನು ಹೇಳಿದ ಎಲ್ಲ ಸಲಹೆಗಳನ್ನೂ ಮಾನ್ಯ ಮಂತ್ರಿಗಳು ಕಾರ್ಯರೂಪದಲ್ಲಿ ತರುತ್ತಾರೆಂದು ನಾನು ಭಾವನೆ ಮಾಡಿ ಕೊಂಡಿದ್ದೇನೆ. ಮಾನ್ಯ ಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಇನ್ನೂ ಯುವಕರಿದ್ದಾರೆ. ಆದಕಾರಣ ಎಲ್ಲಾ ಕೆಲಸಗಳನ್ನು ಜಾಗ್ರತೆ ಮಾಡುತ್ತಾರೆಂದು ನಾನು ಭಾವಿಸಿದ್ದೇನೆ. ಅವರ ಹೆಸರೇ ಬೇಗಾನೆ ರಾಮಯ್ಯ ಎಂದು. ಆದಕಾರಣ ಯೋಜನೆಗಳನ್ನು ಬೇಗಾನೆ ಜಾರಿಗೆ ಕೊಡ ಬೇಕು. ಇಲ್ಲದಿದ್ದರೆ ಅವರು ಬರೀ ರಾಮಯ್ಯ ಆಗುತ್ತಾರೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ (ಬೆಳ್ಳಾವಿ) —ಮಾನ್ಯ ಅಧ್ಯಕ್ಷರೇ, ನಾನು ಈ ಬೇಡಿಕೆಗಳ ಮೇಲೆ ಮಾತನಾಡುವುದಕ್ಕೆ ಮೊದಲು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾನ್ಯ ಮಂತ್ರಿಗಳಿಗೆ ಜ್ಞಾಪಕ ಮಾಡಿಕೊಟ್ಟು ನಂತರ ಈ ಬೇಡಿಕೆಗಳ ಮೇಲೆ ಮಾತನಾಡುತ್ತೇನೆ. ನನ್ನ ಒಂದು ಪ್ರಶ್ನೆಗೆ ಮಾನ್ಯ ಮಂತ್ರಿಗಳು ನನ್ನ ಕ್ಷೇತ್ರದ ಎಲ್ಲ ಹಳ್ಳಿಗಳಲ್ಲಿಯೂ ಕುಡಿಯುವ ನೀರಿನ ಸೌಲಭ್ಯ ಇದೆ ಎಂದು ಹೇಳಿ ದಾಗ ನಾನು ಇಲ್ಲ ಎಂದು ಛಾಲೆಂಜ್ ಮಾಡಿದೆ. ಈ ಬಗ್ಗೆ ವಿವರಗಳನ್ನು ಕೊಡಿ ಎಂದು ಅವರು ಕೇಳಿ ದಾಗ ನಾನು ವಿವರಗಳ ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೇನೆ ಮತ್ತು ಅದರ ಒಂದು ಕಾಪಿಯನ್ನು ಮಾನ್ಯ ಬಸವಲಿಂಗಪ್ಪನವರಿಗೆ ಕೊಟ್ಟಿದ್ದೇನೆ. ಯಾವ ಯಾವ ಹಳ್ಳಿಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಇಲ್ಲವೆಂಬ ಬಗ್ಗೆ ಅಧಿಕಾರಿಗಳು ಒಂದು ವರದಿ ತಯಾರು ಮಾಡಿದ್ದಾರೆ. ಆದರೆ ಅದನ್ನು ಬಹಳ ನಿರ್ಲಕ್ಷ್ಯ ದಿಂದ ತಯಾರು ಮಾಡಿದ್ದಾರೆಂದು ನನ್ನ ಭಾವನೆ ಏಕೆಂದರೆ, ನನ್ನ ಒಂದು ಕ್ಷೇತ್ರದಲ್ಲಿಯೇ ೮೦ ಹಳ್ಳಿ ಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ಇಲ್ಲ. ಆದಕಾರಣ, ಈ ಪಟ್ಟಿಯಲ್ಲಿ ಅನೇಕ ಹಳ್ಳಿಗಳನ್ನು ಬಿಟ್ಟು ಬಿಟ್ಟಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು ೩೦ ವರ್ಷಗಳಾದ ಮೇಲೂ ಸಹ ಈ ಒಂದು ಸಮಸ್ಯೆ ಯನ್ನು ಪರಿಹರಿಸಿಲ್ಲ. ಯಾವ ಒಂದು ಆದರ್ಶಗಳನ್ನು ಇಟ್ಟುಕೊಂಡು ಮಹಾತ್ಮಗಾಂಧೀಜಿಯವರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿ, ಅದನ್ನು ಪಡೆದುಕೊಂಡರೋ, ಆ ಆದರ್ಶಗಳ ಪೈಕಿ ಒಂದನ್ನಾದರೂ ಅನುಸರಿಸುತ್ತಿದ್ದೀರಾ ಎಂದು ನಾನು ತಮ್ಮನ್ನು ಕೇಳುತ್ತೇನೆ ! ಇವೊತ್ತು ಯಾವ ಹಳ್ಳಿಗೆ ಹೋದರೂ ಹಜಾಮರಿಲ್ಲ, ಬಡಗಿಗಳಿಲ್ಲ, ಕುಂಬಾರರಿಲ್ಲ, ಇವರೆಲ್ಲರೂ ತಾಲ್ಲೂಕ್ ಕೇಂದ್ರಗಳಿಗೆ ಇಲ್ಲವೆ ಜಿಲ್ಲಾ ಕೇಂದ್ರಗಳಿಗೆ ಹೋಗಿ ನೆಲೆಸಿದ್ದಾರೆ. ಇನ್ನು ತಾವು ಹಳ್ಳಿಗಳ ಉದ್ಧಾರ ಯಾವ ರೀತಿ ಮಾಡು

ತ್ತೀರಿ? ಈ ಮೊದಲು ಹಳ್ಳಿಗಳೆಲ್ಲಾ ಸಂಮೃದ್ಧಿಯಾಗಿದ್ದವು ಮತ್ತು ಜನರು ಸಂತೋಷದಿಂದ ಇದ್ದರು. ಆದರೆ ಇವೊತ್ತಿನ ದಿವಸ ಹಳ್ಳಿಯ ಜನರು ಕಣ್ಣೀರು ಸುರಿಸುತ್ತಿದ್ದಾರೆ ಕಳೆದ ೩೩ ವರ್ಷಗಳಿಂದಲೂ ತಾವು ಹಳ್ಳಿಗಳ ಉದ್ಧಾರ ಮಾಡುವುದಾಗಿ ಹೇಳಿಕೊಂಡು ಆ ಜನರಿಂದ ವೋಟುಗಳನ್ನು ಪಡೆದುಕೊಳ್ಳುತ್ತಿದ್ದೀರಿ; ಆದರೆ ಯಾವ ಅನುಕೂಲಗಳನ್ನೂ ಸಹ ಮಾಡಿಕೊಟ್ಟಿಲ್ಲ. ಕುಡಿಯುವ ನೀರಿನ ಸೌಲಭ್ಯ ಇಲ್ಲ, ರಸ್ತೆಗಳಿಲ್ಲ. ಶಾಲೆಗಳಿಗೆ ಸರಿಯಾದ ಕಟ್ಟಡಗಳು ಇಲ್ಲದೆ ಗುಡಿಗೋಪುರಗಳಲ್ಲಿ ನಡೆಸಲಾಗುತ್ತಿದೆ. ಹಳ್ಳಿಗಳಿಗೆ ಹೋದರೆ ಜನರು ನಮಗೆ ಸ್ವಾತಂತ್ರ್ಯ ಏತಕ್ಕೆ ಬೇಕಾಗಿತ್ತು ಎಂದು ಜನರು ನಮ್ಮನ್ನೇ ಕೇಳುತ್ತಾರೆ ? ಬ್ರಿಟಿಷರ ಆಡಳಿತವೇ ಚೆನ್ನಾಗಿತ್ತೆಂದು ಹೇಳುತ್ತಾರೆ. ಎರಡು ವರ್ಷಗಳ ಕಾಲ ಜನತಾ ಪಕ್ಷದ ಅಧಿಕಾರವಿದ್ದಾಗ ಬೆಲೆಗಳೆಲ್ಲಾ ಇಳಿದಿದ್ದವು. ಆದರೆ ಈಗ ಎಲ್ಲ ಬೆಲೆಗಳೂ ಹೆಚ್ಚಾಗಿವೆ. ನಾನು ಈಗ ಪಾರ್ಟಿ ವಿಚಾರ ಮಾತನಾಡಲು ಹೋಗುವುದಿಲ್ಲ. ಆದರೆ ಹಳ್ಳಿಗಳಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ನಿಮ್ಮ ಕೈಯಿಂದ ಆಗುವುದಿಲ್ಲವೆಂದು ಕಾಣುತ್ತದೆ. ಒಂದು ವೇಳೆ ನಿಮ್ಮ ಕೈಯಲ್ಲಿ ಮಾಡುವುದಕ್ಕೆ ಸಾಧ್ಯ ವಿದ್ದರೂ ಸಹ ಮನಸ್ಸಿಲ್ಲವೆಂದು ಕಾಣುತ್ತದೆ. ಮಾನ್ಯ ದೇವರಾಜ ಅರಸ್ ಸರ್ಕಾರವಿದ್ದಾಗ, ಕುಡಿ ಯುವ ನೀರಿನ ವ್ಯವಸ್ಥೆಯನ್ನು ನನ್ನ ಕ್ಷೇತ್ರದಲ್ಲಿ ಮಾಡಿಕೊಡಬೇಕೆಂದು ಕೇಳಿಕೊಂಡಾಗ, ಅವರು ೧೨೦ ಬಾವಿಗಳನ್ನು ತೆಗೆಸಿದರು. ಇನ್ನೂ ಕೆಲವು ಕಡೆಗಳಲ್ಲಿ ಬಾವಿಗಳ ಕೆಲಸ ಆಗಬೇಕಾಗಿದೆ ಎಂದು ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾನು ನಾಲ್ಕು ಅರ್ಜಿಗಳನ್ನು ಕೊಟ್ಟೆ. ಆದರೆ ಅವುಗಳಿಗೆ ಉತ್ತರವೇ ಬಂದಿಲ್ಲ. ತಾವು ಎಲ್ಲಿಯವರೆಗೆ ಇದೇ ರೀತಿ ರಾಜ್ಯಭಾರ ಮಾಡುತ್ತೀರಿ ? ಎಲ್ಲಿಯವರೆಗೆ ನೀವು ಜನರಿಗೆ ಈ ರೀತಿ ಮೋಸ ಮಾಡಲು ಸಾಧ್ಯ ನಾಲ್ಕೈದು ಹಳ್ಳಿಗಳಿಗೆ ಮುಖ್ಯವಾಗಿ ರಸ್ತೆಗಳು ಆಗಬೇಕಾಗಿದೆ ಎಂದು ಬರೆದುಕೊಟ್ಟೆ, ಆದರೆ ಇವೊತ್ತಿಗೂ ಆ ಕೆಲಸ ಆಗಿಲ್ಲ. ನಮ್ಮ ಚೇಳೂರು ಹೋಬಳಿಗೆ ಸೇರಿದ ದೊಡ್ಡಹಡಿಗೆ ಹಳ್ಳಿಗೆ ಸರಿಯಾದ ರಸ್ತೆ ಇಲ್ಲ. ಮುಖ್ಯರಸ್ತೆಗೆ ಬರಲು ಈ ಹಳ್ಳಿಯಿಂದ ೩ ಮೈಲಿ ನಡೆದುಕೊಂಡೇ ಬರಬೇಕು. ಸಾಮಾನುಗಳನ್ನು ತಲೆ ಮೇಲೆ ಹೊತ್ತುಕೊಂಡು ಬರಬೇಕು. ಹೆಣ್ಣು ಮಕ್ಕಳು ಕಾಯಿಲೆ ಬಿದ್ದರೆ, ಅವರನ್ನು ಆಸ್ಪತ್ರೆಗೆ ಸಾಗಿಸಲು; ಹೆಣವನ್ನು ಹೊತ್ತುಕೊಂಡು ಹೋದಂತೆ ಹೊತ್ತುಕೊಂಡು ಬರಬೇಕಾಗಿದೆ. ಇಂತಹ ಕಡೆ ರಸ್ತೆ ಕೆಲಸ ಆಗಬೇಕೆಂದು ನಾವು ಕೇಳಿದರೂ ತಾವು ಮಾಡುವುದಿಲ್ಲ. ನೀವು ಅಧಿಕಾರಿಗಳನ್ನು ಸರಿಯಾಗಿ ತರಾಟೆಗೆ ತೆಗೆದುಕೊಳ್ಳುತ್ತಿಲ್ಲ. ಯಾರು ತಮಗೆ ಸರಿಯಾದ ವರದಿ ಕೊಡುವುದಿಲ್ಲವೋ ಅಂತಹ ಅಧಿಕಾರಿಗಳ ಮೇಲೆ ತಾವು ಕ್ರಮ ತೆಗೆದುಕೊಂಡರೆ ಇಲ್ಲವೇ ಅವರನ್ನು ಸದೆಬಡಿದರೆ,, ನೀವು ಹೇಳುವ ಕೆಲಸಗಳನ್ನೆಲ್ಲಾ ಅವರು ಮಾಡುತ್ತಾರೆ. ಈಗ ನನ್ನ ಕ್ಷೇತ್ರದ ಚೇಳೂರು ಹಾಗೂ ಕೊಪ್ಪದಲ್ಲಿ ಮಳೆ ಆಗಿಲ್ಲ ಮಳೆ ಆಗದ ಹಳ್ಳಿಗಳಲ್ಲಿ ರಿಗ್‌ವೆಲ್‌ಗಳನ್ನು ಸಹ ತೆಗೆಸಿಲ್ಲ. ಈ ದಿಸೆಯಲ್ಲಿ ತಾವು ರಾಜ್ಯಭಾರ ಮಾಡುವುದಾದರೆ, ನಿಜವಾಗಿಯೂ ಹಳ್ಳಿಗಳಲ್ಲಿ ಯಾರೂ ಉಳಿಯುವು ದಿಲ್ಲ. ಸ್ಕೂಲ್ ಕಟ್ಟಡ ಕಟ್ಟಿಸುವ ವಿಚಾರದಲ್ಲಿ ಒಂದು ಸರ್ಕ್ಯುಲರ್ ಹೊರಡಿಸಿದ್ದಾರೆ. ಯಾರಿಂದಲೂ ವಂತಿಗೆ ಪಡೆಯಬಾರದು ಮತ್ತು ಊರಿನವರ ಸಹಾಯವಿಲ್ಲದೆ ನಾಲ್ಕೂವರೆ ಸಾವಿರ ರೂಗಳಲ್ಲಿ ಒಂದು ಶಾಲಾ ಕೊಠಡಿಯನ್ನು ಕಟ್ಟಿಸಬೇಕೆಂದು ಅದರಲ್ಲಿ ಹೇಳಿದ್ದಾರೆ. ತಾಲ್ಲೂಕ್ ಬೋರ್ಡಿಗೆ ಇದು ಬಂದಿದೆ. ಇಷ್ಟು ಹಣದಲ್ಲಿ ಈ ಕೆಲಸ ಸಾಧ್ಯವೇ ? ೬ ಸಾವಿರ ರೂ.ಗಳಾದರೂ ಬೇಕಾಗುತ್ತದೆ. ಈಗ ೨೦ ಮತ್ತು ೪೦ ಅಡಿ ವಿಸ್ತೀರ್ಣದಲ್ಲಿ ಒಂದು ಕೊಠಡಿ ಕಟ್ಟಿಸುತ್ತಾರೆ. ಅದರೊಳಗೆ ನಾಲ್ಕು ತರಗತಿಗಳನ್ನು ನಡೆಸು ತ್ತಾರೆ. ಒಂದು ಕಡೆ ಅ ಆ ಹೇಳಿಕೊಟ್ಟರೆ, ಇನ್ನೊಂದು ಕಡೆ ಮಗ್ಗಿ ಹೇಳಿಕೊಡುತ್ತಾರೆ, ಮಗದೊಂದು ಕಡೆ ಆಟ, ಊಟ ಹೇಳಿಕೊಡುತ್ತಾರೆ. ಈ ರೀತಿಯಾದರೆ ಹಳ್ಳಿಯ ಮಕ್ಕಳು ಯಾವ ರೀತಿ ಮುಂದೆ ಬರಲು ಸಾಧ್ಯ ? ಅಲ್ಲಿ ಪ್ರೀ-ಪ್ರೈಮರಿ ಶಾಲೆಗಳೂ ಸಹ ಇಲ್ಲ. ಹಳ್ಳಿಯ ಮಕ್ಕಳು ೬ನೇ ವರ್ಷಕ್ಕೆ ವಿದ್ಯಾಭ್ಯಾಸ ಪ್ರಾರಂಭ ಮಾಡಿದರೆ, ಪಟ್ಟಣದ ಮಕ್ಕಳು ೬ನೇ ವರ್ಷಕ್ಕೆಲ್ಲಾ 'I am a boy' ಎಂದು ಹೇಳುವುದನ್ನು ಕಲಿತಿರುತ್ತಾರೆ.

೬-೩೦ ಪಿ.ಎಂ.

ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡತಕ್ಕವನಿಗೂ ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡತಕ್ಕವನಿಗೂ ಮೆರಿಟ್ ಕ್ಯಾಲ್ಕುಕುಲೇಟ್ ಮಾಡುತ್ತೀರಲ್ಲ, ಯಾವ ರೀತಿ ಮಾಡುತ್ತೀರಿ? ಸರ್ಕಾರದಿಂದ ಲೆಕ್ಕ ತರಿಸಿ ಕೊಳ್ಳಿ. ಕಾಲೇಜು ಸೀಟುಗಳು ಹಳ್ಳಿಯ ರೈತರ ಮಕ್ಕಳಿಗೆ ಎಷ್ಟು ಸಿಕ್ಕಿವೆ ಎಂದು ವಿವರ ತರಿಸಿಕೊಳ್ಳಿ. ನನಗೆ ಬಂದಿರತಕ್ಕ ವದಂತಿ ಪ್ರಕಾರ ೧೯೭೯-೮೦ ರಲ್ಲಿ ಮೆಡಿಕಲ್ ಕಾಲೇಜಿನಲ್ಲಿ ೩ ಜನ ಲಿಂಗಾಯಿತರಿಗೆ ಸೀಟು ಕೊಟ್ಟಿದ್ದೀರಿ. ಹಳ್ಳಿಗಳಲ್ಲಿ ಬಹಳಷ್ಟು ಲಿಂಗಾಯಿತರು ಇರುತ್ತಾರೆ; ಹರಿಜನರು ವಾಸ ಮಾಡು ತ್ತಿದ್ದಾರೆ. ಇವರು ಪಟ್ಟಣದವರ ಜೊತೆಯಲ್ಲಿ ಕಾಂಪಿಟ್ ಮಾಡುವುದಕ್ಕಾಗುತ್ತದೆಯೆ? ಈ ಇಂಬ್ಯಾ

ಟೆಸ್ಟನ್ನು ಹೇಗೆ ತಪ್ಪಿಸುತ್ತೀರಿ? ಇದನ್ನು ತಪ್ಪಿಸದೇ ಹೋದರೆ ಹಳ್ಳಿಯ ಜನರನ್ನು ಹೇಗೆ ಉದ್ಧಾರ ಮಾಡುತ್ತೀರಿ. ಸಂವಿಧಾನದಲ್ಲಿ ಪ್ರತಿಯೊಬ್ಬರಿಗೂ ಸಮಾನವಾಗಿರತಕ್ಕ ಅವಕಾಶಗಳನ್ನು ಕಲ್ಪಿಸಿಕೊಡಬೇಕು ಎಂದು ಇದೆ. ಇದನ್ನು ಮಾಡದೇ ಹೋದರೆ ಇವತ್ತಿನವರೆಗೆ ಮೋಸಮಾಡಿಕೊಂಡು ಬಂದಿದ್ದೀರಿ ಎಂದು ಕರೆದರೆ ತಪ್ಪಾಗಲಾರದು. ಹಳ್ಳಿಯಲ್ಲಿ ವಿದ್ಯಾಭ್ಯಾಸ ಮಾಡುವ ಹುಡುಗನಿಗೆ ಪಟ್ಟಣದಲ್ಲಿ ವಿದ್ಯಾಭ್ಯಾಸ ಮಾಡತಕ್ಕ ವಿದ್ಯಾರ್ಥಿಯನ್ನು ಹೋಲಿಸಿ ಪಟ್ಟಣದ ವಿದ್ಯಾಭ್ಯಾಸ ಮಾಡತಕ್ಕ ಹುಡುಗ ೭೦-೮೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿದ್ದಾನೆ ಎಂದು ಮೆಡಿಕಲ್ ಕಾಲೇಜಿನಲ್ಲಿ, ಇಂಜನಿಯರಿಂಗ್ ಕಾಲೇಜಿನಲ್ಲಿ ಅವನಿಗೆ ಸೀಟ್ ರಿಸರ್ವ್ ಮಾಡುವುದಾದರೆ ಹೇಗೆ. ನನ್ನ ಮನೆ ಬಾಗಿಲಿಗೆ ಹರಿಜನರು ೪೫ ಪರ್ಸೆಂಟ್ ತೆಗೆದುಕೊಂಡಿರುವವರು ಬರುತ್ತಾರೆ, ಅವರಿಗೆ ಪಿ.ಯು.ಸಿ., ಬಿ.ಎ.ಬಿ ಎಸ್ಸಿನಲ್ಲಿ ಸೀಟಿಲ್ಲ. ಉಳುಮೆ ಮಾಡುವವರು ಅವರು. ಪಟ್ಟಣದಲ್ಲಿರುವವರಿಗೆ ಉಳುಮೆ ಬೇಡ. ಬತ್ತದ ಮರ ಎಂದು ತಿಳಿದುಕೊಂಡಿರತಕ್ಕ ವಿದ್ಯಾರ್ಥಿ ಅಗ್ರಿಕಲ್ಚರಲ್ ಕಾಲೇಜಿನಲ್ಲಿ ಸೀಟ್ ತೆಗೆದುಕೊಳ್ಳುತ್ತಾನೆ. ಈತನಿಗೆ ಕೆಲಸ ಸಿಕ್ಕಿದರೆ ಹೊಲದಲ್ಲಿ, ಗದ್ದೆಯಲ್ಲಿ ಬರುತ್ತಾನೋ? ಇಲ್ಲ. ಏನಾದರೂ ನೋಡಬೇಕಾದರೆ ಬೇರೆಯವರಿಗೆ ಹೇಳುತ್ತಾನೆ. ಇಂತಹ ಸ್ಥಿತಿ ಇವತ್ತು ನಿರ್ಮಾಣವಾಗುತ್ತಾ ಇದೆ. ಇದರಲ್ಲಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಕೋಆರ್ಡಿನೇಷನ್ ಮಾಡಬೇಕು, ಎಜುಕೇಷನ್ ಡಿಪಾರ್ಟ್‌ಮೆಂಟ್ ಕೋಆರ್ಡಿನೇಷನ್ ಮಾಡಬೇಕು, ಕೋಆಪರೇಟೀವ್ ಮಂತ್ರಿಗಳು ಕೋಆರ್ಡಿನೇಷನ್ ಮಾಡಬೇಕಾಗುತ್ತದೆ. ಮೇಲಾಗಿ ನಮ್ಮ ಫೈನಾನ್ಸ್ ಮಿನಿಸ್ಟರ್ ಬಹಳ ಕನಿಕರದಿಂದ ಹಣವನ್ನು ಕೊಡಬೇಕು. ಫೈನಾನ್ಸ್ ಮಿನಿಸ್ಟರ್ ಏನು ಮಾಡಿದ್ದಾರೆಂದರೆ, ೧೦೦ ಕ್ಕೆ ೮೦ ರಷ್ಟು ಜನ ಇರತಕ್ಕ ಗ್ರಾಮಾಂತರ ಪ್ರದೇಶಗಳಿಗೆ ೮೦ ಕೋಟಿ ರೂಪಾಯಿಗಳನ್ನು ಕೊಟ್ಟು ಬಹಳ ಚೆನ್ನಾಗಿ ಹಳ್ಳಿಗಳನ್ನು ಉದ್ಧಾರ ಮಾಡಿ ಅಂದರೆ ಹೇಗೆ ಆಗುತ್ತದೆ. ನೀವು ಕೊಟ್ಟಿರುವುದು ಸಾಲದು. ನನಗೆ ಈ ಪೋರ್ಟ್‌ಫೋಲಿಯೋ ಬೇಡ ಎಂದು ಮಾನ್ಯ ಬೇಗಾನೆ ರಾಮಯ್ಯನವರು ನಮ್ಮ ಪರವಾಗಿ ಹೇಳಬೇಕಾಗಿತ್ತು, ಆಗ ನಾನು ಒಪ್ಪುತ್ತಿದ್ದೆ. ನೀವು ಕೊಟ್ಟಷ್ಟೆ ಸಾಕು, ೨೬,೦೦೦ ಹಳ್ಳಿಗಳನ್ನು ಉದ್ಧಾರ ಮಾಡುತ್ತೇನೆ ಅಂದರೆ ಹೇಗೆ ಆಗುತ್ತದೆ. ಹಳ್ಳಿಯ ರೈತನ ಮಗನಿಗೆ ಕೆಲಸ ಸಿಕ್ಕುತ್ತಾ ಇಲ್ಲ, ಕಾಲೇಜಿನಲ್ಲಿ ಸೀಟು ಸಿಕ್ಕುತ್ತಾ ಇಲ್ಲ. ಮೊನ್ನೆ ಧಾರವಾಡದಲ್ಲಿ ಏನಾಗಿದೆ ನೋಡಿ, ಅದು ರೈತನ ಸೇಡು. ಅದಕ್ಕೋಸ್ಕರ ನೀವು ಎಚ್ಚೆತ್ತು ಕೊಂಡು ಅವರಿಗೆ ಸಮಾಧಾನವಾಗುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು Employment Affirmation ಸ್ಕೀಮುಗಳು ಏನಿವೆ ಇದಕ್ಕೆ ನಿಜವಾಗಲೂ ಮಾನ್ಯ ಬಸವಲಿಂಗಪ್ಪನವರು ಕಾರಣಕರ್ತರು. ಇದು ಒಳ್ಳೆಯ ಯೋಜನೆ. ನಾನು ಸಕ್ರಿಯ ಸದಸ್ಯನಾಗಿ ಇದರಲ್ಲಿ ಭಾಗವಹಿಸಿದ್ದೇನೆ. ಒಂದು ಹಳ್ಳಿಯಲ್ಲಿ ಕೆರೆ ಬೇಕಾಗಿದೆ ಎಂದು ಕೇಳಿದಾಗ ೩೮ ಸಾವಿರ ರೂಪಾಯಿನಲ್ಲಿ ಊರಿನವರೆಲ್ಲಾ ಸೇರಿ, ಮಕ್ಕಳೆಲ್ಲಾ ಸೇರಿ ಮಾಡಿದರು. ಪಿ.ಡಬ್ಲ್ಯು.ಡಿ. ಯವರು ೧ ಲಕ್ಷ ೫೦ ಸಾವಿರ ಎಸ್ಟಿಮೇಟ್ ಮಾಡಿಕೊಟ್ಟರು. ಡೆಪ್ಯುಟಿ ಕಮಿಷನರು ಬಂದು ಇನ್ಸ್‌ಪೆಕ್ಟ್ ಮಾಡಿದರು. ಈ ರೀತಿ ಪ್ರತಿಯೊಂದೂ ಏಕೆ ಆಗಬಾರದು. ನಾನು ಪ್ಲಾನಿಂಗ್ ಸೆಕ್ರೆಟರಿಯವರಿಗೆ ಈ ವರ್ಷದ ಮೊದಲ ಭಾಗದಲ್ಲಿ Employment Affirmation ಉತ್ತಮ ಸ್ಕೀಂ ನೀವು ಕಾರ್ಯ ತೆಗೆದುಕೊಳ್ಳುವಾಗ ಕಾಳು ಎಲ್ಲಾ ತೆಗೆದುಕೊಂಡು ಬಂದು ಸ್ಪಾಟ್ ನಲ್ಲಿ ಇಟ್ಟಿರಬೇಕು, ಸೂಪರ್‌ವೈಸ್ ಮಾಡತಕ್ಕ ಜನರನ್ನು ಇಟ್ಟಿರಬೇಕು ಇಲ್ಲದೇಹೋದರೆ ಕ್ರಿಮಿನಲ್ ವೇಸ್ಟ್ ಆಗುತ್ತದೆ, ದುಡ್ಡು ಹೊಡೆಯಲಿಕ್ಕೆ ಅವಕಾಶವಾಗುತ್ತದೆ ಎಂದು ಹೇಳಿದೆ. Without providing men to supervise, and without providing mechinery implement, ಸ್ಟಾರ್ಟ್ ಮಾಡಿ ಅಂದರೆ ಜೇನುತುಪ್ಪ ಕೈಗೆ ಕೊಟ್ಟು ನೆಕ್ಕಬೇಡ ಎಂದು ಹೇಳಿದಂತಾಗುತ್ತದೆ. ಸೆಕ್ರೆಟರಿಯೇಟ್‌ನಲ್ಲಿ ಕೂತುಕೊಂಡು ಪ್ಲಾನಿಂಗ್ ಮಾಡಿ ಕಳಸಿಕೊಟ್ಟರೆ ಫ್ರಾಡ್ ಆಗುವುದಕ್ಕೆ ಅವಕಾಶವಾಗುತ್ತದೆ. ಫುಡ್ ಫಾರ್ ವರ್ಕ್ ಸ್ಕೀಂ ಐಡಿಯಲ್ ಸ್ಕೀಮು. ಆದರೆ ಇಲ್ಲಿ ಪ್ರಭಾವ ಬೀರಿ, ಮಾನ್ಯ ಬೇಗಾನೆ ರಾಮಯ್ಯನವರು ನಮಗೆ ಸಂಬಂಧ, ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧ, ಮಂತ್ರಿಗಳು ಸಂಬಂಧ ಇದೆ ನಾವು ಏನು ಬೇಕಾದರೂ ಮಾಡಬಹುದು, ಲೂಟಿ ಹೊಡೆಯಬಹುದು ಅಂದರೆ ಹಳ್ಳಿಗಳನ್ನು ಉದ್ಧಾರ ಮಾಡಲಿಕ್ಕೆ ಸಾಧ್ಯವೇ? ಇವತ್ತು ಲೂಟಿ ಮನೋಭಾವ ಬೆಳೆಸಿದರು. ಇವತ್ತು ೨೬,೦೦೦ ಹಳ್ಳಿಗಳು ಸ್ಲಂಗಳಾಗಿವೆ.

(ಛೇರ್ಮನ್ ಶ್ರೀ ಎಸ್. ಮುನಿರಾಜು ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಮಾನ್ಯ ಬಸವಲಿಂಗಪ್ಪನವರಿಗೆ ಒಂದು ಮಾತು ಹೇಳಬೇಕಾಗುತ್ತದೆ. ಇವರು ಅಸ್ಪೃಶ್ಯರು ಎಂದು ಹೇಳುತ್ತಾರೆ. ನನ್ನ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಏನಾದರೂ ಮಾಡಿ ಬಗೆ

ಹರಿಸಬೇಕು ಎಂದು ಛಲದಿಂದ ಕೆಲಸ ಮಾಡಿದೆ. ಒಂದು ಊರಿಗೆ ಹೋದೆ., ಅಲ್ಲಿ ೨೫ ಸಾವಿರ ರೂಪಾಯಿಗಳಲ್ಲಿ ಹರಿಜನರಿಗೆ ಒಂದು ಬಾವಿಯನ್ನು ತೋಡಿಸಿದ್ದಾರೆ. ದುರ್ದೈವ, ಅಲ್ಲಿ ಎರಡು ತರಹದ ಹರಿಜನರಿದ್ದಾರೆ. ಇದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಪ್ರಭಾಕರ್‌ರವರು, ಮಾನ್ಯ ವೈ. ರಾಮಕೃಷ್ಣ ಅವರು ಮನಸ್ಸು ಹರಿಸಿಲ್ಲ. ಅಲ್ಲಿ ಎಡಗೈನವರು ಬಾವಿಯಲ್ಲಿ ಮೊದಲು ಗಡಿಗೆ ಬಿಟ್ಟರು. ಬಲಗೈನವರು ಆ ಬಾವಿಗೆ ಹೋಗಲೇ ಇಲ್ಲ. ನಮ್ಮ ಹತ್ತಿರ ಬಂದು ನಮಗೆ ಬಾವಿ ಬೇಕು ಎಂದು ಹೇಳಿದರು. ಯಾಕಪ್ಪ ಬಾವಿ ತೆಗೆಸಿದ್ದೇವಲ್ಲ ಎಂದು ಹೇಳಿದಾಗ, ಅವರು ಎಡಗೈನವರು ನೀರು ಸೇದುತ್ತಿದ್ದಾರೆ, ನಾವು ಬಲಗೈ, ನಾವು ಆ ಬಾವಿಯಲ್ಲಿ ನೀರು ಸೇದುವುದಿಲ್ಲ. ಆದ್ದರಿಂದ ನಮಗೆ ಬಾವಿ ಬೇಕು ಎಂದು ಹೇಳಿದರು. ಅಲ್ಲಿ ಬಲಗೈನವರದು ೯ ಮನೆ ಇದೆ. ಅವರು ೨೫ ವರ್ಷಗಳಿಂದ ಹಳ್ಳದಲ್ಲಿ ನೀರು ತೆಗೆದು ಉಪಯೋಗಿಸುತ್ತಿದ್ದಾರೆ. ಆ ಸಮಾಜದವರ ಬಗ್ಗೆ ನೀವು ಯೋಚನೆ ಮಾಡಿದ್ದೀರಾ?

ಒಬ್ಬ ಸದಸ್ಯರು.—ಸಮಾಜದಲ್ಲಿ ನೀವು ಕಲಿಸಿಕೊಟ್ಟಿದ್ದು ಅದನ್ನು ಅವರು ಅನುಸರಿಸುತ್ತಿದ್ದಾರೆ.

ಶ್ರೀ ಜಿ.ಎಸ್. ಶಿವನಂಜಪ್ಪ.—ಇದು ಸಮಾಜದಲ್ಲಿ ಬಂದಿರತಕ್ಕ ಪಿಡುಗು, ಇದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿದೆ. ಮಾನ್ಯ ಬಸವಲಿಂಗಪ್ಪನವರು, ಮಾನ್ಯ ವೈ. ರಾಮಕೃಷ್ಣ ಅವರು ಮಾನ್ಯ ಪ್ರಭಾಕರ್‌ರವರು ಒಬ್ಬರ ಮನೆಗೆ ಒಬ್ಬರು ಹೋಗಿ, ಊಟಮಾಡಿ, ಒಬ್ಬರಿಗೊಬ್ಬರು ಸಂಬಂಧ ಬೆಳೆಸಿದರೆ ಅದನ್ನೇ ಅವರು ಅನುಸರಿಸುತ್ತಾರೆ. ಓಟ್ ತೆಗೆದುಕೊಳ್ಳುವುದಕ್ಕೋಸ್ಕರ ಬರೀ ಭಾಷಣ ಮಾಡಿ, ಬ್ರಾಹ್ಮಣರು, ಒಕ್ಕಲಿಗರು ಎಂದು ಏಕೆ ಹೇಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ತಾವು ಸ್ವಲ್ಪ ಈಲ್ಡಾಗುತ್ತೀರಾ?

ಶ್ರೀ ಜಿ.ಎಸ್. ಶಿವನಂಜಪ್ಪ.—ನಿಮ್ಮ ಮನೆಯಲ್ಲಿ ಊಟ ತಿಂದಿದ್ದೇನಲ್ಲ ನಾನು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ವಯಸ್ಸಾಗಿದೆ, ನನಗೂ ಆಗಿದೆ. ಮಾನ್ಯ ಗುಂಡೂರಾಯರು ಒಂದು ಮಾತು ಹೇಳಿದರು. ಈ ದೇಶದಲ್ಲಿ, ಸಮಾಜದಲ್ಲಿ ಏರುಪೇರು ಇದೆ, ಹಲವಾರು, ಸಾವಿರಾರು ಜಾತಿಗಳಿವೆ, ಒಬ್ಬರಿಗೊಬ್ಬರು ಹೊಂದದೆ ಇರತಕ್ಕ ಸನ್ನಿವೇಶಗಳು ಬಹಳ ವರ್ಷಗಳಿಂದ ಇದೆ, ಇದನ್ನು ನಿವಾರಣೆ ಮಾಡಬೇಕು ಎಂದು ಹೇಳಿದರು. ನಾನು ಹೇಳುತ್ತೇನೆ, ಎಡಗೈ, ಬಲಗೈ ಅಥವಾ ಮಾದಿಗರು, ಹೊಲೆಯರು ಏನಿದ್ದಾರೆ ಅದು ಒಂದೊಂದು ಜಾತಿ ಈ ಹಿಂದೂ ಸಮಾಜದಲ್ಲಿ ಬೇರೆ ಜಾತಿಗಳಲ್ಲಿ ಕಟ್ಟಲೆಗಳಿದ್ದ ಹಾಗೆ ಇವರೂ ಕಟ್ಟಲೆಗಳನ್ನು ಇಟ್ಟುಕೊಂಡಿದ್ದಾರೆ. ಕಟ್ಟಲೆಗಳಿಂದ, ನ್ಯೂನತೆಗಳಿಂದ ಒಬ್ಬರಿಗೊಬ್ಬರು ಅಪರಿಚಿತರಾಗಿ ಇರತಕ್ಕ ಒಂದು ಪರಿಸ್ಥಿತಿ ಇದೆ, ಇದು ರಾಜ್ಯದ ಮತ್ತು ದೇಶದ ಪರಿಸ್ಥಿತಿ. ಇದನ್ನು ನಿವಾರಣೆ ಮಾಡಬೇಕಾದರೆ, ಪರಿಹಾರ ಮಾಡಬೇಕಾದರೆ, ಬಸವಲಿಂಗಪ್ಪನವರು, ವೈ. ರಾಮಕೃಷ್ಣ ಅವರು, ಪ್ರಭಾಕರ್ ರವರಿಗೆ ಏಕೆ ಎಲ್ಲರ ಸಮಸ್ಯೆಯೂ ಇದೆ. ಮಾನ್ಯ ಸದಸ್ಯರು ನಮ್ಮಿಬ್ಬರ ಹೆಸರನ್ನು ಇಲ್ಲಿ ತಂದಿದ್ದಾರೆ. ಆದುದರಿಂದ ಒಂದು ವಿಷಯವನ್ನು ಮಾನ್ಯ ಸದಸ್ಯರಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಇವತ್ತು ಜನರ ಮನಸ್ಸನ್ನು ಬದಲಾವಣೆ ಮಾಡಬೇಕಾಗಿದ್ದರೆ ನಾವು ಹೇಳಿದಾಕ್ಷಣ ಅವರು ಬದಲಾವಣೆಯಾಗುವುದಿಲ್ಲ. ಅವರ ಮನಸ್ಸನ್ನು ತಿದ್ದುವ ಕರ್ತವ್ಯ ಸಮಾಜ ಸೇವಕರದು ಆಗಿದೆ, ರಾಜಕಾರಣಿಗಳಿದೂ ಕರ್ತವ್ಯವಿದೆ. ಅದನ್ನು ಬಿಟ್ಟು ಅಲ್ಲಿ ಯಾರು ಮಾದಿಗರು, ಹೊಲೆಯರು ಇದ್ದಾರೆ ಅವರ ಮನಸ್ಸನ್ನು ಬದಲಾವಣೆ ಮಾಡಿ ಎಂದು ನಮ್ಮ ಕಡೆ ಕೈ ಬೆರಳು ತೋರಿಸುತ್ತಿದ್ದರು. ಇನ್ನು ನಾಲ್ಕು ಬೆರಳುಗಳು ನಿಮ್ಮ ಕಡೆಗೇ ತೋರಿಸುತ್ತಿರುತ್ತದೆ ಎಂಬುದು ಜ್ಞಾಪಕವಿರಲಿ. ಆದುದರಿಂದ ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿರುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಲಿ. ಆದುದರಿಂದ ನಮ್ಮ ಕಡೆ ಬೆರಳು ಮಾಡಿ ತೋರಿಸಬೇಡಿ. ಇದು ರಾಜ್ಯದ ಕೆಲಸ, ಇಡೀ ರಾಷ್ಟ್ರದ ಕೆಲಸವೂ ಆಗಿದೆ ಒಪ್ಪಿಕೊಳ್ಳುತ್ತೇನೆ ಅದಕ್ಕೆ ನಿಮ್ಮಂತ ಸಮಾಜ ಸೇವಕರೂ ಸಹ ಶ್ರಮಿಸಬೇಕಾಗಿದೆ. ಆದುದರಿಂದ ದಯಮಾಡಿ ನಮ್ಮ ಹೆಸರನ್ನು ಮಾತ್ರ ತೆಗೆದುಕೊಂಡು ಬರಬೇಡಿ ಅದು ಸರಿಯಲ್ಲ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಶ್ರೀ ಬಸವಲಿಂಗಪ್ಪನವರು ಸಮಾಜದ ಮುಖಂಡರು ಅವರು ಮಾತು ಎಂದರೆ ಎಂಥಾ ತಿಳಿಯದೇ ಇರುವ ಜನ ಕೂಡ ಕೇಳಿಯಾರು ಮತ್ತು ಶ್ರೀ ರಾಮಕೃಷ್ಣ ರವರು ಅಧಿಕಾರದಲ್ಲಿದ್ದಾರೆ ಆದುದರಿಂದ ಅವರ ಮಾತನ್ನಾದರೂ ಜನ ಕೇಳಿಯಾರು ಎನ್ನುವ ಭಾವನೆಯಿಂದ ಹೇಳಿದ್ದೇನೆಯೇ ಹೊರತು ಮತ್ತೆ ಯಾವ ದೃಷ್ಟಿಯಿಂದಲೂ ಅಲ್ಲ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರು ಮಾನ್ಯ ಶ್ರೀ ಬಸವಲಿಂಗಪ್ಪನವರಿಗೆ ಮತ್ತು ಶ್ರೀ ರಾಮಕೃಷ್ಣರವರಿಗೆ ಬುದ್ಧಿವಾದ ಹೇಳುತ್ತಿದ್ದಾರೆ, ಆದರೆ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಲಿಂಗಾಯಿತ ಸಮಾಜವಿದೆ, ಇದರಲ್ಲಿ ಎಷ್ಟು ಮಠಗಳಿವೆ ಸ್ವಾಮಿ? ಏತಕ್ಕೆ ಇಷ್ಟೊಂದು ಮಠಗಳು ಬೇಕು ಶ್ರೀ ಶಿವನಂಜಪ್ಪನವರೇ ? ನಿಮ್ಮಲ್ಲಿ ಎಷ್ಟು ಒಳಪಂಗಡಗಳು ಇಲ್ಲ? ನಿಮ್ಮಲ್ಲಿ ಪರಸ್ಪರ ಮದುವೆ ಮಾಡಿಕೊಳ್ಳುತ್ತಿದ್ದೀರಾ ? ಅಥವಾ ಬ್ರಾಹ್ಮಣರು ಬ್ರಾಹ್ಮಣರಲ್ಲಿ ಮದುವೆ ಮಾಡಿಕೊಳ್ಳುತ್ತಿದ್ದಾರೋ? ನೀವು ಕಲಿಸಿಕೊಟ್ಟ ಪಾಠ ನೀವು ತಿದ್ದಿಕೊಳ್ಳದೇ ಬೇರೆಯವರಿಗೆ ಹೇಳುವುದಕ್ಕೆ ಹೊರಟರೆ ಕೇಳುತ್ತಾರೆಯೇ ?

ಶ್ರೀ ಜಿ. ಎಸ್. ಶಿವನಂಜಪ್ಪ —ಸ್ವಾಮಿ, ಈ ರೀತಿಯ ರಾಜಕೀಯ ಭಾಷಣ ಬೇಡ. ತಾವು ಹಳ್ಳಿಗಳಲ್ಲಿ ಹೋಗಿ ಹರಿಜನರ ಮನೆಯಲ್ಲಿ ಕಾಫಿ ಕುಡಿಸಿದ್ದೀರಾ ? ಮಾನ್ಯ ಶ್ರೀ ಬಸವಲಿಂಗಪ್ಪನವರಾಗಲೀ, ಶ್ರೀ ರಾಮಕೃಷ್ಣರವರಾಗಲೀ ಇಲ್ಲವೇ ನಮ್ಮ ಶ್ರೀ ಪ್ರಭಾಕರ್‌ರವರಾಗಲೀ ಯಾರ ಮನಸ್ಸನ್ನೂ ನೋಯಿಸಬೇಕೆಂದು ನಾನು ಈ ಮಾತನ್ನು ಹೇಳುತ್ತಿಲ್ಲ. ಹಳ್ಳಿಗಳಲ್ಲಿ ಭಾವಿಗಳ ಸಮಸ್ಯೆ ಏನಿದೆ ಅದನ್ನು ಬಗೆಹರಿಸಿದ್ದಾರೆಯೇ ? ನನ್ನ ಕ್ಷೇತ್ರದಲ್ಲಿರುವ ಒಂದು ಹಳ್ಳಿಗೆ ಒಂದು ಭಾವಿ ಕೊಟ್ಟಿದ್ದಾರೆ ಅಲ್ಲಿಗೆ ೩ ಜಾತಿಗಳಲ್ಲಿ ಒಂದು ಜಾತಿಯವರು ನೀರನ್ನು ಆ ಬಾವಿಯಿಂದ ತೆಗೆದುಕೊಂಡರೆ ಇನ್ನು ಇತರೇ ಜಾತಿಯವರು ಬೇರೆ ಹಳ್ಳ ಕೊಳ್ಳಗಳಿಂದ ನೀರು ತಂದು ಕುಡಿಯುತ್ತಾರೆ ಆಗಲೀ ಆ ಬಾವಿಯಿಂದ ಉಪಯೋಗಿಸುತ್ತಿಲ್ಲ ನಾವು ಏನಾದರೂ ಮುಂದಿನ ಸಾರಿಗೆ ಓಟ್ ಕೇಳುವುದಕ್ಕೆ ಹೋದರೆ, ಹೋಗ್ರಿ ನಮಗೆ ನೀವು ಬಾವಿನೇ ತೆಗೆಸಿ ಕೊಡಲಿಲ್ಲವೆಂದು ಹೇಳುತ್ತಾರೆ. ನಾನು ಅವರಲ್ಲಿರತಕ್ಕ ಈ ಕೆಟ್ಟ ಪದ್ಧತಿಯನ್ನು ತಪ್ಪಿಸುವುದಕ್ಕೆ ಎಷ್ಟೋ ಪ್ರಯತ್ನ ಪಟ್ಟರೂ ಆಗುತ್ತಿಲ್ಲ. ಇದು ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕದ್ದು ಆಗಿದೆ. ಇದನ್ನು ನಿವಾರಣೆ ಮಾಡಲು ನಾವು ಈಗ ಪ್ರಯತ್ನ ಮಾಡಬೇಕಾಗಿದೆ. ಆದಕ್ಕೆ ನಾನು ಕಳಕಳಿಯಿಂದ ಮನವಿ ಮಾಡಿಕೊಂಡೆ, ಈ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸಲು ನನ್ನ ಕ್ಷೇತ್ರದಲ್ಲಿ ಸೋಶಿಯಲ್ ವೆಲ್‌ಫೇರ್ ಆಫೀಸರ್ ಎಂದು ಇದ್ದಾರೆ. ಆದರೆ ಅವರೇನು ಮಾಡುತ್ತಿದ್ದಾರೆ ? ನನ್ನ ಕ್ಷೇತ್ರದಲ್ಲಿ ಈ ಕುಡಿಯುವ ನೀರಿನ ಸಮಸ್ಯೆ ತುಂಬಾ ಇದ್ದು, ಇದರ ಬಗ್ಗೆ ಅವರು ಏನೂ ಪ್ರಯತ್ನ ಮಾಡುತ್ತಿಲ್ಲ. ಇದರಿಂದ ನಿಮ್ಮ ಡಿಪಾರ್ಟ್‌ಮೆಂಟ್ ಏನಾದರೂ ಅಲ್ಲಿ ಕೆಲಸ ಮಾಡುತ್ತಿದೆಯೇ ? ೩–೪ ಹಳ್ಳಿಗಳಲ್ಲಿರುವ ಹುಡುಗರನ್ನೆಲ್ಲಾ ಒಂದು ಹಾಸ್ಟಲ್‌ನಲ್ಲಿ ಓದುವಾಗ ಅವರಲ್ಲಿ ಜಾತಿ ಭೇದ ಭಾವನೆಯನ್ನು ಹೋಗಲಾಡಿಸುವುದಕ್ಕೆ ಇವರು ಏನಾದರೂ ವ್ಯವಸ್ಥೆ ಮಾಡಿದ್ದಾರೆಯೇ ? ಇವತ್ತು ಏನೋ ಇವರು ಯೂತ್ ಕ್ಲಬ್‌ಗಳೆಂದು ಮಾಡಿಬಿಟ್ಟಿದ್ದಾರೆ, ನಿಜ ಆದರೆ ಅಲ್ಲಿ ಕ್ಲಬ್‌ನಲ್ಲಿ ಕೇವಲ ಜೂಜು ಆಡುತ್ತಿರುತ್ತಾರೆ, ಮತ್ತೆ ನಾಟಕ ಆಡುತ್ತಿರುತ್ತಾರೆ ನಾಟಕ ಆಡಿದರೆ ಪರವಾಗಿಲ್ಲ. ಆದರೆ ಯೂತ್ ಕ್ಲಬ್‌ಗಳಲ್ಲೆಲ್ಲಾ ಬರೀ ಜೂಜು ಆಡುತ್ತಿರುತ್ತಾರೆ. ಆದುದರಿಂದ ಮಾನ್ಯ ಸಚಿವರು ಇದರ ಕಡೆಗೆ ಗಮನ ಹರಿಸಿ ಸಾರ್ವಜನಿಕರಿಗೆ ಅನುಕೂಲವಾಗಿರತಕ್ಕ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಡಿ.ಪಿ.ಎ.ಪಿ, ಐ.ಆರ್.ಡಿ. ಎಸ್.ಎಫ್.ಡಿ.ಎ.ಎ. ಈ ತರಹದ ೩–೪ ಪ್ರೋಗ್ರಾಂಗಳನ್ನೇನು ಹಾಕಿದ್ದೀರಿ, ಇದರಿಂದ ಹಣವನ್ನು ಲೂಟಿ ಹೊಡೆಯುವುದಕ್ಕೋಸ್ಕರವಾಗಿ ತಂದಿಟ್ಟಿದ್ದೀರಿ ಎಂದು ಕಾಣುತ್ತದೆ. ಏತಕ್ಕೆಂದರೆ ಈ ಯೋಜನೆ ಪ್ರಕಾರ ಒಂದು ಹಸುವನ್ನು ಕೊಂಡುಕೊಳ್ಳುತ್ತೇನೆ ಎಂದರೆ ೩ ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಡುತ್ತೀರಿ ಅದರಲ್ಲಿ ೧ ಸಾವಿರ ಸಬ್ಸಿಡಿ ಕೊಡುತ್ತೀರಿ. ಆದರೆ ದುರಾದೃಷ್ಟವೇನೆಂದರೆ, ಇವತ್ತು ಹಳ್ಳಿಗಳಲ್ಲಿ ಏನಾಗಿದೆ ಎಂದರೆ, ಮಾಯಣ್ಣನವರ ಹಸುವನ್ನು ತೋರಿಸಿ ಬಿಟ್ಟು ಶಿವನಂಜಪ್ಪ ಸರ್ಕಾರದಿಂದ ೩ ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಂಡು ಬಿಡುತ್ತಾನೆ. ಅದರಲ್ಲಿ ಅವನಿಗೆ ೧ ಸಾವಿರ ಸಬ್ಸಿಡಿ ಸಿಕ್ಕಿ ಬಿಡುತ್ತದೆ. ಇದರಲ್ಲಿ ಅಧಿಕಾರಿಗಳೂ ಸಹ ಶಾಮೀಲಾಗಿರುವುದರಿಂದ, ಅವನು ಈ ರೀತಿ ವರ್ಷಕ್ಕೆ ೫–೬ ಸಾರಿ ಸಾಲ ತೆಗೆದುಕೊಳ್ಳುತ್ತಾನೆ, ಆದರೆ ಒಂದು ಹಸೂ ಸಹ ಮನೆಗೆ ಬರುವುದಿಲ್ಲ. ಈ ತರಹದ್ದು ನಿಮ್ಮ ಯೋಜನೆಗಳಿಂದ ನಡೆಯುತ್ತಿದೆ ಇದರ ಉಪಯೋಗ ನಿಜವಾಗಿಯೂ ಹಳ್ಳಿಗರಿಗೆ ದೊರೆಯುತ್ತಿಲ್ಲ. ಈ ಸಬ್ಸಿಡಿ ಯೋಜನೆ ಹಳ್ಳಿಗಳಲ್ಲಿ ನೂರಕ್ಕೆ ನೂರು ಪಾಲು ಬಡವನಿಗೆ ಸಿಗುತ್ತಿಲ್ಲ. ಮಧ್ಯವರ್ತಿ ಜನಗಳೇ ತಿನ್ನುತ್ತಿದ್ದಾರೆ. ಆದುದರಿಂದ ತಮ್ಮ ಯೋಜನೆಯಂತೆ ಹಳ್ಳಿಗಾಡಿನಲ್ಲಿರತಕ್ಕ ನೂರಕ್ಕೆ ೭೫–೮೦ ಜನ ಬಡವರೇನಿದ್ದಾರೆ, ಅವರಿಗೆ ಪ್ರತಿಯೊಬ್ಬರಿಗೂ ಸಹ ತಾವು ಒಂದೊಂದು ಫ್ಯಾಮಿಲಿಗೆ ಒಂದೊಂದು ಹಸುವನ್ನು ಕೊಡಿಸಿ ಕೊಡಿ ಸಾಕು, ಅವರಿಗೆ ತಾವು ಜಮೀನು ಕೊಡುವುದು ಏನೂ ಬೇಡ. ಹರಿಜನ

ರಿಗೂ ಅಷ್ಟೇ ಅವರಿಗೆ ತಾವು ಜಮೀನು ಕೊಡದಿದ್ದರೂ ಪರವಾಗಿಲ್ಲ ಎಂದು ರೆಕಮೆಂಡ್ ಮಾಡುತ್ತೇನೆ ಆ ಕುಟುಂಬದವರಿಗೆಲ್ಲಾ ಒಂದೊಂದು ಹಸುವನ್ನು ತೆಗೆದುಕೊಟ್ಟರೆ ಅದರಿಂದ ಅವನು ವಾರಕ್ಕೆ ೭೦. ೮೦ ರೂಪಾಯಿಗಳನ್ನು ಸಂಪಾದನೆ ಮಾಡಿಕೊಳ್ಳುತ್ತಾನೆ. ಅವನು ಶಿವನಂಜಪ್ಪನವರಿಗಾಗಲೀ ಮತ್ತೊಬ್ಬರಿಗಾಗಲೀ ಆಗ ಸಲಾಮು ಹೊಡೆಯಬೇಕಾದ್ದು ಇರುವುದಿಲ್ಲ. ಆಗ ಅವನು ಸ್ವತಂತ್ರ್ಯನಾಗಿ, ಜೀವನ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಈ ಮಧ್ಯದಲ್ಲಿರುವ ಮಧ್ಯವರ್ತಿಗಳು ಏನಿದ್ದಾರೆ ಅವರು ಲಕ್ಷಾಂತರ ರೂಪಾಯಿಗಳನ್ನು ಹೊಡೆಯುವುದಕ್ಕೆ ಅನುಕೂಲವಾಗುತ್ತದೆ. ನಾವು ಇದರ ಬಗ್ಗೆ ಬ್ಯಾಂಕ್‌ನವರಿಗೆ ಎಷ್ಟೇ ಪತ್ರ ಬರೆದರೂ ಉತ್ತರ ಸಹ ಬರುವುದಿಲ್ಲ. ಆದುದರಿಂದ ತಾವು ಇದರ ಕಡೆಗೆ ಹೆಚ್ಚಿನ ಲಕ್ಷ್ಯ ಕೊಟ್ಟು ಇದರಲ್ಲಿರುವ ಲೋಪದೋಷವನ್ನು ಸರಿಪಡಿಸಬೇಕೆಂದು ಹೇಳುತ್ತಾ, ಹಳ್ಳಿಗರಿಗೆ ನ್ಯೂಟ್ರೀಷನ್ ಪ್ರೋಗ್ರಾಂ ಎಂದು ಹಾಕಿಕೊಂಡಿದ್ದೀರಿ. ಅದರಲ್ಲಿ ಸಹ ಲಕ್ಷಾಂತರ ರೂಪಾಯಿಗಳು ದುರುಪಯೋಗವಾಗುತ್ತಿದೆ. ಹಳ್ಳಿಗಳಲ್ಲಿ ಪೌಲ್ಟ್ರಿ ಫಾರಂ ಎಂದು ಮಾಡಿದರೂ ಸಹ ಅವು ಎಲ್ಲವೂ ಬೆಂಗಳೂರಿಗೆ ಬರುತ್ತಿದೆ. ಇದರಿಂದಾಗಿ ಪ್ರತಿಯೊಂದು ಯೋಜನೆಗಳಿಂದಲೂ ಸಹ ಹಳ್ಳಿಗಾಡಿನಲ್ಲಿರತಕ್ಕ ರೈತರೇನಿದ್ದಾರೆ ಅವರಿಗೆ ತಲಪುತ್ತಿಲ್ಲ. ಆದುದರಿಂದ ಇದರ ಬಗ್ಗೆ ಮಾನ್ಯ ಸಚಿವರು ಗಮನ ನೀಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ.ಎಸ್. ಕಾಳಮರಿಗೌಡ (ಪಿರಿಯಾಪಟ್ಟಣ).—ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿ ಹಾಗೂ ಪಂಚಾಯ್ತಿರಾಜ್ ಸಚಿವರು ತಂದಿರತಕ್ಕ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ ಸ್ವಾಮಿ, ಈ ಒಂದು ಖಾತೆಯನ್ನು ನಮ್ಮ ಶ್ರೀ ಬೇಗಾನೆ ರಾಮಯ್ಯ ನವರಿಗೆ ಕೊಟ್ಟಿರತಕ್ಕದ್ದು ನಿಜವಾಗಿಯೂ ಮೆಚ್ಚತಕ್ಕ ವಿಷಯವಾಗಿದೆ. ಏತಕ್ಕೆಂದರೆ ಅವರು ಯುವಕರು ಮತ್ತು ತರುಣರು ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬಂದಿರತಕ್ಕ ಒಬ್ಬ ವ್ಯಕ್ತಿಯಾಗಿದ್ದಾರೆ. ಅವರ ಅವಧಿಯಲ್ಲಿ ಅವರು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಕುಂದುಕೊರತೆಗಳನ್ನು ನಿವಾರಿಸುತ್ತಾರೆಂದು ತಿಳಿದು ಕೆಲವು ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುತ್ತಿದ್ದೇನೆ.

ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಪಂಚಾಯಿತಿಗಳ ಉತ್ಪತ್ತಿ ಏನು ಎಂಬುದನ್ನು ನಾನು ಪ್ರಶ್ನೆ ಮಾಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಕೇವಲ ಒಂದು ಸಾವಿರ ರೂಪಾಯಿ ಉತ್ಪತ್ತಿ ಇರುವ, ೨ ಸಾವಿರ ರೂಪಾಯಿ ಉತ್ಪತ್ತಿ ಇರುವ, ೫ ಸಾವಿರ ರೂಪಾಯಿ ಉತ್ಪತ್ತಿ ಇರುವ ಪಂಚಾಯಿತಿಗಳು ಇವೆ. ಕೇವಲ ಒಂದು ಸಾವಿರ ರೂಪಾಯಿ ಉತ್ಪತ್ತಿಯಲ್ಲಿ ತನ್ನ ಸಿಬ್ಬಂದಿ ವರ್ಗಕ್ಕೆ ಸಂಬಳ, ವಿದ್ಯುಚ್ಛಕ್ತಿ ದರವನ್ನು ಕಟ್ಟಬೇಕಾಗುತ್ತದೆ, ಜೊತೆಗೆ ಅನೇಕ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಕೇವಲ ಒಂದು ಸಾವಿರ ರೂಪಾಯಿ ವರಮಾನ ಯಾವ ಕೆಲಸವನ್ನು ಮಾಡುವುದಕ್ಕೆ ಸಾಕಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಹಳ್ಳಿಗಳ ಕಡೆಯ ರಸ್ತೆಗಳನ್ನು ನೋಡಿದರೆ ಬಹುಪಾಲು ಕೆಟ್ಟಿರುತ್ತವೆ. ಒಂದು ಗ್ರಾಮದ ಅಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ೪ ಅಂಶಗಳು ಅಗತ್ಯ. ಗ್ರಾಮದ ಸುತ್ತ ಮುತ್ತ ರಸ್ತೆಗಳು ಚೆನ್ನಾಗಿರಬೇಕು, ಕುಡಿಯುವ ನೀರಿನ ವ್ಯವಸ್ಥೆ ಇರಬೇಕು, ವಿದ್ಯುಚ್ಛಕ್ತಿಯ ವ್ಯವಸ್ಥೆ ಇರಬೇಕು ಹಾಗೂ ಚರಂಡಿಗಳ ವ್ಯವಸ್ಥೆ ಕೂಡ ಇರಬೇಕಾಗುತ್ತದೆ. ಇವು ಒಂದು ಗ್ರಾಮಕ್ಕೆ ಅವಶ್ಯಕವಾಗಿ ಇರಬೇಕಾದ ೪ ಅಂಗಗಳು. ಒಂದು ಸಾವಿರ ರೂಪಾಯಿ ಉತ್ಪತ್ತಿಯಲ್ಲಿ ಇಷ್ಟೆಲ್ಲ ಕಾರ್ಯಕ್ರಮಗಳನ್ನು ಮಾಡಬೇಕೆಂದರೆ ಪಂಚಾಯಿತಿಗಳಿಗೆ ಬಹಳ ಕಷ್ಟವಾಗುತ್ತದೆ. ಪಂಚಾಯಿತಿಗಳಿಗೆ ತನ್ನ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಅನೇಕ ಅವಕಾಶಗಳು ಇವೆ. ಆದರೆ ಅವುಗಳನ್ನು ಸರಿಯಾಗಿ ಕಾರ್ಯ ರೂಪಕ್ಕೆ ತರುತ್ತಿಲ್ಲ. ಇವತ್ತಿನ ದಿವಸ, ಪಂಚಾಯಿತಿಗಳಿಗೆ ಒಂದೆರಡು ರೂಪಾಯಿ ಮನೆಗಂದಾಯ ಹಾಕತಕ್ಕ ಅವಕಾಶ ಇದೆ. ಆ ಒಂದು ಅವಕಾಶದಲ್ಲಿ ಎಲ್ಲ ಕಾರ್ಯಕ್ರಮಗಳು ಏನಿವೆ ಅಂದರೆ ರಸ್ತೆ ಮಾಡತಕ್ಕದ್ದು, ಚರಂಡಿ ಮಾಡತಕ್ಕದ್ದು, ವಿದ್ಯುಚ್ಛಕ್ತಿ ಒದಗಿಸತಕ್ಕದ್ದು, ಬಾವಿಗಳನ್ನು ತೋಡಿಸತಕ್ಕದ್ದು—ಈ ಎಲ್ಲ ಅವಶ್ಯಕವಾದ ಕೆಲಸಗಳನ್ನು ಮಾಡುವುದಕ್ಕೆ ಪಂಚಾಯಿತಿಗಳಿಗೆ ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ಕಾರ ಇದಕ್ಕೆ ಸಾಕಷ್ಟು ಹಣವನ್ನು ಕೊಡಬೇಕಾಗುತ್ತದೆ; ಜೊತೆಗೆ ಸಿಬ್ಬಂದಿ ವರ್ಗವನ್ನು ಕೊಡಬೇಕಾಗುತ್ತದೆ. ಪಂಚಾಯಿತಿಯ ಕಾರ್ಯದರ್ಶಿಗೆ, ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರತಕ್ಕ ರೈಸ್ ಮಿಲ್ಲಿಗೆ ೫೦ ರೂಪಾಯಿ ಲೈಸೆನ್ಸ್ ಶುಲ್ಕವನ್ನು ವಿಧಿಸುವುದಕ್ಕೆ ಅವಕಾಶ ಇರುತ್ತದೆ. ನೂರಿನ್ನೂರು ರೂಪಾಯಿ ಶುಲ್ಕವನ್ನು ವಿಧಿಸತಕ್ಕ ಅಧಿಕಾರ ಪಂಚಾಯಿತಿಯ ಅಧ್ಯಕ್ಷನಿಗೆ ಕೂಡ ಇರುವುದಿಲ್ಲ. ಒಂದು ರೈಸ್ ಮಿಲ್ಲಿಗೆ ೫೦ ರೂಪಾಯಿ ಲೈಸೆನ್ಸ್ ಫೀ ಅನ್ನು ವಿಧಿಸಿ ವಸೂಲ್ಮಾಡಿದರೆ ಏನು ಕಾರ್ಯವನ್ನು ಮಾಡು

ವುದಕ್ಕೆ ಸಾಧ್ಯವಾಗುತ್ತದೆ ? ಅದಕ್ಕೆ ನಾನು ಒಂದು ಸಲಹೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಗಳು ಇವೆ; ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ, ನಮ್ಮಲ್ಲಿ ಹೊಗೆಸೊಪ್ಪಿನ ವ್ಯಾಪಾರಸ್ಥರು ಬರುತ್ತಾರೆ. ಇವತ್ತಿನ ದಿವಸ ಕೋಟ್ಯಾಂತರ ರೂಪಾಯಿಗಳ ಹೊಗೆಸೊಪ್ಪು ಹೊರಗಡೆ ಹೋಗುತ್ತಿದೆ. ಇದರ ಮೇಲೆ ಕೂಡ ತೆರಿಗೆಯನ್ನು ವಿಧಿಸಲಾಗುತ್ತಿದೆ. ಜೊತೆಗೆ ಎಕ್ಸೈಜ್‌ನಿಂದ ಪ್ರತಿಯೊಂದು ತಾಲ್ಲೂಕುಗಳಲ್ಲಿ ಲಕ್ಷಾಂತರ ರೂಪಾಯಿ ಆದಾಯ ಬರುತ್ತದೆ. ಹೀಗೆ ರಗ್ಯುಲೇಟೆಡ್ ಮಾರ್ಕೆಟ್‌ನಿಂದ ಹೊಗೆಸೊಪ್ಪಿನ ವ್ಯವಹಾರದಲ್ಲಿ ಹಾಗೂ ಎಕ್ಸೈಜ್‌ನಿಂದ ಬರತಕ್ಕ ಆದಾಯವನ್ನು ತಾಲ್ಲೂಕು ಬೋರ್ಡುಗಳಿಗೆ ಮತ್ತು ಪಂಚಾಯಿತಿಗಳಿಗೆ ಬರುವಂತೆ ಮಾಡಿದರೆ, ಅಂದರೆ ಕೊನೇಪಕ್ಷ ಕೆಲವು ಭಾಗಗಳಿಗಾದರೂ ತೆರಿಗೆಯನ್ನು ಹಾಕತಕ್ಕ ಅವಕಾಶವನ್ನು ಮಾಡಿಕೊಟ್ಟರೆ ಗ್ರಾಮಾಭಿವೃದ್ಧಿ ಕಾರ್ಯ ಕೈಗೂಡಬಹುದೆಂಬ ಭಾವನೆಯಿಂದ ಈ ಎಲ್ಲ ಬಾಬುಗಳಿಂದ ಬರತಕ್ಕ ವರಮಾನದ ಜೊತೆಗೆ ಮಿಲ್ಲುಗಳಿಗೆ ಹಾಕತಕ್ಕ ಶುಲ್ಕವನ್ನು ಹೆಚ್ಚಿಸುವ ಅಂಶಗಳು ಒಳಗೊಂಡಂತೆ ಒಂದು ತಿದ್ದುಪಡಿಯನ್ನು ಮುಂದಿನ ಸಭೆಯಲ್ಲಿ ತಂದು ಆ ಮೂಲಕ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚು ಹಣವನ್ನು ಒದಗಿಸತಕ್ಕ ಏರ್ಪಾಡನ್ನು ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಒಂದು ಪಂಚಾಯಿತಿಯನ್ನು ನೋಡಿದರೂ ಕೂಡ ಅದಕ್ಕೆ ಇವತ್ತಿನ ದಿವಸ ಒಂದು ಭವನ ಇಲ್ಲದಿರುವುದನ್ನು ಕಾಣುತ್ತೇವೆ, ಇದನ್ನು ಕಳೆದ ಅಧಿವೇಶನದಲ್ಲಿ ಕೂಡ ನಾನು ಹೇಳಿದ್ದೇನೆ ಪ್ರತಿಯೊಂದು ಹಳ್ಳಿಯಲ್ಲೂ ಒಂದು ಪಂಚಾಯಿತಿ ಭವನ ಮತ್ತು ಒಂದು ಸಹಕಾರ ಸಂಘ ಇರಬೇಕೆಂದು ಹೇಳಿದ್ದೇನೆ. ಮಾನ್ಯ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಿದ್ದಂತಹ ಸಂದರ್ಭದಲ್ಲಿ ಕೂಡ ಪ್ರತಿಯೊಂದು ಕಡೆಯೂ ಪಂಚಾಯಿತಿ ಭವನಗಳು ಅವಶ್ಯಕವಾಗಿ ಆಗಬೇಕೆಂದು ಹೇಳಿದ್ದೇನೆ. ಯಾವ ಅಧಿಕಾರಿಗಳಾಗಲೀ, ಶಾಸಕರಾಗಲೀ ಅಥವಾ ಪಂಚಾಯಿತಿಯ ಸದಸ್ಯರುಗಳಾಗಲಿ ಒಂದು ಮೀಟಿಂಗನ್ನು ಮಾಡಬೇಕೆಂದರೆ ಯಾರದ್ದೋ ಮನೆಯಲ್ಲೋ ಅಥವಾ ದೇವಸ್ಥಾನದಲ್ಲೋ ಮಾಡಬೇಕಾಗಿದೆ. ಕಾರ್ಯದರ್ಶಿ ಪುಸ್ತಕಗಳನ್ನು ಎಲ್ಲೋ ಇಟ್ಟುಕೊಂಡಿರುತ್ತಾನೆ, ಅಧ್ಯಕ್ಷರು ಎಲ್ಲೋ ಇರುತ್ತಾರೆ. ಆದ್ದರಿಂದ ಆ ಒಂದು ವಹಿವಾಟು ಏನು ನಡೆಯುತ್ತದೆ ಅದೆಲ್ಲ ಪಂಚಾಯಿತಿಯ ಭವನದಲ್ಲೇ ಇದ್ದರೆ ಯಾವ ಅಧಿಕಾರಿಗಳು ಇನ್ಸ್‌ಪೆಕ್ಷನ್ನಿಗೆ ಬಂದರೂ ಅದನ್ನು ನೋಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಈ ಒಂದು ಕಾರ್ಯವನ್ನು ತಕ್ಷಣ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಜೊತೆಗೆ ಇದಕ್ಕೆ ಒಂದು ಪ್ರತ್ಯೇಕ ಡೈರೆಕ್ಟರೇಟ್ ಇರಬೇಕೆಂದು ಈಗಾಗಲೇ ಮಾತನಾಡಿದ ಅನೇಕ ಸದಸ್ಯರು (ಹೆಚ್ಚೂ ಕಡಿಮೆ ಎಲ್ಲ ಸದಸ್ಯರೂ) ಹೇಳಿದ್ದಾರೆ, ಇದನ್ನು ಪುಷ್ಟೀಕರಿಸುತ್ತಾ, ಎಲ್ಲ ಇಲಾಖೆಗಳಿಗೂ ಅವರದೇ ಆದ ಒಂದು ಡೈರೆಕ್ಟರೇಟ್ ಇರುವ ಹಾಗೆ ಗ್ರಾಮಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಡೈರೆಕ್ಟರೇಟ್ ಇಲ್ಲದಿರುವುದು ತುಂಬ ವಿಷಾದನೀಯವೆಂದು ಹೇಳುತ್ತೇನೆ. ನಮ್ಮ ನೆರೆ ರಾಜ್ಯಗಳಾದ ತಮಿಳ್ನಾಡಿನಲ್ಲಿ ಹಾಗೂ ಕೇರಳದಲ್ಲಿ ಅದಕ್ಕೆ ಪ್ರತ್ಯೇಕವಾದ ಡೈರೆಕ್ಟರೇಟ್ ಇದೆ; ಡೆವಲಪ್‌ಮೆಂಟ್ ಡೈರೆಕ್ಟರೇಟ್ ಇದೆ. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಮಾಡಿದರೆ, ಇವತ್ತು ನಮ್ಮ ರಾಷ್ಟ್ರದಲ್ಲಿ ಹಳ್ಳಿಗಳ ಅಭಿವೃದ್ಧಿಯಾಗಬೇಕು, ನಮ್ಮ ನಾಡಿನ ಅಭಿವೃದ್ಧಿಯಾಗಬೇಕು, ಪಂಚಾಯಿತಿ ಮಟ್ಟದಲ್ಲಿ ಅಭಿವೃದ್ಧಿಯಾಗಬೇಕೆಂದು ಕನಸನ್ನು ಏನು ಕಾಣುತ್ತಿದ್ದೇವೆ ಅದು ನನಸಾಗುತ್ತದೆ. ಇವತ್ತಿನ ದಿವಸ ಗ್ರಾಮಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಹಾಗೆಪ್ರತ್ಯೇಕವಾಗಿ ಒಂದು ಡೈರೆಕ್ಟರೇಟ್ ಆದರೆ ಅದಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ಕೆಲವು ಕಡೆ ೨-೩ ಪಂಚಾಯಿತಿಗಳಿಗೆ ಒಬ್ಬೊಬ್ಬ ವಿಲೇಜ್ ಅಕೌಂಟೆಂಟನ್ನು ಮತ್ತೆ ಕೆಲವು ಕಡೆ ಒಂದೊಂದು ಪಂಚಾಯಿತಿಗೆ ಒಬ್ಬೊಬ್ಬ ವಿಲೇಜ್ ಅಕೌಂಟೆಂಟನ್ನು ಹಾಕುತ್ತಿದ್ದಾರೆ. ಇದರಲ್ಲೇನು ಯಾರ ಕೈವಾಡವೂ ಇಲ್ಲ. ಆ ವಿಲೇಜ್ ಅಕೌಂಟೆಂಟ್ ಬಂದರೂ ಬಂದರೂ ಬರಬಹುದು. ಇಲ್ಲದಿದ್ದರೆ ತಹಶೀಲ್ದಾರರನ್ನು ಸರಿಗಟ್ಟು ಮಾಡಿಕೊಂಡು ಸಂಬಳ ತೆಗೆದುಕೊಳ್ಳಬಹುದು. ಅವರ ಮೇಲೆ ಪಂಚಾಯಿತಿಯ ಅಧ್ಯಕ್ಷರ ಹತೋಟಿ ಇರುವುದಿಲ್ಲ ಮತ್ತು ಬಿ.ಡಿ.ಒ. ಅವರ ಹತೋಟಿಯೂ ಇರುವುದಿಲ್ಲ. ಏಕೆಂದರೆ ಅವನು ತಹಶೀಲ್ದಾರರ ಕಂಟ್ರೋಲಿನಲ್ಲಿರುತ್ತಾನೆ. ಅವನು ಯಾವತ್ತೂ ಬಂದರೂ ಕಂದಾಯ ವಸೂಲ್ಮಾಡುವುದು ಅವನ ಮುಖ್ಯ ಗುರಿಯಾಗಿರುತ್ತದೆ. ಅವನಿಗೆ ಬೇರೆ ವ್ಯವಹಾರಗಳ ಕಡೆ ಅಷ್ಟು ಆಸಕ್ತಿ ಇರುವುದಿಲ್ಲ. ಅವನಿಗೆ ಅಧಿಕಾರ ಇರತಕ್ಕದ್ದು, ಅವನನ್ನು ಕಂಟ್ರೋಲ್ ಮಾಡತಕ್ಕದ್ದು. ಸಂಬಳ ಕೊಡತಕ್ಕದ್ದು ಎಲ್ಲ ಕಂದಾಯ ಇಲಾಖೆಯೇ ಆಗಿರುವುದರಿಂದ ಆ ಇಲಾಖೆಯ ಬಗ್ಗೆ ಅವನಿಗೆ ಹೆಚ್ಚಿನ ಆಸಕ್ತಿ, ಉತ್ಸಾಹ ಇರುತ್ತದೆಯೇ ವಿನಹ ಗ್ರಾಮಾಭಿವೃದ್ಧಿಯ ಕಡೆಗಾಗಲೀ ಅಥವಾ ಪಂಚಾಯಿತಿಯ ಅಭಿವೃದ್ಧಿ ಕಡೆಗಾಗಲೀ ಗಮನ ಇರುವುದಿಲ್ಲ. ಆದುದ

ರಿಂದ, ಈ ಸಂದರ್ಭದಲ್ಲಿ ನನ್ನ ಒಂದು ಸಲಹೆ ಏನೆಂದರೆ, ಇವತ್ತಿನ ದಿವಸ ಬೇಕಾದಷ್ಟು ಮಂದಿ ನಿರುದ್ಯೋಗ ಪದವೀಧರರು ಇದ್ದಾರೆ, ಅವರನ್ನು ಸ್ಟೈಪಂಡರಿ ಯೋಜನೆಯಲ್ಲಿ ಪ್ರತಿಯೊಂದು ಪಂಚಾಯಿತಿಗೂ ಒಬ್ಬೊಬ್ಬರು ಕಾರ್ಯದರ್ಶಿಗಳಂತೆ ನೇಮಿಸಿ ಎಲ್ಲರನ್ನು ತಮ್ಮ ಹತೋಟಿಯಲ್ಲಿಟ್ಟು ಕೊಳ್ಳತಕ್ಕ ಯೋಜನೆಯನ್ನು ಮಾಡಬೇಕೆಂದು ಹೇಳುತ್ತೇನೆ. ಇನ್ನು ತಾಲ್ಲೂಕು ಬೋರ್ಡ್ ಬಗ್ಗೆ ಹೇಳುವುದಾದರೆ, ತಾಲ್ಲೂಕು ಬೋರ್ಡು ಕೂಡ ತನ್ನ ಕಾಲಮೇಲೆ ನಿಲ್ಲಬೇಕೆಂಬ ಮಾತನ್ನು ಎಲ್ಲ ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸರ್ಕಾರ ಯಾವ ರೀತಿ ಇದೆಯೋ ಅದೇ ರೀತಿ ತಾಲ್ಲೂಕು ಮಟ್ಟದಲ್ಲಿ ಕೂಡ ತಾಲ್ಲೂಕು ಬೋರ್ಡು ಸರ್ಕಾರದ ಒಂದು ಅಂಗ.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸಚಿವರು ಉತ್ತರ ಕೊಡಲಿ.

ಶ್ರೀ ಎ. ಜಿ. ಕೊಡಗಿ.—ನಾಳೆಗೆ ಮುಂದುವರಿಸಬಹುದು.

ಶ್ರೀ ಕಾಳಮರಿಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಯಾವ ರೀತಿ ಸರ್ಕಾರ ಎಂದು ಇದೆಯೋ ಹಾಗೆಯೇ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಇವೆ. ಈ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಪರಿಸ್ಥಿತಿ ಏನಾಗಿದೆ ಎಂಬುದನ್ನು ಕೆಲವು ಮಾತುಗಳಲ್ಲಿ ಹೇಳಬಯಸುತ್ತೇನೆ. ತಾಲ್ಲೂಕು ಬೋರ್ಡ್‌ಗಳ ಅಧೀನದಲ್ಲಿ ಬರುವ ರಸ್ತೆಗಳ ವ್ಯವಸ್ಥೆಯನ್ನು ತಾಲ್ಲೂಕು ಬೋರ್ಡ್‌ನವರೇ ನೋಡಿ ಕೊಳ್ಳಬೇಕೆಂದಾದರೆ, ನಾನು ಹೇಳುತ್ತೇನೆ, ಯಾವ ರಸ್ತೆಗಳ ಕೆಲಸವೂ ಆಗುವುದಿಲ್ಲ. ಇದು ತಾಲ್ಲೂಕು ಬೋರ್ಡಿನಿಂದ ನಿರ್ವಹಿಸತಕ್ಕ ಕೆಲಸವಲ್ಲ. ತಾಲ್ಲೂಕು ಬೋರ್ಡಿನಲ್ಲಿ ಒಬ್ಬರೇ ಇಂಜನಿಯರ್ ಇರುತ್ತಾರೆ. ಅವರಿಗೆ ಸಾಕಷ್ಟು ಕೆಲಸಗಳೂ ಇರುತ್ತವೆ. ಜನತಾ ಗೃಹಗಳನ್ನು ನೋಡಬೇಕು, ಬೇರೆ ರಸ್ತೆ ನಿರ್ಮಾಣ ಗಳ ಕಡೆ ನೋಡಬೇಕು...

ಒಬ್ಬ ಸದಸ್ಯರು.—ಈಗ ಸ್ಟೇ ಮಾಡಿದ್ದಾರೆ.

ಶ್ರೀ ಕಾಳಮರಿಗೌಡ.—ಸ್ಟೇ ಮಾಡಿರತಕ್ಕದ್ದು ನನಗೆ ಗೊತ್ತಿದೆ. ಅದನ್ನು ವಾಪಸ್ಸು ಪಡೆಯಿ ಲೆಂದು ನಾನು ಹೇಳುತ್ತಿದ್ದೇನೆ ತಾಲ್ಲೂಕು ಬೋರ್ಡ್ ವ್ಯಾಪ್ತಿಯಿಂದ ಅದನ್ನು ಸಂಪೂರ್ಣವಾಗಿ ವಪಸ್ಸು ಪಡೆದು ಲೋಕೋಪಯೋಗಿ ಇಲಾಖೆಗೆ ವಹಿಸಕೊಡಬೇಕೆಂದು ಹೇಳುತ್ತೇನೆ.

ಕೆರೆಗಳ ನಿರ್ಮಾಣ ವಿಚಾರದಲ್ಲೂ ಹೀಗೇ ಆಗಿದೆ. ಕೆಲವು ತಾಲ್ಲೂಕು ಬೋರ್ಡಿನವರು ಕೆರೆ ನಿರ್ಮಾಣ ಕಾಮಗಾರಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಅವರಲ್ಲಿ ಸಾಕಷ್ಟು ಹಣವಿಲ್ಲ. ಸರ್ಕಾರದಿಂದ ಸುಮಾರು ೨–೩ ಸಾವಿರ ರೂಪಾಯಿ ಬರಬಹುದು. ಅದರಿಂದ ಕೆರೆ ನಿರ್ಮಾಣ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಹಣ ಕೊಟ್ಟು ಮಾಡಿಸುವುದಾದರೆ ಬಹಳ ಸಂತೋಷ. ಆದರೆ, ಇದು ಆಗುತ್ತಾ ಇಲ್ಲ.

ಉದ್ಯೋಗ ದೃಢೀಕರಣ ಯೋಜನೆಯಿಂದಾಗಿ ತಾಲ್ಲೂಕು ಬೋರ್ಡುಗಳಿಗೆ ಈಗ ಜೀವಕಳೆ ಬಂದಿದೆ. ಈ ಯೋಜನೆಯಲ್ಲಿ ಕೆಲವು ತಾಲ್ಲೂಕುಗಳಲ್ಲಿ ದುರ್ವ್ಯವಹಾರಗಳು ಆಗಿರಬಹುದು. ಇಲ್ಲವೆಂದು ಹೇಳುವುದಿಲ್ಲ. ಈ ಯೋಜನೆಯಿಂದಾಗಿ ಪ್ರತಿಯೊಂದು ಗ್ರಾಮದಲ್ಲೂ ಸ್ವಲ್ಪಮಟ್ಟಿಗೆ ಜಾಗೃತಿ ಉಂಟಾಗಿದೆ, ಶಕ್ತಿ ಬಂದಿದೆ. ಗ್ರಾಮ ಮಟ್ಟದಲ್ಲಿ ಅಭಿವೃದ್ಧಿ ಕಾರ್ಯಗಳಾಗುತ್ತಿವೆ. ಪ್ರತಿ ಯೊಂದು ಹಳ್ಳಿಯಲ್ಲೂ ರಸ್ತೆ ಕಾರ್ಯವೋ, ಒಳಚರಂಡಿ ಕಾರ್ಯವೋ–ಯಾವುದೋ ಒಂದು ನಡೆಯುತ್ತಿರು ತ್ತದೆ. ತಾಲ್ಲೂಕು ಬೋರ್ಡುಗಳ ಜೀವಸಹಿತ ಇವೆ, ಅವು ಅಭಿವೃದ್ಧಿ ಕೆಲಸ ಮಾಡುತ್ತಿವೆ ಎನ್ನುವ ಭಾವನೆ ಜನರಲ್ಲಿ ಬಂದಿದೆ. ಈ ಯೋಜನೆಯಲ್ಲಿ ಕೆಲವು ಕಡೆ ದುರುಪಯೋಗವಾಗಿದೆ ಎಂಬ ಒಂದೇ ಒಂದು ಕಾರಣಕ್ಕಾಗಿ, ಮುಂದೆ ಕೊಡತಕ್ಕ ಗ್ರಾಂಟನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿರುವುದು ನ್ಯಾಯ ವಲ್ಲ. ದುರ್ವ್ಯವಹಾರವಾಗಿರುವ ಕಡೆಗಳಲ್ಲಿ ತನಿಖೆ ಮಾಡಿ, ಸೂಕ್ತ ಕ್ರಮ ಕೈಗೊಳ್ಳಬೇಕು. ಆದರೆ, ಯೋಜನೆ ಮಾತ್ರ ಮುಂದುವರಿಯಬೇಕು. ಇದು ನೂರು ದಿನದ ಯೋಜನೆ. ಅಷ್ಟರಲ್ಲಿ, ಕೆರೆ ಕಟ್ಟೆ ಗಳ ದುರಸ್ತು ಮತ್ತು ರಸ್ತೆಗಳ ನಿರ್ಮಾಣ ಅಥವಾ ದುರಸ್ತು ಕಾರ್ಯವನ್ನು ಮುಗಿಸಬೇಕೆಂದು ಹೇಳುತ್ತಾರೆ. ಇದರಿಂದ, ನಿರ್ದಿಷ್ಟ ಕೆಲಸಕಾರ್ಯಗಳನ್ನು ನೂರು ದಿವಸದೊಳಗೆ ಮುಗಿಸಿ ಸರ್ಕಾರ ಕೊಟ್ಟಿರತಕ್ಕ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ.

ಜನಾರೋಗ್ಯ ಖಾತೆ ಬಗ್ಗೆ ಸಾಕಷ್ಟು ಚರ್ಚೆ ಮಾಡಲಾಗಿದೆ. ಕಳೆದ ವರ್ಷ ಇದೇ ಸದನದಲ್ಲಿ, [illegible]ಟ್ಟಿ ಹ್ಯಾಂಡ್ ಕೆಟ್ಟು ಹೋಯಿತು, ಇಲ್ಲಿ ಕುಡಿಯಲಿಕ್ಕೆ ನೀರಿಲ್ಲ ಎನ್ನುವ ಮಾತುಗಳು ದಿನನಿತ್ಯ ಕೇಳಿ ಬರುತ್ತಿದ್ದವು. ಆದರೆ, ಈ ವರ್ಷ ಅಂತಹ ವಾತಾವರಣ ಕಂಡುಬರುತ್ತಿಲ್ಲ. ಎಲ್ಲಾ ಕಡೆ ವ್ಯವಸ್ಥೆ ಸರಿಯಾಗಿರುವುದು ಮಾನ್ಯ ರಾಮಯ್ಯನವರ ದಕ್ಷತೆಗೆ ಕಾರಣವಿರಬಹುದು ಅಥವಾ ಸಂಬಂಧಪಟ್ಟ ಮುಖ್ಯ ಇಂಜಿನಿಯರ್ ಅವರು ಸಾಕಷ್ಟು ಶ್ರಮವಹಿಸಿ ಆಸಕ್ತಿಯಿಂದ ಕೆಲಸ ಮಾಡಿರಬಹುದು. ಕಳೆದ ವರ್ಷ ಕೊಳವೆ ಬಾಡಿಗಳ ಕೈ ಪಂಪುಗಳು ಕೆಟ್ಟು ಹೋಗಿವೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾಗ, ಮಾನ್ಯ ಸಚಿವರೂ ಸಹ ಅದನ್ನು ಒಪ್ಪಿಕೊಳ್ಳುತ್ತಿದ್ದರು. ಸರ್ಕಾರದ ವರದಿ ಪ್ರಕಾರ ಸುಮಾರು ೨೨ ಸಾವಿರ ಕೊಳವೆ ಬಾವಿಗಳ ಕೈ ಪಂಪುಗಳು ಕೆಟ್ಟುಹೋಗಿದ್ದವು. ಈಗದನ್ನು ದುರಸ್ತು ಮಾಡಲಾಗಿದೆ ಎಂದು ಹೇಳಿರುವುದು ಬಹಳ ಸಂತೋಷದಾಯಕವಾದುದು. ಇವುಗಳನ್ನು ಒಂದು ಸಲ ದುರಸ್ತು ಮಾಡಿದರೆ ಕನಿಷ್ಟ ಇನ್ನು ಒಂದು ವರ್ಷ ಕೆಡದೆ ಇರತಕ್ಕ ಹಾಗೆ ಇಡುವ ವ್ಯವಸ್ಥೆ ಇರಬೇಕು. ದುರಸ್ತು ಮಾಡಿ ಸ್ವಲ್ಪ ಹೊತ್ತಿಗೆ ಮತ್ತೆ ಕೆಟ್ಟುಹೋಗುವ ಪರಿಸ್ಥಿತಿ ಇರಬಾರದು. ಇಂತಹ ವರದಿಗಳು ಸಾಮಾನ್ಯವಾಗಿ ಹಿಂದಿನ ವರ್ಷ ಕೇಳಿಬರುತ್ತಿದ್ದವು. ಆದರೆ, ಈಗ ಅಂತಹ ಪ್ರಸಂಗಗಳು ಬರುತ್ತಿಲ್ಲ.

ಶ್ರೀ ಶಿವಪ್ಪ.—ಈಗ ದುರಸ್ತನ್ನೇ ಮಾಡುತ್ತಿಲ್ಲ.

ಶ್ರೀ ಕಾಳಮರಿಗೌಡ.—ಈಗ ಹಾಕುತ್ತಿರುವ ಹ್ಯಾಂಡ್ಸ್‌ಗಳು ವರ್ಷಗಟ್ಟಲೆ ಬರುತ್ತಿವೆ. ಆದರೆ, ಹಿಂದೆ ಹಾಕುತ್ತಿದ್ದ ಹ್ಯಾಂಡ್ಸ್‌ಗಳು ಸ್ವಲ್ಪ ದಿವಸದಲ್ಲೇ ಕೆಟ್ಟುಹೋಗುತ್ತಿದ್ದವು. ಹಿಂದೆ ಯಾರೋ ಒಬ್ಬ ಕಂಟ್ರಾಕ್ಟರ್ ಕೊಟ್ಟ ಹ್ಯಾಂಡ್ಸ್‌ಗಳನ್ನು ತಂದು ಹಾಕುತ್ತಿದ್ದರು. ಇದರಲ್ಲಿ ಬಹುಶಃ ದುರ್ವ್ಯವಹಾರ ಅಥವಾ ಗೋಲ್ ಮಾಲ್ ನಡೆಯುತ್ತಿತ್ತೋ ಏನೋ. ಆದುದರಿಂದ, ದಯುವಿಟ್ಟು ಹಿಂದೆ ಅಳವಡಿಸುತ್ತಿದ್ದ ಹ್ಯಾಂಡ್ಸ್‌ಗಳನ್ನು ಕೈಬಿಟ್ಟು, ಇತ್ತೀಚೆಗೆ ಹೊಸದಾಗಿ ಬರುತ್ತಿರುವ ಹ್ಯಾಂಡ್ಸ್‌ಗಳನ್ನೇ ಅಳವಡಿಸಬೇಕೆಂದು ಹೇಳುತ್ತೇನೆ. ಈಗ ಒಂದೊಂದು ಸಬ್ ಡಿವಿಜನ್‌ಗೆ ಒಬ್ಬೊಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರನ್ನು ಕೊಡಲಾಗಿದೆ. ಅದರ ಬದಲು ಒಂದೊಂದು ತಾಲ್ಲೂಕು ಬೋರ್ಡ್‌ಗೆ ಒಬ್ಬೊಬ್ಬ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರನ್ನು ಕೊಟ್ಟು, ಅವರ ಜೊತೆಗೆ ಒಬ್ಬ ಮೆಕ್ಯಾನಿಕ್‌ನನ್ನೂ ನೇಮಿಸಬೇಕೆಂದು ಹೇಳುತ್ತೇನೆ. ಈಗ ಜಿಲ್ಲೆಗೊಂದು ಮೊಬೈಲ್ ಯೂನಿಟ್ ಮಾಡಲಾಗಿದೆ. ಇನ್ನು ತಾಲ್ಲೂಕಿಗೊಂದು ಮೊಬೈಲ್ ಯೂನಿಟ್ ಮಾಡುವುದು ಯಾವಾಗ ? ಈಗ ನಿರುದ್ಯೋಗಿ ಪದವೀಧರರನ್ನು ಸ್ಟೈಫಂಡರಿ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ. ಅವರಿಗೆ ಕೊಳವೆ ಬಾವಿಗಳ ಕೈಪಂಪುಗಳ ದುರಸ್ತು ಬಗ್ಗೆ ತರಬೇತಿ ಕೊಟ್ಟು, ಅವರನ್ನು ಈ ಕೆಲಸಕ್ಕೆ ನಿಯೋಗಿಸಬೇಕೆಂದು ಸಲಹೆ ಮಾಡಬಯಸುತ್ತೇನೆ.

ಗ್ರಾಮಾಂತರ ನೀರು ಸರಬರಾಜು ಯೋಜನೆ ಬಹಳ ಉತ್ತಮವಾದ ಕಾರ್ಯಕ್ರಮ. ಈ ಯೋಜನೆಯಲ್ಲಿ ನನ್ನ ತಾಲ್ಲೂಕಿನ ನಾಲ್ಕೈದು ಹಳ್ಳಿಗಳಿಗೆ ಡೈರೆಕ್ಟ್ ಪಂಪುಗಳ ವ್ಯವಸ್ಥೆ ಮೂಲಕ ನೀರು ಸರಬರಾಜು ಮಾಡಿದ್ದಾರೆ. ಆದರೆ, ಇದು ನಾಲ್ಕೈದು ದಿವಸಗಳಿಗೊಮ್ಮೆ ಕೆಟ್ಟು ಹೋಗುತ್ತಿರುತ್ತವೆ. ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸರಿಯಾಗಿ ಒಂದು ತಿಂಗಳು ನೀರು ಸರಬರಾಜಾಗಲಿಲ್ಲವೆಂದರೆ, ಏನು ಪ್ರಯೋಜನ ? ಇದರ ಬದಲು ಓವರ್ ಹೆಡ್ ಟ್ಯಾಂಕುಗಳನ್ನು ಕಟ್ಟಿ ಅವುಗಳ ಮೂಲಕ ನೀರು ಸರಬರಾಜು ಮಾಡಿದರೆ ಬಹಳ ಒಳ್ಳೆಯದಾಗುತ್ತದೆ. ಡೈರೆಕ್ಟ್ ಪಂಪಿಂಗ್ ಸಿಸ್ಟಂನ್ನು ಕೈಬಿಡ[illegible]ು, ಇ[illegible]ದ ಪ್ರಯೋಜನವಾಗುವುದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಕಾಳಮರಿಗೌಡ.—ಇನ್ನೊಂದು ಮಾತನ್ನು ಹೇಳಿ. ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಎಚ್. ಪಟೇಲ್.—ನಿಮ್ಮ ಪಂಪ್ ಸರಿಯಾಗಿ ಕೆಲಸ ಮಾಡದಿದ್ದರೆ ಇಂದೇ ನಿಮ್ಮ ಗೂಳಪ್ಪನವರನ್ನು ಕರೆದುಕೊಂಡು ಹೋಗಿ, ಅವರು ರಿಪೇರಿ ಮಾಡುತ್ತಾರೆ.

(ನಗು)

ಶ್ರೀ ಕಾಳಮರಿಗೌಡ.--ನಮ್ಮ ರಾಮಯ್ಯನವರ ನೇತೃತ್ವದಲ್ಲಿ ಈ ಇಲಾಖೆಯು ಗ್ರಾಮಾಭಿವೃದ್ಧಿಯ ಕಡೆ ಹೆಚ್ಚಿನ ಗಮನಹರಿಸಿ, ಹಳ್ಳಿಗಾಡುಗಳ ಅಭಿವೃದ್ಧಿ ಕೆಲಸ ಕಾರ್ಯಗಳು ನೆರವೇರಿ, ನನ್ನ ರಾಮರಾಜ್ಯದ ಕನಸು ನನಸಾಗಲೆಂದು ಹಾರೈಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.--ಇಂದಿಗೆ ಗ್ರಾಮಾಭಿವೃದ್ಧಿ ಖಾತೆ ಬೇಡಿಕೆ ಮೇಲಿನ ಚರ್ಚೆ ಮುಗಿಯಿತು. ನಾಳೆ ಮಾನ್ಯ ಸಚಿವರು ಉತ್ತರ ನೀಡುವರು.

ಈಗ ಸಭೆಯು ಎದ್ದು ಮತ್ತೆ ನಾಳೆ ಬೆಳಿಗ್ಗೆ ೯-೦೦ ಗಂಟೆಗೆ ಸೇರಲಿದೆ.

*The House adjourned at fifteen minutes Past Seven of the Clock to meet again at Nine of the Clock on Friday, 25th July 1980.*

WD 2869